ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 1 ಸಂಚಿಕೆ 17

ಸೆಪ್ಟೆಂಬರ್ 23, 2007

ಕನ್ನಡ ವಾರಪತ್ರಿಕೆ

ರೂ. 5/-

ಪೇಜ್ 8

ಅಂಗವಿಕಲ-ಶಿಕ್ಷಕರ ಹಣ ದೋಚುವ ಎನ್‌ಜಿಓಗಳು



ಪೇಜ್ 3



ಭೂ ಕಬಳಿಸಿದ 'ಬೃಹತ್' ಸಚಿವ



ಕುಂದಾಪುರ ಪುರಸಭೆ ದಿವಾಳಿಯೇಳಿಸಿದ ಕಾಂಗ್ರೆಸ್



ಪೇಜ್ 6

ಸಂಸದೀಯ ಕಲಾಪಗಳಿಗೆ ಬಿಜೆಪಿಯ ಅಡ್ಡಿಯೇಕೆ?



ವಿಲನ್‌ಗಳ ವಿಚಿತ್ರ ಲೋಕ

ನೀವು ಬುಶ್ ಜೊತೆಗೋ, ದೇಶದ ಜನರ ಜೊತೆಗೋ.....

ಇದ್ದದ್ದು ಇದ್ದಾಂಗ....

ಬ್ರಿಟನ್ನಿನ ಬ್ಲೇರ್ ರಾಜಿನಾಮೆ ನೀಡಿದ್ದಾರೆ. ಜಪಾನಿನ ಅಬೆ ಹೊರಟೇಹೋದರು. ಆಸ್ಟ್ರೇಲಿಯಾದ ಹೊವಾರ್ಡ್ ರಾಜಿನಾಮೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಮನಮೋಹನ್ ಸಿಂಗ್‌ರವರು ತಮ್ಮ ಮಿತ್ರರನ್ನು ಆಯ್ಕೆ ಮಾಡಿಕೊಳ್ಳುವಾಗ ಎಚ್ಚರಿಂದ ಇರಲೇಬೇಕಾಗುತ್ತದೆ. ಅಮೆರಿಕಾ ದೇಶದೊಂದಿಗೆ ತುಂಬಾ ನಿಕಟವಿರುವ ಇವರು ಇಂತಹ ಬೆಲೆ ತೆರುತ್ತಿದ್ದಾರೆ.

- **ಪ್ರಕಾಶ್ ಕಾರಟ್**, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ

★

ಬಹುರಾಷ್ಟ್ರೀಯ ಕಂಪನಿಗಳು ಮತ್ತು ಅಮೇರಿಕಾದಂಥ ಸಾಮ್ರಾಜ್ಯಶಾಹಿ ದೇಶಗಳು ನಮ್ಮನೆಲ, ಜಲ, ಸಂಸ್ಕೃತಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ಸಾರ್ವಭೌಮತ್ವದ ಮೇಲೆ ಹಕ್ಕು ಸಾಧಿಸಿ ಭಾರತವನ್ನು ತಮ್ಮ ನವವಸಾಹತುಶಾಹಿಯ ಕಾಲೋನಿಯಾಗಿ ಮಾಡಿಕೊಳ್ಳ ಹೊರಟ ವಿದ್ಯಮಾನ ಸಂಘ ಪರಿವಾರದವರಲ್ಲಿ ಪ್ರತಿಭಟಿಸುವ ಪ್ರಚೋದನೆ ತುಂಬುವುದಿಲ್ಲ.

- ಕರಾವಳಿ ಅಲೆ ಅಂಕಣದಲ್ಲಿ **ಬಿ.ವಿ.ಸೀತಾರಾಂ.**

★

. ಅಮೆರಿಕಾ ಪರಮಾಣು ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಭಾರತದ ಮೇಲೆ ಹಿಡಿತ ಸಾಧಿಸಲು ಪ್ರಧಾನಿ ಮನಮೋಹನ ಸಿಂಗ್ ಅನುವು ಮಾಡಿಕೊಟ್ಟಿದ್ದಾರೆ. ಅಮೆರಿಕಾ ದುಷ್ಟ ಕೂಟವನ್ನು ಎದುರಿಸಲು ಯುವಜನರು ಸಜ್ಜಾಗಬೇಕಿದೆ'

- **ಡಾ. ಜಿ.ರಾಮಕೃಷ್ಣ**
ಸಂಪಾದಕರು, 'ಹೊಸತು' ಪತ್ರಿಕೆ.

"ಅನೇಕತೆಯಲ್ಲಿ ಏಕತೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ದೇಶಕ್ಕೆ ಕೋಮುಗಲಭೆಗಳು ಕಳಂಕ ತರುತ್ತವೆ. ಸಹನೆ ಮತ್ತು ಸೌಹಾರ್ದದಿಂದ ಬಾಳುವ ತತ್ವಾದರ್ಶಗಳನ್ನೆ ಜನರು ಮರೆತುಬಿಡುತ್ತಾರೆ...... .... ಪರಸ್ಪರರ ಬಗ್ಗೆ ಸಹಾನುಭೂತಿಯಾಗಲಿ ಕಳಕಳಿ ಆಗಲಿ ಇಲ್ಲದಿರುವಾಗ ದೇಶದ ಆರ್ಥಿಕ ವೃದ್ಧಿದರವು ಶೇ. 9 ರಿಂದ ಶೇ 10 ರಷ್ಟಿರುವುದರ ಉಪಯೋಗ ಏನು?

- **ಕುಲದೀಪ್ ನಯ್ಯರ್**
ಪ್ರಜಾವಾಣಿ 'ಅಂತರಂಗ' ಅಂಕಣದಲ್ಲಿ

★

"ಭೂ ಒತ್ತುವರಿ ಬಗ್ಗೆ ನೋಟಿಸ್ ಕೊಟ್ಟಿದ್ದೇವೆ ಎನ್ನುವುದು ದೂರು ದಾಖಲಿಸಿದ್ದೇವೆ ಎನ್ನುವುದು ನಂತರ ಒತ್ತುವರಿದಾರರು ಅಧಿಕಾರಿಗಳನ್ನು ಬಂದು ನೋಡುವುದು.... ಆಮೇಲೆ ಏನಾಗುತ್ತದೆ ಎನ್ನುವುದು ಎಲ್ಲರಿಗೂ ಗೊತ್ತಿದೆ...."


ಎ.ಟಿ.ರಾಮಸ್ವಾಮಿ,
ಭೂ ಕಬಳಿಕೆ ಕುರಿತು ಜಂಟಿ ಸದನ ಸಮಿತಿ ಅಧ್ಯಕ್ಷರು

★

"ಕೆಲಸ ಮಾಡಿದ ದಿನ ಮಾತ್ರ ವೇತನ ಕೊಡುವ ನಿಯಮವನ್ನು ಸಂಸದರಿಗೂ ಅನ್ವಯಿಸುವ ಪ್ರಸ್ತಾಪವನ್ನು ಅವರು ಮುಂದಿಟ್ಟಿದ್ದರು. ಎಡ ಪಕ್ಷಗಳನ್ನು ಹೊರತುಪಡಿಸಿದರೆ ಆಡಳಿತ-ವಿರೋಧ ಪಕ್ಷವೆನ್ನದೆ ಎಲ್ಲರೂ ಇದನ್ನು ವಿರೋಧಿಸಿದರು. ಅಲ್ಲಿಗೆ ಗದ್ದಲವೆಬ್ಬಿಸಿ ಸದನ ಕಲಾಪ ನಡೆಯಲು ಅವಕಾಶ ಕೊಡದಿದ್ದರೆ ಸಂಸದರ ಸಂಬಳ ಮತ್ತು ಭತ್ಯೆಗೆ ಕತ್ತರಿಹಾಕುವ ಪ್ರಯತ್ನವೂ ವಿಫಲವಾಯಿತು..."


- **ಉದಯವಾಣಿ ಸಂಪಾದಕೀಯದಿಂದ**

ಇಎಂಎಸ್ ಭವನ ನಿಧಿ



ಹಿಂದಿನ ಸಂಚಿಕೆಯಿಂದ	**ರೂ. 54,500**
ಎಲ್‌ಐಸಿ ಸಂಗಾತಿಗಳು ಧಾರವಾಡ (ಸಿಪಿಐ(ಎಂ) ಜಿಲ್ಲಾ ಸಮಿತಿ ಮೂಲಕ)	10,000
ಕೆ.ಎಸ್.ರವಿಕುಮಾರ್, ಜೀವ ವಿಮಾ ನಿಗಮ, ಹಾಸನ	1,000
ಕರ್ನಾಟಕ ಪ್ರಾಂತ ರೈತ ಸಂಘದ ಪದಾಧಿಕಾರಿಗಳಿಂದ ಸಂಗ್ರಹ	5,00,000
ಒಟ್ಟು	**ರೂ. 5,65,500**

ಸ್ವಾತಂತ್ರ ಹೋರಾಟಗಾರ ಹಾಗೂ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ ದಿವಂಗತ ಎನ್. ಎಲ್. ಉಪಾಧ್ಯಾಯ ಅವರಿಂದ ಆರಂಭಗೊಂಡ ಏ.ಕೆ.ಗೋಪಾಲನ್ ಮೆಮೋರಿಯಲ್ ಸೋಷಿಯಲ್ ಎಜುಕೇಷನ್ ಟ್ರಸ್ಟ್‌ನಲ್ಲಿ ದಿವಂಗತರಾದ ರಾಮಚಂದ್ರರಾವ್, ಸೂರ್ಯನಾರಾಯಣರಾವ್, ಎನ್.ಕೆ.ಉಪಾಧ್ಯಾಯ, ಸಿ.ನಂಜುಂಡಪ್ಪ ಮೊದಲಾದವರು ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದರು. ಇವರು ರೈತರು, ಕಾರ್ಮಿಕರು ಹಾಗೂ ವಿವಿಧ ಜನ ವಿಭಾಗಗಳ ನಡುವೆ ದುಡಿದವರು. ಇ.ಎಂ.ಎಸ್. ಭವನವನ್ನು ಪೂರ್ಣಗೊಳಿಸುವುದೆಂದರೆ ಈ ಎಲ್ಲಾ ಜನ ನಾಯಕರ ಆಶಯಗಳನ್ನು ಗುರಿಗಳನ್ನು ತಲುಪಲು ಕೆಲಸ ಮಾಡಿದಂತೆ. ಉದಾರವಾಗಿ ಸಹಾಯ ನೀಡಿ. ಉತ್ತಮ ಸಮಾಜ ನಿರ್ಮಾಣಕ್ಕಾಗಿ ಶ್ರಮಿಸಿ.



ಪ್ರಗತಿಯ ಹಂತದಲ್ಲಿರುವ ಎರಡನೇ ಮಾಳಿಗೆ

ಜುಬ್ಬಮುದ್ದು

'ಗೋ ರಕ್ಷಣೆ ಮಾನವೀಯ ಕರ್ತವ್ಯ'

- **ರಾಘವೇಶ್ವರ ಶ್ರೀ**

➜ 'ಮನುಷ್ಯನ ರಕ್ಷಣೆ ಯಾವ ಕರ್ತವ್ಯ ಸ್ವಾಮಿ?'

★

ದೇವೇಗೌಡರ ಹೇಳಿಕೆ ಗುಡುಗು-ಮಿಂಚು ಇದ್ದಹಾಗೆ. ಮಳೆಬಂದೇ ಬರುತ್ತೆ. ಅಧಿಕಾರ ಹಸ್ತಾಂತರ ಆಗೇ ಆಗುತ್ತೆ?

- **ರಾಮಚಂದ್ರೇಗೌಡ**, ಬಿಜೆಪಿ ನಾಯಕ

➜ ಯಾರು ಏನು ಉಗಿದರೂ ಒರೆಸಿಕೊಳ್ಳೋದಕ್ಕೆ ತಯಾರಾಗಿ ಬಿಟ್ಟಿದ್ದೀರಲ್ಲಾ? ಮೆಚ್ಚಬೇಕಾದದ್ದೇ!

★

'ಬೇಷರತ್ ಅಧಿಕಾರ ಹಸ್ತಾಂತರ'

- **ಹೆಚ್.ಡಿ. ದೇವೇಗೌಡ**

ಪ್ರತಿಜ್ಞೆಗಳೆಲ್ಲ ಏನಾದವು ಗೌಡ್ರೆ?

★

ಗುಡಿಸಲುರಹಿತ ಪಟ್ಟಣ ನಿರ್ಮಾಣ - ಸ್ಥಳೀಯ ಚುನಾವಣಾ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಭರವಸೆ

➜ ಆಹಾ ಚಿರನೂತನ ಭರವಸೆ. 60 ವರ್ಷಗಳ ಹಿಂದೆಯೇ ಇದನ್ನೇ ಕೇಳಿದ್ದೆವಲ್ಲಾ ಅಂತಿದೇ ನಮ್ಮಜ್ಜ!!

★

ಅಧಿಕಾರ ಹಸ್ತಾಂತರ : ತಾಳಿ ಕಟ್ಟುವುದೊಂದೇ ಬಾಕಿ

- **ಈಶ್ವರಪ್ಪ**, ಬಿಜೆಪಿ ನಾಯಕರು

➜ ಅನೈತಿಕ ಸಂಬಂಧ ಮಾಡಿ, ಈಗ ತಾಳಿ, ಮದುವೆ ಅಂತೀರಲ್ರಿ

★

'ಬಿಜೆಪಿ ದಲಿತ ವಿರೋಧಿಯಲ್ಲ'

- ಬಿಜೆಪಿ ಶಾಸಕ **ಎಂ.ಪಿ.ಕುಮಾರಸ್ವಾಮಿ**

➜ ಹೀಗೆ ಹೇಳಿಕೊಂಡು ತಿರುಗಬೇಕಾದ ಅಗತ್ಯ ಯಾಕೆ ಬಂತು ಸ್ವಾಮಿ

ಇದು ನಿಮಗೆ ಗೊತ್ತೇ?




☆ 1971ರಲ್ಲಿ ಅಮೇರಿಕಾ ನೌಕಾಪಡೆಯ ಏಳನೇ ಪಡೆ ಬಂಗಾಳಕೊಲ್ಲಿಗೆ ಪ್ರವೇಶಿಸಲಿದೆ ಎಂದಾಗ ಆಗಿನ ಕಾಂಗ್ರೆಸ್ ಪ್ರಧಾನಮಂತ್ರಿ ಅದರ ವಿರುದ್ಧ ದೃಢ ನಿಲುವು ತಳೆದರು. ಇಂದು ಅದೇ ಏಳನೇ ಪಡೆಗೆ ಅದೇ ಬಂಗಾಳ ಕೊಲ್ಲಿಯಲ್ಲಿ ಅದೇ ಕಾಂಗ್ರೆಸ್ ನೇತೃತ್ವದ ಸರಕಾರ ಸುಸ್ವಾಗತ ನೀಡಿದೆ.

☆ ಇರಾಕ್ ಯುದ್ಧದಲ್ಲಿ ಸಾವಿರಾರು ಇರಾಕಿಗಳ ಕಗ್ಗೊಲೆ ಮಾಡಿದ ಅಮೇರಿಕಾದ ಯುದ್ಧ ನೌಕೆಯ ಹೆಸರು ಯುಎಸ್‌ಎಸ್ ನಿಮಿಟ್ಜ್. ಅದಕ್ಕೂ ಬಂಗಾಳ ಕೊಲ್ಲಿಯಲ್ಲಿ ಸುಸ್ವಾಗತ

☆ ಪ್ರಧಾನ ಮಂತ್ರಿಗಳು ಭವಿಷ್ಯದಲ್ಲಿ ಭಾರತ 40,000 ಮೆಗಾವಾಟ್ ಪರಮಾಣು ವಿದ್ಯುತ್ ಉತ್ಪಾದಿಸುವುದು ಈ ಒಪ್ಪಂದದಿಂದ ಸಾಧ್ಯವಾಗುತ್ತದೆ ಎಂದಿದ್ದಾರೆ. ಇದರಲ್ಲಿ 10,000 ಮೆಗಾವಾಟ್ ಭಾರತದ ಸ್ಥಾವರಗಳಿಂದಲೇ ಉತ್ಪಾದನೆಯಾಗುತ್ತದೆ ಎಂದಿಟ್ಟುಕೊಂಡರೂ ಉಳಿದ 30,000 ಮೆಗಾವಾಟ್‌ಗೆ 3,30,000 ಕೋಟಿ ರೂ. ಖರ್ಚಾಗುತ್ತದೆ. ಇಷ್ಟೇ ವಿದ್ಯುತ್ತನ್ನು ಕಲ್ಲಿದ್ದಲು ಬಳಸಿ 1,20,000 ಕೋಟಿ ರೂ.ಗಳಲ್ಲೇ ಉತ್ಪಾದಿಸಬಹುದು; ಅನಿಲ ಅಥವಾ ಜಲಶಕ್ತಿ ಬಳಸಿದರೆ 90,000 ಕೋಟಿ ರೂ.ಗಳಲ್ಲೇ ಉತ್ಪಾದಿಸಬಹುದು! ಪರ್ಯಾಯ ದಾರಿಗಳಿರುವಾಗ ಭಾರತ 2,00,000 ಕೋಟಿ ರೂ.ಗಳನ್ನು ಪರಮಾಣು ವಿದ್ಯುತ್‌ಗಾಗಿ ಖರ್ಚು ಮಾಡುವ ಅಗತ್ಯವಿದೆಯೇ?

☆ ಈ 2,00,000 ಕೋಟಿ ರೂ.ಗಳನ್ನು ಉಳಿಸಿದರೆ ಪೂರ್ಣ ಸುಸಜ್ಜಿತ 100 ಹಾಸಿಗೆಗಳ 25000 ಆಸ್ಪತ್ರೆಗಳನ್ನು ಕಟ್ಟಬಹುದು ಅಥವಾ 2,50,000 ನವೋದಯ ಮಾದರಿಯ (ಪ್ರತಿಯೊಂದರಲ್ಲೂ 100 ವಿದ್ಯಾರ್ಥಿ ಗಳಿರುವ) ಶಾಲೆಗಳನ್ನು ಕಟ್ಟಬಹುದು.



ಸಂಪಾದಕೀಯ

ಸೇತು : ದಿವಾಳಿ ರಾಜಕೀಯ

'ಸೇತು ಸಮುದ್ರಂ' ಎಂಬ ಯೋಜನೆಯನ್ನು ಕೈಬಿಡಬೇಕೆಂದು ಅಲ್ಲಲ್ಲಿ ಪ್ರಚಾರ ನಡೆಸುತ್ತಿದ್ದ ಸಂಘ ಪರಿವಾರ ಈ ವಾರದಲ್ಲಿ ರಸ್ತೆ ತಡೆಯಂತಹ ಕಾರ್ಯಕ್ರಮ ನಡೆಸಿದ್ದು,ಚಳುವಳಿ ಹಬ್ಬಿಸುವ ತನ್ನ ಪ್ರಯತ್ನವನ್ನು ತೀವ್ರಗೊಳಿಸುವ ಉದ್ದೇಶದಲ್ಲೇ. ಭಾರತ ಶ್ರೀಲಂಕಾದ ನಡುವೆ ಸುಮಾರು 300 ಮೀಟರ್‌ಗಳಷ್ಟು ಅಗಲದ 12 ಮೀಟರ್‌ನಷ್ಟು ಆಳದ ಒಂದು ಕಾಲುವೆಯನ್ನು ನಿರ್ಮಿಸುವ ಭಾರತ ಸರ್ಕಾರದ ಯತ್ನವನ್ನು ಸಂಘ ಪರಿವಾರ ತಡೆಯಲು ಹೊರಟಿರುವುದು ಅರ್ಥಹೀನ. ನಮ್ಮೆರಡು ದೇಶಗಳ ನಡುವೆ ಆಡಂಬ್ರಿಡ್ಜ್ ಅಥವಾ ರಾಮಸೇತು ಎಂದು ಕರೆಯಲಾಗುವ ಸೇತುವೆಯಂತಹ ರಚನೆ ಸರಾಗವಾಗಿ ಹಡಗು ಓಡಾಡುವುದಕ್ಕೆ ಅಡ್ಡಿಪಡಿಸುತ್ತಿದೆ. ಒಂದು ಭಾಗದಲ್ಲಿ ಸಮುದ್ರವನ್ನು ಆಳಗೊಳಿಸಿದರೆ ಸುಮಾರು 360 ಮೈಲು ದೂರವನ್ನು 36 ಗಂಟೆ ಗಂಟೆಗಳಲ್ಲಿ ಕ್ರಮಿಸುವುದು ತಪ್ಪುತ್ತದೆ. ಹೀಗಾದಲ್ಲಿ ಭಾರತದ ಆಗ್ನೇಯ ಕರಾವಳಿಯಲ್ಲಿನ ಮನ್ನಾರ್ ಕೊಲ್ಲಿ ಮತ್ತು ಪಾಕ್‌ಕೊಲ್ಲಿ ಪ್ರದೇಶಗಳನ್ನು ಜೋಡಿಸಲಿದೆ. ಸರಿಸುಮಾರು ಹನ್ನೆರಡು ಸಾವಿರ ಟನ್ ಭಾರವನ್ನು ಹೊತ್ತ ಹಡಗುಗಳು ಸರಾಗವಾಗಿ ಸಾಗಲಿವೆ. ಈ ಮೂಲಕ ಕರಾವಳಿ ಪ್ರದೇಶದಲ್ಲಿ ಹೆಚ್ಚಿನ ಅಭಿವೃದ್ಧಿಯ ಸಾಧ್ಯತೆಗಳೂ ಹೆಚ್ಚಲಿದೆ.

ಇಂತಹ ಮಹತ್ವದ ಯೋಜನೆಯೊಂದನ್ನು ವಿರೋಧಿಸುತ್ತಿರುವ ಬಿಜೆಪಿ- ಸಂಘ ಪರಿವಾರದ ವಾದವೇ ವಿಪರ್ಯಾಸಕರ. ಅದರ ವಿರೋಧಕ್ಕೆ ಈಗ ಬಳಸುತ್ತಿರುವುದು ಶ್ರೀರಾಮ ನಿರ್ಮಿಸಿದ ಸೇತುವೆ ಎಂಬುದು. ಆದರೆ ಅಮೇರಿಕಾದ ಬಾಹ್ಯಕಾಶ ಸಂಶೋಧನಾ ಸಂಸ್ಥೆ 'ನಾಸಾ' ವನ್ನು ಒಳಗೊಂಡು, ನಮ್ಮ ದೇಶದ ಹಲವಾರು ವಿಜ್ಞಾನಿಗಳು ಅದು ಮಾನವ ನಿರ್ಮಿತ ಅಲ್ಲವೆಂದೂ, ನೈಸರ್ಗಿಕ ಸಹಜ ಸೃಷ್ಟಿಯೆಂದೂ ಸ್ಪಷ್ಟಪಡಿಸಿದ್ದರೂ ಆದರೆ ಇದನ್ನು ಗಮನಿಸಲು, ಪರಿಗಣಿಸಲು ಆರ್.ಎಸ್.ಎಸ್. ಪರಿವಾರ ಸಿದ್ಧವಿಲ್ಲ. ಇದನ್ನು 'ನಂಬಿಕೆ' ಯ ಆಧಾರದಲ್ಲಿಯೇ ಒಪ್ಪಬೇಕು ಎಂದು ಕೇಸರೀಪಡೆ ವಾದಿಸುವುದು ವಿತಂಡವಾದವೇ ಸರಿ. ಇಂತಹ ವಿತಂಡವಾದ ಅವರಿಗೆ ಹೊಸದೇನಲ್ಲ. ಬಾಬ್ರಿ ಮಸೀದಿ ಇರುವಲ್ಲೇ ರಾಮಹುಟ್ಟಿದ, ಬಾಬಾಬುಡನ್ ಗಿರಿಯಲ್ಲಿನ ದತ್ತ ಪರಂಪರೆ ಎಂಬುದು ದತ್ತಾತ್ರೇಯ ಎಂದಾಗಲೂ ಎಲ್ಲರೂ ನಂಬಬೇಕು ಎಂದೇ ವಾದಿಸಿದಂತೆ.

ಬಹಳ ವಿಚಿತ್ರವೆಂದರೆ. ಈ 'ಸೇತುವೆ'ಯ ನಡುವೆ ಸಮುದ್ರ ಆಳಗೊಳಿಸುವ ಯೋಜನೆಯನ್ನು ಅಂಗೀಕರಿಸಿದ್ದೇ ವಾಜಪೇಯಿಯವರು ಪ್ರಧಾನಿಯಾಗಿದ್ದ ಎನ್.ಡಿ.ಎ. ಸರ್ಕಾರ. ಆಗ ಆಕ್ಷೇಪಿಸದೇ ಅದೇ ಪರಿವಾರ, ಬಿಜೆಪಿ ಪಕ್ಷ ಇಂದು ವಿರೋಧದ ಹುಯಿಲೆಬ್ಬಿಸುತ್ತಿರುವುದು ವಂಚನೆಯೇ ಸರಿ. ಅಂದರೆ ವಾಸ್ತವ ಸ್ಥಿತಿಗಿಂತಲೂ ಆ ಪ್ರಶ್ನೆಯನ್ನು ಯುಪಿಎ ಅಧಿಕಾರದಲ್ಲಿರುವಾಗ ತನ್ನ ಸಂಕುಚಿತ ರಾಜಕೀಯ ಹಿತಾಸಕ್ತಿಯ ದುರ್ಬಳಕೆಗೆ ಬಳಸುವುದೇ ಪರಮೋಚ್ಛ ಎಂದು ಭಾವಿಸಿದೆ. ಆದ್ದರಿಂದಲೇ ಇದಕ್ಕೆ ಧಾರ್ಮಿಕ ಪೌರಾಣಿಕ ಸಂಬಂಧ ಕಲ್ಪಿಸಿ ಜನರ ಮನಸ್ಸನ್ನು ಕದಡಲು ಹೊರಟಿದೆ. ಈ ಸಂಬಂಧ ಸುಬ್ರಮಣ್ಯ ಸ್ವಾಮಿ ಹೂಡಿರುವ ಮೊಕದ್ದಮೆಯಲ್ಲಿ ಭಾರತ ಪ್ರಾಚ್ಯ ಇಲಾಖೆಯು ಸಾಂದರ್ಭಿಕವಾಗಿ ಸ್ವಾಮಿ ಹೇಳಿದಂತೆ ಪುರಾಣಗಳ ಪ್ರಸ್ತಾಪಕ್ಕೆ ಪುರಾವೆಗಳಿಲ್ಲ ಎಂದು ಸಲ್ಲಿಸಿದ ಅಫಿಡವಿಟ್‌ನ್ನು ತಿರುಚಿ ಧಾರ್ಮಿಕ ನಂಬಿಕೆಗಳಿಗೆ ಆಘಾತವಾಗಿದೆಯೆಂದು ಅದು ಮಾನವ ನಿರ್ಮಿತವಲ್ಲವೆಂದೂ, ಹುಯಿಲೆಬ್ಬಿಸಿದ್ದು ಸರಿಯಲ್ಲ. ತನ್ನ ಹೇಳಿಕೆಯನ್ನು ತಪ್ಪಾಗಿ ಬಳಸದಂತೆ ಎಚ್ಚೆತ್ತುಕೊಂಡು ಪುನರ್ ಸಲ್ಲಿಸಲು ಮೊದಲಿನ ಅಫಿಡವಿಟನ್ನು ಹಿಂತೆಗೆದುಕೊಂಡ ಕೇಂದ್ರ ಸರ್ಕಾರದ ಕ್ರಮ ಸಕಾಲಿಕ, ಸೂಕ್ತವಾಗಿದೆ.

ಇಷ್ಟರ ನಡುವೆ ಯೋಜನೆಯೇ ಕೂಡದೆಂದು ದೇಶದಾದ್ಯಂತ ಪ್ರಚಾರ ಪ್ರತಿಭಟನೆ, ನಡೆಸಲು ಸಂಘಪರಿವಾರ ಸಜ್ಜಾಗುವುದು ಅಸಮರ್ಥನೀಯ. ಇಂದು 'ರಾಮಸೇತು' ವಿವಾದ ಬಳಸುತ್ತಿರುವುದು ಅದರ ಕೋಮು ವಿಭಜಕ ರಾಜಕೀಯ ಉದ್ದೇಶಕ್ಕೆ ಬಿಜೆಪಿ ಅಥವಾ ಆರ್.ಎಸ್.ಎಸ್.ಗಳಿಗೆ ಒಂದು ರಚನಾತ್ಮಕ ಅಜೆಂಡಾಗಳೇ ಇಲ್ಲವಾಗಿ ದಿವಾಳಿಯೆದ್ದಿರುವುದನ್ನು ತೋರಿಸುತ್ತದೆ.


ಪುಂಡಾಟಿಕೆಯ ಕೃತ್ಯಗಳು

ಕನ್ನಡದ ಹೆಸರಿನಲ್ಲಿ ಏನೂ ಮಾಡಿದರೂ ನಡೆಯುತ್ತದೆ ಎಂದೇ ಕರ್ನಾಟಕ ರಕ್ಷಣಾ ವೇದಿಕೆಯ ಬಣಗಳು ಭಾವಿಸಿದಂತಿದೆ. ನಿರಂತರವಾಗಿ ನಡೆಸುತ್ತಿರುವ ಅದರ ವಿವಿಧ ಚಟುವಟಿಕೆಗಳು ಒಂದು ಪ್ರಜಾಸತ್ತಾತ್ಮಕ ವಿಧಾನವಾಗಿರದೇ ಪುಂಡಾಡಿಕೆಯ ಸ್ವರೂಪದ್ದಾಗಿವೆ. ಮತ್ತು ಕಾನೂನು, ಸಂವಿಧಾನವನ್ನು ಉಲ್ಲಂಘಿಸಿ, ಕಾನೂನನ್ನೇ ಕೈಗೆತ್ತಿಕೊಂಡು ತಾವೇ ತೀರ್ಮಾನಿಸಿ, ದಂಡನೆಯನ್ನು ಜಾರಿಗೊಳಿಸುತ್ತವೆ. ಇದನ್ನು ಹೋರಾಟ ಎಂದು ಕರೆದುಕೊಳ್ಳುತ್ತಿರುವುದು ನಾಚಿಕೆಗೇಡು. ಇದು ಗೂಂಡಾಗಿರಿ ಅಲ್ಲದೇ ಬೇರೇನೂ ಅಲ್ಲ.

ಮೊನ್ನೆ ರೈಲ್ವೆ ಇಲಾಖೆಯಲ್ಲಿ ಹುದ್ದೆಗಳಿಗೆ ಸಂದರ್ಶನ ಪರೀಕ್ಷೆ ನಡೆದಿರುವಾಗ ಕಾಲೇಜಿನೊಳಕ್ಕೆ ನುಗ್ಗಿದ ಕ.ರ.ವೇ. ಬಣ ಹೊರ ರಾಜ್ಯದ ಅಭ್ಯರ್ಥಿಗಳ ಮೇಲೆ ಹಲ್ಲೆ ನಡೆಸಿ ಓಡಿಸಿದ್ದಾರೆ. ಕಬ್ಬಡಿ ಅಸೋಸಿಯೇಷನ್ ವಾರ್ಷಿಕ ಸಮ್ಮೇಳನದ ಸಂದರ್ಭದಲ್ಲಿ ನುಗ್ಗಿ ಮಸಿ ಬಳಿದು, ಮುಖ್ಯಸ್ಥರಿಗೆ ಬಡಿದಿದ್ದಾರೆ. ಬೆಳಗಾವಿ ಮೇಯರ್ ಪ್ರಕರಣ ಇತ್ಯಾದಿಗಳಾದವು. ಕರವೇ ಈ ಕೃತ್ಯಗಳು ಭಾಷಾಂಧತೆ, ಪ್ರಾದೇಶಿಕತೆಯನ್ನು ಉಂಟು ಮಾಡುವಂತಹವು. ಕನ್ನಡಿಗರಿಗೆ ಉದ್ಯೋಗ ಬೇಕು ನಿಜ, ಆದರೆ ಭಾರತದ ಪ್ರಜೆಗಳಾಗಿರುವ ಉಳಿದವರು ಸ್ಪರ್ಧಿಸುವ ಹಕ್ಕನ್ನು ಕಿತ್ತುಕೊಳ್ಳಲು ಆಸ್ಪದವಿಲ್ಲ. ಕುಗ್ಗುತ್ತಿರುವ ಉದ್ಯೋಗ, ಅದಕ್ಕೆ ಕಾರಣವಾದ ನೀತಿಗಳನ್ನು ಎದುರಿಸದೇ ಇಂತಹ ಅಡ್ಡಹಾದಿ ಹಿಡಿಯುವುದು ನಿರುದ್ಯೋಗಿ ಯುವಜನರಿಗೂ ರಾಜ್ಯದ ಹಿತಕ್ಕೂ ಮಾರಕ. ಅಂತಿಮವಾಗಿ ಕ.ರ.ವೇ. ಕೃತ್ಯಗಳೂ ಕನ್ನಡಿಗರಿಗೆ ಕುತ್ತು ತರಲಿವೆ. ಕರವೇ ಇಂದು ವಿವಿಧ ಕಾರ್ಮಿಕರು, ಜನ ವಿಭಾಗಗಳ ನಡುವೆ ಸಂಘಟನೆಗೆ ತೊಡಗಿವೆ. ಭಾಷೆ ಹೆಸರಿನಲ್ಲಿ ಒಗ್ಗಟ್ಟು ಒಡೆದರೆ ಕಾರ್ಮಿಕರ ಐಕ್ಯತೆ ಹೇಗೆ ಮಾಲೀಕರ ಸುಲಿಗೆಗೆ ಮುಕ್ತ ಅವಕಾಶ ನೀಡಿದಂತಾಗುವುದಿಲ್ಲವೇ ಎಂಬುದನ್ನು ಗಂಭೀರವಾಗಿ ಪರಿಗಣಿಸಬೇಕು.

ಇಷ್ಟೆಲ್ಲಾ ಕಾನೂನು ಬಾಹಿರ ಸಂವಿಧಾನ ವಿರೋಧಿ ಕೃತ್ಯಗಳನ್ನೆಸಗಿದಾಗಲೂ ಸರ್ಕಾರ ದೃಢವಾದ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಏನಿದರ ರಹಸ್ಯ? ಉರಿಯುವ ಬೆಂಕಿಯಲ್ಲಿ ಮೈಕಾಸಿಕೊಳ್ಳುವ ಉದ್ದೇಶವೇ? ಇಂತಹ ಕೃತ್ಯಗಳಿಂದ ಜನರ ಗಮನ ಬೇರೆಡೆಗೆ ಅವರು ಸೆಳೆದರೆ ತಾವು ಸುರಕ್ಷಿತ ಎಂಬ ದುರಾಲೋಚನೆಯೇ?


ಭೂಕಬಳಿಕೆ : ಸಿಕ್ಕಿಬಿದ್ದಿರುವ ಸಚಿವ ನಾಯ್ಡು



ನಾಯ್ಡು ಸಿಕ್ಕಿಬಿದ್ದಿದ್ದಾರೆ. 'ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದರೆ ಯಾರೂ ನೋಡಲ್ಲ' ಎಂಬಂತೆಯೇ ಭಾವಿಸಿ, ಭಂಡತನದಲ್ಲಿಯೇ ಎಲ್ಲವನ್ನೂ ನಡೆಸಿದ್ದ ಅವರ ಅಕ್ರಮ ಹೊರಬಿದ್ದಿದೆ. ಬಿಜೆಪಿಯ ಸಚಿವರಲ್ಲಿ ಪ್ರಮುಖವಾಗಿರುವ, ರಾಷ್ಟ್ರ ನಾಯಕರ ನಂಟೂ ಹೊಂದಿರುವ ಬೃಹತ್ ಕೈಗಾರಿಕೆ ಸಚಿವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಬೆಂಗಳೂರಿನಲ್ಲಿ ಸರ್ಕಾರದ ಜಮೀನು ಕಬಳಿಕೆಯಲ್ಲಿ ತಮ್ಮದೂ ಒಂದು ಕೈಚಳಕ ತೋರಿಸಿದ್ದಾರೆ.

ಅಂದ ಮಾತ್ರಕ್ಕೆ ನಾಯ್ಡುವಿನ ಹೆಸರೇನೂ ನೇರವಾಗಿ ಅಲ್ಲಿ ಕಂಡುಬರುವುದಿಲ್ಲ. ಹಾಗೇ ಮಾಡಲು ಇವರು ದಡ್ಡರೇನಲ್ಲ. ಬೆಂಗಳೂರಿನಲ್ಲಿ ಭೂಮಿಗೆ ಬಂಗಾರದಷ್ಟು ಬೆಲೆ ಎಂಬುದು ಹಳೆಯ ಮಾತೇ ಸರಿ. ಈಗ ಅದು ಪ್ಲಾಟಿನಂನಂತೆ ಪ್ರಭಾವಿಗಳದ್ದೇ ಪಾಲು.

ಹೀಗಾಗಿ 'ಬಲ'ವಿದ್ದವರು ಮನಸೋ ಇಚ್ಛೆ ಭೂಮಿಯನ್ನು ಕಬಳಿಸಿದ್ದಾರೆ. ಒಂದು ಮೇಲ್ ಅಂದಾಜಿನಂತೆ 36,000 ಎಕರೆ ಇರಬಹುದೆ ಎನ್ನಲಾಗಿದೆ. ಆದರೆ ಇದು ಭಾಗಶಃ ಕಂಡ ಸತ್ಯ. ಈ ಕಬಳಿಕೆ ಇದಕ್ಕೂ ಹೆಚ್ಚು ಎಂಬುದು ತನಿಖೆ ಮಾಡುತ್ತಿರುವವರ ಪ್ರಾಥಮಿಕ ಅಂದಾಜು. ಇದರಲ್ಲಿ ಪ್ರಭಾವಿ ರಾಜಕಾರಣಿಗಳು, ಉನ್ನತ ಅಧಿಕಾರಿಗಳು, ಉದ್ಯಮಿಗಳು ಇವರ ಕೂಟದ್ದೇ ಸಿಂಹಪಾಲು.



ಭೂ ದಂಧೆಯಲ್ಲಿ ನಾಯ್ಡು ತೊಡಗಿರುವುದು ಕಾಣದ್ದೇನಲ್ಲ. ಅಧಿಕಾರ. ಪ್ರಭಾವ ಇರುವಾಗ ವ್ಯವಹಾರ ಹಲವು ಪಟ್ಟು ಕಂಡಿದೆ. ಆದರೆ ಕಟ್ಟಾ ನಾಯ್ಡು ಸಚಿವರಾಗಿ 'ಜನಸೇವೆ' 'ದೇಶಸೇವೆ' ಮಾಡುತ್ತಿರುವಾಗ, ಇದರ ಹೊಣೆ ತನಗೇಕೆ ಎಂದು ಇತರರ ಹೆಗಲ ಮೇಲೆ ಹೇರಿಕೆ.

ಅಕ್ರಮ ದಂಧೆ

ಬೆಂಗಳೂರು ನಗರ ಹೊರ ವಲಯದಲ್ಲಿ ನಡೆದಿರುವ ಅಕ್ರಮ ಭೂ ಕಬಳಿಕೆಯ ಬಗ್ಗೆ ತನಿಖೆ ನಡೆಸುತ್ತಿರುವ ಶಾಸಕ ಎ.ಟಿ.ರಾಮಸ್ವಾಮಿ ನೇತೃತ್ವದ ಸದನ ಸಮಿತಿ ಮೊನ್ನೆ ಸರ್ಜಾಪುರ, ಆನೇಕಲ್, ಬೇಗೂರು ಪ್ರದೇಶಗಳಿಗೆ ಹೋದಾಗ ಒಂದು ದಿನದಲ್ಲೇ ಕಂಡಂತೆ ಪ್ರಭಾವಿಗಳು 160 ಎಕರೆ ಭೂಮಿ ನುಂಗಿರುವುದನ್ನು ಪತ್ತೆ ಹಚ್ಚಿದೆ. ಇದರ ಬೆಲೆ ಕನಿಷ್ಠವೆಂದರೂ 300 ಕೋಟಿ ರೂಪಾಯಿಗಳು.

ಅಕ್ರಮ ಭೂಮಿಯ ಮೇವು

ಆ ಪ್ರದೇಶದ ದೊಡ್ಡ ನಾಗಮಂಗಲದ ಸರ್ವೆ ನಂ.11ರಲ್ಲಿ ನಾಯ್ಡುವಿನ ಸಂಬಂಧಿ 7 ಎಕರೆ. 6 ಗುಂಟೆ ಭೂಮಿ ಒತ್ತುವರಿ ಮಾಡಿಕೊಂಡಿದ್ದಾನೆ. ಸರ್ವೆ ನಂ.31ರಲ್ಲಿ 5 ಎಕರೆ ಕಟ್ಟಾ ನಾಯ್ಡು ಮಗ ಜಗದೀಶ್ ನಾಯ್ಡು ಕಬಳಿಸಿದ್ದಾನೆ. ಅರ್ಥಾತ್ ಇವರ ಹೆಸರಿನಲ್ಲಿದೆ. ಹೀಗೆ ಇನ್ನೂ ಇಂತಹ ಕುಳಗಳ ಬಗ್ಗೆ ಮಾಹಿತಿ ನೀಡಲು ಅಧಿಕಾರಿಗಳು ಸಿದ್ಧರಿಲ್ಲ. ಇದನ್ನೇ ರಾಮಸ್ವಾಮಿಯವರು 'ಅಕ್ರಮ ಭೂಮಿಯಲ್ಲಿ ಅಧಿಕಾರಿಗಳಿಗೂ 'ಮೇವು' ಎಂದಿರುವುದು.

ಇಂತಹ ಅಕ್ರಮ ದಂಧೆಗಾರರು ನೇರವಾಗಿ ತಮ್ಮ ಹೆಸರುಗಳಲ್ಲಿ ಮಾಡುವುದಿಲ್ಲ, ಬೇರೆ ಬೇರೆ ಬೇನಾಮಿ ಹೆಸರುಗಳಿರುತ್ತವೆ. ಭೂ ಕಬಳಿಕೆಯನ್ನು ಎತ್ತಿ ತೋರಿಸಿದಾಗ ಕಟ್ಟಾ ಹೇಳಿದ್ದು ತನಗೂ ಅದಕ್ಕೂ ಸಂಬಂಧವಿಲ್ಲ ಎಂದು. ಮಗ ಇನ್ನೂ ಒಂದು ಹೆಜ್ಜೆ ಹೋಗಿ 'ಹಾಗೆ ಹೇಳಿದವರ ಮೇಲೆ ಮೊಕದ್ದಮೆ ಹೂಡಲಾಗುವುದು' ಎಂದು.

ಅಂದರೆ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಈ ಪ್ರಕರಣಗಳನ್ನು ಮುಚ್ಚಿಹಾಕಲು ತನ್ನೆಲ್ಲಾ ಪ್ರಭಾವ, ಸ್ಥಾನ ಬಳಸುವುದಿಲ್ಲ ಎಂದು ಹೇಗೆ ಹೇಳಲು ಸಾಧ್ಯ. ಇವರ ಹೆಸರನ್ನು ಸದನದ ಸಮಿತಿಯ ಮುಂದೆ ಅಧಿಕಾರಿಗಳು ಹೇಳದೆ ನಡುಗುತ್ತಿದ್ದರು, ತಮಗೆ ಇನ್ನೇನು ಗತಿಯಾದೀತು ಎಂದು ಚಡಪಡಿಸುತ್ತಿದ್ದರು.

ಸಂಪುಟದಿಂದ ತೆಗೆಯಬೇಕು

ಆದ್ದರಿಂದ ಸಚಿವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮತ್ತವರ ಮಗ, ಸಂಬಂಧಿಗಳು ನಡೆಸಿದ ಅಕ್ರಮಗಳ ಬಗ್ಗೆ ಆಳವಾದ ತನಿಖೆ ಈ ಕೂಡಲೇ ಆರಂಭಗೊಳ್ಳಬೇಕು. ಇಂತಹ ತನಿಖೆಯು ನಡೆಯುವಾಗ ನಾಯ್ಡು ಸಚಿವನಾಗಿದ್ದರೆ ತಮ್ಮ 'ಕರಕೌಶಲ್ಯ' ತೋರಿಸದೇ ಇರುವುದಿಲ್ಲ. ಒಂದು ವೇಳೆ ಅವರಿಗೆ ಸಂವೇದನೆಗಳಿದ್ದಲ್ಲಿ, ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಿ ತನಿಖೆಗೆ ಅವಕಾಶ ಕಲ್ಪಿಸಬೇಕಿತ್ತು. ಆದರೆ ತಮ್ಮ ಕಛೇರಿಯ ಸಹಾಯದಿಂದ ನಿರಾಕರಣೆಯ ಒಂದು ಹೇಳಿಕೆ ಕೊಡಿಸುವಷ್ಟು ಮಟ್ಟಕ್ಕೆ ಇಳಿದಿದ್ದಾರ ಎಂಬುದೇ ಅವರ 'ಕಾಳಜಿ' ತೋರಿಸುತ್ತದೆ. ಆದ್ದರಿಂದ ನಾಯ್ಡುವನ್ನು ಮುಖ್ಯಮಂತ್ರಿ ಕುಮಾರಸ್ವಾಮಿಯವರು ತತ್‌ಕ್ಷಣದಲ್ಲೇ ಸಚಿವ ಸಂಪುಟದಿಂದ ತೆಗೆಯಬೇಕು.

ಬಿಜೆಪಿ - ಭ್ರಷ್ಟ ಜನರ ಪಕ್ಷ

ಇಂತಹ ಭೂ ಕಬಳಿಕೆಯಲ್ಲಿ ತೊಡಗಿರುವ ಬಿಜೆಪಿ ಸಚಿವರು, ನಾಯಕರಲ್ಲಿ ನಾಯ್ಡು ಒಬ್ಬರೇನಲ್ಲ. ತೀರಾ ಇತ್ತೀಚೆಗೆ ಆರೋಗ್ಯ ಸಚಿವ ಅಶೋಕ್ ಭೂ ಕಬಳಿಸಿದ್ದು ಹೊರಬಂದಿತ್ತು. ಆದರೆ ಅದಕ್ಕೆ ಅಶೋಕರ ಪ್ರತಿಕ್ರಿಯೆಯೂ ನಾಯ್ಡು ನಂತೆಯೇ. ಏನೇ ಆಗಲಿ ಅಧಿಕಾರವಿರಲಿ, ಭೂ ಕಬಳಿಕೆ ಯನ್ನು ಸಮರ್ಥಿಸಿಕೊಳ್ಳುವುದಕ್ಕೆ ಸದಾ ಅವಕಾಶವಿರಲಿ ಎಂಬಂತಹ ವರ್ತನೆಯೇ. ಇಂತಹ ಅಕ್ರಮ ಹಣದ ಬಲದಿಂದ ರಾಜಕಾರಣದಲ್ಲಿಯೂ ಮಿಂಚಬಹುದು ಎಂಬ ನಂಬಿಕೆ.

ಈ ಹಿಂದೆ ಬಿಜೆಪಿಯ ರಾಷ್ಟ್ರಾಧ್ಯಕ್ಷರಾಗಿದ್ದ ವೆಂಕಯ್ಯ ನಾಯ್ಡು ಹೈದ್ರಾಬಾದ್ ಬಳಿಯ ದಲಿತರ ಭೂಮಿಯನ್ನು ನುಂಗಿದ್ದದ್ದು ಹೊರಬಂದಿತ್ತು. ಆ ಭೂಮಿಯನ್ನು ಹಿಂತಿರುಗಿಸುವುದಾಗಿ ಹೇಳಿ ಮುಖ ಉಳಿಸಿಕೊಳ್ಳುವ ಪ್ರಯತ್ನವನ್ನು ವೆಂಕಯ್ಯ ನಾಯ್ಡು ಕುಟುಂಬ ಮಾಡಲು ಸಿದ್ಧರಿಲ್ಲ. ಈಗಲೂ ಕರ್ನಾಟಕದ ಬಿಜೆಪಿಯ ಹಲವಾರು ನಾಯಕರು ಭೂ ಮಾಫಿಯಾಗಳಾಗಿದ್ದಾರೆ. ಆದರೆ ಸತ್ಯ, ಪ್ರಾಮಾಣಿಕತೆ, ದೇಶಸೇವೆ, ಈಶಸೇವೆ ಎಂದೆಲ್ಲಾ ಬೊಗಳೆ ಹೊಡೆಯುವ ಬಿಜೆಪಿ ಬಾಯಿ ಮುಚ್ಚಿ ಕುಳಿತಿದೆ ಯಾಕೆ?

ಕಾಂಗ್ರೆಸ್ - ಜೆಡಿ(ಎಸ್) ಸಹ ಅದೇ ಕೆಲಸ

ಹಾಗೆ ನೋಡಿದರೆ ಈ ಅಕ್ರಮ ದಂಧೆಯಲ್ಲಿ ಇಂದು ಬಿಜೆಪಿ ಜೊತೆಯಲ್ಲೇ ಕಾಂಗ್ರೆಸ್, ಜೆಡಿ(ಎಸ್) ಮುಂತಾದ ಪಕ್ಷಗಳ ನಾಯಕರೂ ಮುಳುಗಿದ್ದಾರೆ. ಸಾರ್ವಜನಿಕ ಆಸ್ತಿಯನ್ನು ಎಗ್ಗಿಲ್ಲದೇ ದರೋಡೆ ಮಾಡುವುದು ಇವರ ಕೆಲಸವಾಗಿದೆ. ಇಂತಹ ಭೂಮಾಫಿಯಾಗಳೇ ಇಂದು ರಾಜ್ಯದ ರಾಜಕಾರಣದಲ್ಲಿ ಮೇಲುಗೈ ಸಾಧಿಸುತ್ತಿರುವುದು ಅತ್ಯಂತ ಆತಂಕಕಾರಿ, ಅಪಾಯಕರ.

ಇಂದು ಅಧಿಕಾರ ಹಸ್ತಾಂತರದ ಸುತ್ತಲೇ ಎಲ್ಲವೂ ಸುತ್ತುತ್ತಿವೆ. ಅಕ್ಟೋಬರ್ 3 ಎಂದು ಬರುವುದೋ ಎಂದು ರಣಹದ್ದುಗಳಂತೆ ಬಿಜೆಪಿ ನಾಯಕ ಗಣ ಕಾಯುತ್ತಿದೆ. ಈಗ ಸರ್ಕಾರದಲ್ಲಿ ಬಿಜೆಪಿಯದ್ದು ಬಂದ ಭಾಗ. ಈಗ ಅದಕ್ಕೇ ಉಪಮುಖ್ಯಮಂತ್ರಿ, ಹಣಕಾಸು, ಕೈಗಾರಿಕೆ, ಕಂದಾಯ ಅಂತಿವೆ. ಮುಂದೆ ಮುಖ್ಯಮಂತ್ರಿಯೇ ಬಿಜೆಪಿಯವರಾದರೆ, ಅಧಿಕಾರದ ಪ್ರಮುಖ ಕೀಲಿ ಅವರ ಕೈಗೆ ಹೋದರೆ ಏನಾದೀತು?



■ ವಿಠ್ಠಲ ಭಂಡಾರಿ

'ದುಡಿಯುವ ಕೈಗಳ ಹೋರಾಟದ ಕಥೆ'

ಕೆಲವು ಕೊರತೆಗಳಿದ್ದರೂ ಸಹ ಉತ್ತರ ಕನ್ನಡ ಜಿಲ್ಲೆಯ ರೈತ ಚಳುವಳಿಯ ಇತಿಹಾಸ ತಿಳಿಯಬಯಸುವವರಿಗೆ ಇದೊಂದು ಮುಖ್ಯವಾದ ಕೃತಿ

ರೈತ ಹೋರಾಟದ ವರ್ಣಮಯ ಇತಿಹಾಸ

ಸ್ವಲ್ಪ ಪರಿಣಾಮಕಾರಿ ಭೂಸುಧಾರಣೆ ಕಂಡ ಜಿಲ್ಲೆಗಳಲ್ಲಿ ಉತ್ತರ ಕನ್ನಡ ಜಿಲ್ಲೆಯೂ ಒಂದು. ಸ್ವಾತಂತ್ರ್ಯ ಪೂರ್ವದಿಂದ ಈ ಜಿಲ್ಲೆಯಲ್ಲಿ ನಡೆದ ರೈತರ ಸಂಘಟಿತ ಹೋರಾಟವೇ ಇದಕ್ಕೆ ಕಾರಣವಾಗಿರಬೇಕು. ಕಾಗೋಡು ರೈತ ಹೋರಾಟಕ್ಕೆ ಕೂಡ ಉತ್ತರ ಕನ್ನಡ ಜಿಲ್ಲೆಯ ರೈತ ಹೋರಾಟವೇ ಸ್ಫೂರ್ತಿಯಾಗಿತ್ತು; ಮಾದರಿಯಾಗಿತ್ತು ಎನ್ನುವುದು ಈಗ ಇತಿಹಾಸ. ಹಲವು ಕಾರಣಗಳಿಂದ ಕಾಗೋಡು ಸತ್ಯಾಗ್ರಹ ರಾಷ್ಟ್ರದ ಗಮನ ಸೆಳೆದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆದ ಹೋರಾಟ ಅಂತಹ ಖ್ಯಾತಿ ಪಡೆಯಲೇ ಇಲ್ಲ. ಆದರೆ 'ದುಡಿಯುವ ಕೈಗಳ ಹೋರಾಟದ ಕತೆ' ಎನ್ನುವ ಈ ಪುಸ್ತಕ ಇಂತಹ ಅಜ್ಞಾನವನ್ನು ದೂರ ಮಾಡುವುದರಲ್ಲಿ ಯಾವ ಅನುಮಾನವೂ ಇಲ್ಲ.

ಅವಜ್ಞೆಗೆ ಒಳಗಾದ ಹೋರಾಟ

'ಯಾವ ನೆಲದಲ್ಲಿ ಸ್ವಾತಂತ್ರ್ಯದ ಹಸಿವಿನಿಂದ ಬ್ರಿಟಿಷ್ ರಾಜಸತ್ತೆಯ ವಿರುದ್ಧ ಹೋರಾಟ ನಡೆದಿತ್ತೊ, ಅದೇ ನೆಲದಲ್ಲಿ, ಅನ್ನದ ಹಸಿವಿನಿಂದ ಸಾಮಾಜಿಕ ನ್ಯಾಯ ಕೇಳಿ ನಡೆದ ಜನಾಂದೋಲನದ ಕತೆಯಿದು. ವ್ಯತ್ಯಾಸ ಇಷ್ಟೆ, ರಾಜಕೀಯ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟ ಚರಿತ್ರೆಯ ಪುಟದಲ್ಲಿ ದಾಖಲಾಗಿ ಉಳಿಯಿತು. ಬೆವರಿನ ವರ್ಗ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ನಡೆಸಿದ ಈ ಹೋರಾಟ ಅದೇಕೋ ಚರಿತ್ರೆಕಾರರ ಅವಜ್ಞೆಗೆ ಒಳಗಾಯಿತು' (ಪ್ರ.2) ಎನ್ನುವ ಲೇಖಕರ ವಿಷಾದವೇ 45 ಅಧ್ಯಾಯಗಳ ಈ ಪುಸ್ತಕ ಬರೆಯಲು ಕಾರಣವಾಯಿತು.

ಕವಿ ವಿಷ್ಣು ನಾಯ್ಕ ಅವರು ಈ ಪುಸ್ತಕದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ 1938ರಿಂದ 1973ವರೆಗೆ ನಡೆದ ಹೋರಾಟವನ್ನು ಅನುಲಕ್ಷಿಸಿ (ಭೂ ಸುಧಾರಣಾ ಕಾಯ್ದೆ ಬರುವವರೆಗೆ) ರೈತ ಹೋರಾಟದ ಚರಿತ್ರೆಯನ್ನು ಕೆತ್ತಿಟ್ಟಿದ್ದಾರೆ. ಸ್ವಾತಂತ್ರ್ಯ ಚಳುವಳಿಯಲ್ಲಿಯೂ ಈ ನೆಲದ ಕೊಡುಗೆ ಮಹತ್ವದ್ದೇ. ಈ ಚಳುವಳಿಯ ಒಟ್ಟೊಟ್ಟಿಗೆ ನಡೆದ ರೈತ ಚಳುವಳಿ, ರೈತ ಚಳುವಳಿಯ ಒಟ್ಟೊಟ್ಟಿಗೆ ನಡೆದ ಅಕ್ಷರ ಚಳುವಳಿಗೆ (ರೈತರೇ ಸೇರಿ ಹಲವು ಶಾಲೆ ತೆರೆದು ಶೈಕ್ಷಣಿಕ ಪ್ರಗತಿಗೆ ನಾಂದಿ ಹಾಡಿದರು ಗಿರಿ ಪಿಕಳೆ, ದೇಸಾಯಿ, ಮುಂತಾದವರು ಮಾರ್ಗದರ್ಶನ ಮಾಡಿದರು) ಈ ಜಿಲ್ಲೆಯಲ್ಲಿ ರೂಪುಗೊಂಡ ಹೋರಾಟದ ಅನನ್ಯತೆ ಕೂಡ ಹೌದು. ಸ್ವಾತಂತ್ರ್ಯ, ಭೂಮಿ, ಶಿಕ್ಷಣಗಳ ಅಂತಃ ಸಂಬಂಧವನ್ನು ಈ ಜಿಲ್ಲೆಯ ಹೋರಾಟ ಕಂಡುಕೊಂಡಿದ್ದನ್ನು ಈ ಪುಸ್ತಕ ದಾಖಲಿಸುತ್ತದೆ.

ಆದಿವಾಸಿಗಳಾದ ಹಾಲಕ್ಕಿ ಸಮಾಜದ ಬದುಕಿನ ವಿವರಗಳು, ಗೇಣಿ ರೈತರ ಕಷ್ಟ ಪರಂಪರೆ, ದಿನಕರ ದೇಸಾಯಿಯವರ ಪ್ರವೇಶ, ಗಿರಿಪಿರಳೆಯವರ ಸಂಘಟನಾ ಚಾತುರ್ಯ ಹಾಗೂ ಎಡಪಂಥೀಯ ಬದ್ಧತೆ, ರೈತ ಕೂಟದ ಸ್ಥಾಪನೆ, ಜನ ಸೇವಕ ಪತ್ರಿಕೆಯ ಕೊಡುಗೆ, ಅರಣ್ಯ ಭೂಮಿ ಹೋರಾಟ, ಗೇಣಿ ರದ್ದತಿ ಹೋರಾಟ, ಗಜನೀ ಭೂಮಿ ಹೋರಾಟ, ದೇಸಾಯಿಯವರ ಗಡಿಪಾರು, ಪೊರಕೆ ಚಳುವಳಿ, ಕಲೆಕ್ಟರ್ ಆಫೀಸಿಗೆ ಚಾರಿತ್ರಿಕ ದೌಡು, ರೈತರು ಮತ್ತು ಚುನಾವಣೆ, ಶಿಕ್ಷಣ ಸಂಸ್ಥೆಗಳ ಸ್ಥಾಪನೆ, ಎಡಪಂಥೀಯ (ಎಐಕೆಎಸ್) ರೈತ ಹೋರಾಟ, ದೇಸಾಯಿಯವರ ಕಾವ್ಯ.... ಹೀಗೆ ಹತ್ತು ಹಲವು ಪ್ರಸಂಗಗಳು ಇಲ್ಲಿ ಮೈ ತಾಳಿವೆ. ಗಿರಿಪಿಕಳೆ, ದಿನಕರ ದೇಸಾಯಿ, ದಯಾನಂದ ನಾಡಕರ್ಣಿ, ಹೊನ್ನಪ್ಪ ನಾಯ್ಕ, ಶಂಕರ ಖೇಣಿ, ಮ.ಗ ಶೆಟ್ಟಿ, ಎಂ.ಎಸ್. ಧಾರೇಶ್ವರ ಬೆಳ್ಳಂಬರದ ಗೌಡರು, ದೀಪಣ್ಣ ಶೆಟ್ಟಿ, ಫಕೀರ ಪಪ್ಪಿ ಕೈತಾನ್ ಡಿಸೋಜ, ಅಮ್ಮಂಬಳ ಆನಂದ.... ಹೀಗೆ ಹೋರಾಟದ ಸಾಗರದ ಸಾವಿರಾರು ತೊರೆಗಳ ಬಗ್ಗೆ ವಿವರಿಸಲಾಗಿದೆ. ಚರಿತ್ರೆ ನಾಯಕರಿಂದ ನಿರ್ಮಾಣವಾಗಿಲ್ಲ. ಬದಲಾಗಿ ದುಡಿಯುವ ಕೈಗಳೇ ಚರಿತ್ರೆಯನ್ನು ನಿರ್ಮಿಸುತ್ತವೆ ಎನ್ನುವುದನ್ನು ಇದು ಧ್ವನಿಸುತ್ತದೆ.

ಸ್ವತಃ ಲೇಖಕರೂ ಈ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದವರಾದ್ದರಿಂದ ಬರಹಕ್ಕೊಂದು ಅಧಿಕೃತತೆಯೂ ಬಂದಿದೆ. ಕಮ್ಯುನಿಸ್ಟ್ ನಾಯಕರ ಸಂಪರ್ಕದಿಂದಾಗಿ (ದೇಸಾಯಿಯವರು ಭೂ ಮಾಲಿಕ ವರ್ಗದಿಂದ ಬಂದಿದ್ದರೂ) ಹಾಲಕ್ಕಿಗಳ ರೈತರ ಕಷ್ಟಗಳನ್ನು ಅರ್ಥ ಮಾಡಿಕೊಂಡು, ಹೋರಾಟಕ್ಕೆ ಇಳಿಯಲು ಸಾಧ್ಯವಾಯಿತು. (ಕೊನೆಗೆ ಗಿರಿಪಿಕಳೆಯವರು ಕಮ್ಯುನಿಸ್ಟ್‌ರಾಗಿದ್ದರಿಂದಲೇ ದೇಸಾಯಿಯವರಿಂದ ದೂರವಾಗ ಬೇಕಾಯಿತು). ದಿನಕರ ದೇಸಾಯಿಯವರ ಚುಟುಕುಗಳಲ್ಲಿ, ಕವಿತೆಗಳಲ್ಲಿ ಕಾಣುವ ವ್ಯಂಗ್ಯ, ಸಾಮಾಜಿಕ ಪ್ರಜ್ಞೆಯ ಪ್ರೇರಣೆ ಕೂಡ ಇಲ್ಲಿಯವೇ ಇರಬೇಕು. ಹಾಗೆಯೇ ಗಿರಿಪಿಕಳೆಯವರು ಮಾಸ್ತರರಾಗಿ ಜಿಲ್ಲೆಗೆ ಬಂದು ಶಾಲೆ ಬಿಟ್ಟ ನಂತರ ಸೈಕಲ್ ಮೇಲೆ ರೈತರ ಮನೆ ಮನೆಗೆ ತಿರುಗಿ ಅವರನ್ನು ಸಂಘಟಿಸಲು ಪ್ರಯತ್ನಿಸಿದ್ದರು. ಆಗಲೇ ಹೋರಾಟ ನಿರತ ಆಗಿರುವ ಕೆಂಬಾವುಟದ (ಕಮ್ಯುನಿಸ್ಟ್ ಪಕ್ಷದ ಮಾರ್ಗದರ್ಶನದಲ್ಲಿ ನಡೆಯುವ) ಹಲವು ನಾಯಕರೊಂದಿಗೆ ಸಂಪರ್ಕ ಬೆಳೆಸಿದರು. ಕಮ್ಯುನಿಸ್ಟ್ ಪಕ್ಷದ ಸದಸ್ಯರಾದರು. ಈ ಕಾರಣಕ್ಕಾಗಿ ಅವರು ನೌಕರಿಯನ್ನು ಕಳೆದುಕೊಂಡರು. ಅನಂತರ ದಿನಕರ ದೇಸಾಯಿಯವರಿಂದ ದೂರವಾಗ ಬೇಕಾಯಿತು. ಆದರೂ ತನ್ನ ಸೈದ್ಧಾಂತಿಕ ಬದ್ಧತೆಯನ್ನು ಗಿರಿಪಿಕಳೆಯವರು ಉಳಿಸಿಕೊಂಡಿದ್ದನ್ನು ಲೇಖಕರು ದಾಖಲಿಸಿದ್ದಾರೆ. ಹಾಗೆಯೇ ಸಿದ್ಧಾಂತವನ್ನು ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡವರ ಕತೆಯೂ ಇಲ್ಲಿವೆ.

ರೈತ ಹೋರಾಟದ ಮೈಲುಗಲ್ಲುಗಳನ್ನು ಗುರುತಿಸುವಾಗಲೇ ಈ ಜಿಲ್ಲೆಯ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಿತಿಯ ಬಗ್ಗೆ ಕೂಡ ಕೃತಿ ಚರ್ಚಿಸುತ್ತದೆ.


'ಅಂಕೋಲೆ ಕೇಂದ್ರಿತ' ಚಳುವಳಿ

ಬಹುತೇಕವಾಗಿ ಇಡೀ ಕೃತಿ 'ಅಂಕೋಲೆ' ಯನ್ನು ಕೇಂದ್ರವನ್ನಾಗಿಸಿಕೊಂಡ ಹೋರಾಟದ ಕತೆ. ಆದರೆ ಈ ಜಿಲ್ಲೆಯಲ್ಲಿ ದೇಸಾಯಿ, ಪಿಕಳೆಯವರ ಪ್ರವೇಶದ ಮೊದಲೂ ರೈತ ಚಳುವಳಿ ಪ್ರಬಲವಾಗಿತ್ತು. ಮತ್ತು ನಂತರ ಕೂಡ ಚಳುವಳಿ ಮುಂದುವರಿದಿದೆ. ಉಳಗಾದ ಗಣು ನಾಯ್ಕ ನಂತಾವರು, (ನಿರಂಜನರು ಇವರ ಬಗ್ಗೆ ಒಂದು ಕತೆಯನ್ನೇ ಬರೆದಿದ್ದಾರೆ) ಹಳಿಯಾಳದ ಮಾರುತಿಯವರು ಪೋಲೀಸರ ಗುಂಡಿಗೆ ಬಲಿಯಾದದ್ದು ಈ ಜಿಲ್ಲೆಯ ರೈತ ಹೋರಾಟದಲ್ಲಿ ಪ್ರಮುಖ ಅಧ್ಯಾಯವೇ ಆಗಿದೆ. ಆದರೆ ಅಂಕೋಲೆಯ ಹೋರಾಟದ ನಿರಂತರತೆ ಮತ್ತು ನಾಯಕತ್ವದ ಎದುರು ಉಳಿದದ್ದು ತಾತ್ಕಾಲಿಕವಾಗಿ ಮಸುಕಾಯಿತು. ಕೇವಲ 30 ರಿಂದ 35 ವರ್ಷದ ಇತಿಹಾಸವೇ ಇಷ್ಟು ರೋಮಾಂಚನಕಾರಿಯಾಗಿರುವಾಗ ಸುಮಾರು 70 ರಿಂದ 80 ವರ್ಷಗಳ ಇತಿಹಾಸವುಳ್ಳ ಉತ್ತರ ಕನ್ನಡ ಜಿಲ್ಲೆಯ ರೈತ ಹೋರಾಟದ ಚರಿತ್ರೆ ಇನ್ನೆಷ್ಟು ಸ್ಫೂರ್ತಿದಾಯಕವಾಗಿರಲಿಕ್ಕಿಲ್ಲ!

ಪ್ರತಿ ಜಿಲ್ಲೆಯಲ್ಲಿ ಆಗಿ ಹೋಗಿರುವ ರೈತ ಹೋರಾಟದ ಇತಿಹಾಸಗಳು ದಾಖಲಿಸಲು ಹೊರಡುವವರಿಗೆ ಇದೊಂದು ಮಾದರಿ ಕೃತಿಯಾಗಿದೆ. ಮುದ್ರಣ, ಮುಖಪುಟ, ಒಳಗಿನ ಅಪರೂಪದ ಚಿತ್ರಗಳು ಕೂಡ ಕೃತಿಯ ಮೌಲ್ಯ ಹೆಚ್ಚಿಸಿವೆ. ತುಸು ದೀರ್ಘವೆನಿಸುವ ಹಿರಿಯ ವಿಮರ್ಶಕ ಜಿ.ಹೆಚ್. ನಾಯಕ್‌ರವರ ಮುನ್ನುಡಿ ಕೂಡ ಕೆಲವು ಹೊಸ ಅಂಶಗಳ ಕಡೆಗೆ ಗಮನ ಸೆಳೆಯುತ್ತದೆ.

○

ಹಾಗೆ ಅಂದ್ರೆ ಹಾಗೇ ಅಂತ ತಿಳ್ಕೊಬೇಡಿ



ಕಲ್ಚೆ

ವಿ. ಶ್ರೀನಿವಾಸ

'ರೈತ್ರು ಆತ್ಮಹತ್ಯೆ ಮಾಡ್ಕೊಂಡ್ರೆ ಮಾಡ್ಕೊಳ್ಳಿ ಬಿಡಿ' ಅಂತ ದೇವೇಗೌಡ್ರು ಹೇಳಿದ್ದಕ್ಕೆ ಹಿಂದೆ ಕೆಲವರು ಶಾನೆ ಬೇಜಾರು ಮಾಡಿಕೊಂಡಿದ್ದರು. ಹಂಗೆ ಅನ್ಬೋದ? ಆಡೋ ಮಾತ ಅದು? ಅಂತೆಲ್ಲ ಕೆಲವರು ಬೇಜಾರು ಮಾಡಿಕೊಂಡಿದ್ದರು.

ಈಗ ಗೌಡರು ಒಮ್ಮೆ ಅಧಿಕಾರ ಹಸ್ತಾಂತರ ಮಾಡಲಾಗದು ಅಂತಲೂ ಮಗದೊಮ್ಮೆ ವಾಜಪೇಯಿ ಜೊತೆ ಚರ್ಚಿಸುತ್ತೇನೆ ಅಂತಲೂ ಹೇಳ್ತಾ ಜೋಲಿ ತೂಗುತ್ತಿದ್ದಾರೆ.

ಗೌಡ್ರು ಭಾಳ ದೊಡ್ಡೋರು. ಮಾಜಿ ಮಣ್ಣಿನ ಮಗ. ಅಲ್ಲಲ್ಲ ಮಾಜಿ ಪ್ರಧಾನ ಮಂತ್ರಿ. ಅಂಥ ದೊಡ್ಡೋರ ಮಾತು ನಮಗೆ ಅಷ್ಟು ಸುಲಭದಲ್ಲಿ ಅರ್ಥ ಆಗೋ ಅಂತದ್ದಲ್ಲ. ಅವ್ರು ಹಾಗೆ ಅಂದ್ರೆ. ಹಾಗೇ ಅಂತ ತಿಳ್ಕೊಂಡ್ರೆ ತಪ್ಪಾಗುತ್ತೆ. ಅವ್ರು ಇವತ್ತು ಏನಾದ್ರೂ ಹೇಳಿದರೆ ಇನ್ನೂ ಸ್ವಲ್ಪ ದಿನ ಬಿಟ್ಟು ಆ ವಾಕ್ಯ ಪೂರ್ತಿ ಮಾಡ್ತಾರೆ. ಆಗ ಅದರ ಬಗ್ಗೆ ವಿಚಾರ ಮಾಡಬೇಕು. ಆದರೂ ಸಾಮಾನ್ಯ ಜನಕ್ಕೆ ಸುಲಭವಾಗಿ ಅರ್ಥ ಆಗೋ ಅಂತದ್ದಲ್ಲ.

ಈಗ ನೋಡಿ. ಅವರ ಸುಪುತ್ರ ಕುಮಾರಸ್ವಾಮಿ ಬಿಜೆಪಿ ಜೊತೆ ಸೇರಿ ಸರ್ಕಾರ ಮಾಡಿದಾಗ ಏನಂದಿದ್ರು? ಜೀವನದ ಅತ್ಯಂತ ದುಃಖದ ದಿನ ಅಂತ ಹೇಳಿ [illegible]ದ್ರು. ಅವರನ್ನೆಲ್ಲ ವಜಾ ಮಾಡಿದ್ದೀನಿ ಅಂತ ಪತ್ರನೂ ಬರೆದಿದ್ದರು. ಅದು ನಿಜಾ ಅಂತ ಕೆಲವರು ನಂಬಿದ್ದರು ಈಗೇನಾಗಿದೆ? ಇನ್ನೊಂದು ಸಣ್ಣ ಉದಾಹರಣೆ. ಮಾಜಿ ಮುಖ್ಯಮಂತ್ರಿ ಒಬ್ಬರಿಗೂ ಇವರಿಗೂ ಅಷ್ಟಕ್ಕಷ್ಟೆ. ಆದ್ರೆ ಇದ್ದಕ್ಕಿದ್ದ ಹಾಗೆ ಅವರ ಹುಟ್ಟಿದ ಹಬ್ಬಕ್ಕೆ ಬೊಕ್ಕೆ ಜೊತೆ 8 ಪುಟದ ಪತ್ರ ಕಳಿಸಿದ್ದರಂತೆ. ಎಲ್ಲಿಯಾದ್ರೂ ಕೇಳಿದಿರಾ 8 ಪುಟದ ಗ್ರೀಟಿಂಗ್ಸ್? ಈಗೇನಾಗಿದೆ ಮತ್ತೆ ಮುಂಬೈ ಮಹಾತ್ಮನ ಮೇಲೆ ಗುರ್ರ್....

ಈ ನಮ್ಮ ಸಾಹಿತಿಗಳನ್ನು ನೋಡಿ. ಅವರು ಬರೆದಿರೋ ಪುಸ್ತಕಗಳು ನಮಗೆ ಏನೂ ಅರ್ಥ ಆಗದೆ ಇರಬಹುದು. ಆದ್ರೆ ಅವರುಗಳು ಎಷ್ಟು ಚೆನ್ನಾಗಿ ಜಗಳ ಆಡ್ತಾರೆ. ನೀನು ಚೇಳು. ನೀನು ಹಾವು, ನೀನು ಹಂದಿ, ನೀನು ನಾಯಿ, ನೀನು ಕತ್ತೆ, ನೀನು ಘಟಸರ್ಪ ಅಂತ ಒಬ್ಬರಿಗೊಬ್ಬರು ಬಯ್ದಾಡುತ್ತಾರೆ. ಯಾರು ಯಾರು ಏನು ಏನು ಅಂತ ಎಲ್ರಿಗೂ ಅರ್ಥ ಆಗುತ್ತೆ.

ಆದ್ರೆ ನಮ್ಮ ದೇವೇಗೌಡ್ರು ಹೇಳಿದ್ದನ್ನು ಹೇಳಿದ ಹಾಗೆ ಅಷ್ಟು ಸುಲಭವಾಗಿ ತಿಳಿದುಕೊಂಡರೆ ತಪ್ಪಾಗುತ್ತೆ. ಗೌಡ್ರು ಬರಿಯೋ ಪತ್ರಗಳು ಸಾಹಿತ್ಯನೋ, ಅವರು ಆಡೋದು ಆಡಿಸೋದು ನಾಟಕನೋ, ಬಯಲಾಟನೋ, ತೋರಿಸುವುದು ಸಿನಿಮಾನೋ? ದಿನಾ ನಡೆಯೋ ಟಿ.ವಿ. ಸೀರಿಯಲ್ಲೋ? ಯಾವ ರಾಜಕೀಯ ಪಂಡಿತರಿಗೂ ಗೌಡರ ರಾಜಕೀಯ, ನಡೆ, ನುಡಿ, ನಿದ್ದೆ, ಮುದ್ದೆ ಅರ್ಥ ಆಗೋದಿಲ್ಲ. ಯಾಕೆ ಅಂದ್ರೆ. ಅವರು ಸಭೆಯಲ್ಲಿ ನಿದ್ದೆ ಮಾಡುತ್ತಾರೆ ಅಂತ ವರದಿಗಾರರು ತಿಳಿದುಕೊಂಡಿದ್ದರು. ಆದರೆ ಅದು ನಿದ್ದೆ ಅಲ್ಲ, ದೇಶದ ಬಗ್ಗೆ ಚಿಂತನೆ ಅಂತ ಅವರು ಹೇಳಿದ ಮೇಲೆ ತಾನೆ ಗೊತ್ತಾಗಿದ್ದು, ನೋಡಿ ಎಂತೆಂಥಾ ರಾಜಕೀಯ ಪಂಡಿತರಿಗೇ ದೇಶದ ಬಗ್ಗೆ ಚಿಂತನೆ ಹಾಗಿರುತ್ತೆ ಅಂತ ಗೊತ್ತಾಗದೆ ನಿದ್ದೆ ಅಂತ ತಪ್ಪು ತಿಳಿದುಕೊಂಡಿದ್ದರಲ್ಲ. ಇನ್ನು ಸಾಮಾನ್ಯರಾದ ನಮ್ಮದೇನು?

ಅದಕ್ಕೆ ದೇವೇಗೌಡರಿಗೆ 'ಜ್ಞಾನಪೀಠ' ಕೊಡಬೇಕೋ 'ದಾದಾಸಾಹೇಬ್ ಫಾಲ್ಕೆ' ಕೊಡಬೇಕೋ 'ಆಸ್ಕರ್' ಕೊಡಬೇಕೋ 'ನೋಬೆಲ್' ಕೊಡಬೇಕೋ 'ಗ್ರಾಮಿ' ಕೊಡಬೇಕೋ ಎನ್ನುವ ಗೊಂದಲದಲ್ಲಿ ಅವರಿಗೆ ಇನ್ನೂ ಯಾವ ಪ್ರಶಸ್ತಿ ಕೊಟ್ಟಿಲ್ಲ. ಅವರು ಹೇಳೋದರಲ್ಲಿ ಒಂದು ಸರಿಯಾಗಿ ಅರ್ಥ ಆಗುತ್ತೆ. ಯಾಕೆ ಅಂದರೆ ಅದೇ ಮಾತನ್ನು ಅವರು ಆಗಾಗ್ಗೆ ಗುಡುಗುತ್ತಿರುತ್ತಾರೆ. 'ಈ ದೇವೇಗೌಡನನ್ನೂ ಮುಗಿಸಲು ಯಾರಿಗೂ ಸಾಧ್ಯವಿಲ್ಲ'.

○

ಭಾರತ - ಅಮೇರಿಕಾ ಅಣು ಒಪ್ಪಂದ

ಕೆಲವು ಪ್ರಶ್ನೆಗಳು

ಜಿ.ಎನ್.ನಾಗರಾಜ್

ನವದೆಹಲಿಯ ನೀತಿ ಮತ್ತು ಧೋರಣೆಗಳಿಗೆ ಸಂಬಂಧಿಸಿದ ಅಧ್ಯಯನ ಕೇಂದ್ರದಲ್ಲಿ ರಣನೀತಿ ಅಥವಾ ಸುಭದ್ರತಾ ನೀತಿಯ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾಗಿರುವ ಬಹ್ಮ ಚೆಲ್ಲಾನಿಯವರು ಎತ್ತಿದ ಪ್ರಮುಖ ಪ್ರಶ್ನೆಗಳು.

ಚೀನಾ ಅಮೇರಿಕದೊಂದಿಗೆ ಅಣು ಒಪ್ಪಂದ ಮಾಡಿಕೊಂಡಿದೆ. ಆದರೆ ಬೇರೆಯೇ ಶರತ್ತುಗಳ ಮೇಲೆ. ಅದರಲ್ಲಿ ಪ್ರಮುಖವಾದುದು ಎರಡೂ ದೇಶದ ಕಾನೂನುಗಳು ಈ ಒಪ್ಪಂದದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಕೇವಲ ಅಂತರರಾಷ್ಟ್ರೀಯ ಕಾನೂನುಗಳಿಗೆ ಮಾತ್ರ ಈ ಒಪ್ಪಂದ ಬದ್ಧವಾಗಿರುತ್ತದೆ. ಚೀನಾ-ಅಮೇರಿಕಾ 123 ಒಪ್ಪಂದದಲ್ಲಿನ ಈ ವಾಕ್ಯಗಳು ಆ ಮೇಲಿನ ವಿಷಯವನ್ನು ಸ್ಪಷ್ಟಪಡಿಸುತ್ತವೆ. ಈ ಒಪ್ಪಂದದ ಪಾಲನೆಯ ನಿಮಿಷದಲ್ಲಿ ತಮ್ಮ ದೇಶದ ಆಂತರಿಕ ಕಾನೂನನ್ನು ಉಲ್ಲೇಖಿಸಿ ಒಪ್ಪಂದವನ್ನು ವಿಫಲಗೊಳಿಸ ಬಹುದಾದುದೆಂಬ ಅಂತರ ರಾಷ್ಟ್ರೀಯ ಕಾನೂನಿನ ತತ್ವಗಳನ್ನು ಎರಡೂ ದೇಶಗಳೂ ಒಪ್ಪಿಕೊಳ್ಳುತ್ತವೆ. ಆದರೆ ಅದೇ ವಿಷಯಕ್ಕೆ ಸಂಬಂಧಿಸಿ ಭಾರತದ ಜೊತೆ ಮಾಡಿಕೊಂಡ ಒಪ್ಪಂದದಲ್ಲಿ ಎರಡೂ ದೇಶಗಳೂ ಕೂಡ ಆಯಾ ದೇಶದ ರಾಷ್ಟ್ರೀಯ ಕಾನೂನಿಗೆ ಬದ್ಧವಾಗಿರಬೇಕು ಎಂದು ವಿಧಿಸಲಾಗಿದೆ. ಅಂದರೆ ಅಮೇರಿಕ ತನ್ನ ದೇಶದ ರಾಷ್ಟ್ರೀಯ ಕಾನೂನುಗಳಿಗೆ ಅದರಲ್ಲಿ ಇತ್ತೀಚಿಗೆ ಭಾರತ-ಅಮೇರಿಕ ಅಣು ಸಂಬಂಧಕ್ಕೆ ನೇರವಾಗಿ ಸಂಬಂಧಿಸಿದಂತೆ ಅಂಗೀಕೃತವಾದ ಹೈಡ್ ಕಾಯಿದೆಗೆ ಅದರಲ್ಲಿ ಭಾರತದ ವಿದೇಶಾಂಗ ನೀತಿ, ಇರಾಕ್ ಜೊತೆಗಿನ

ಅಂತರರಾಷ್ಟ್ರೀಯ ತನಿಖೆಗೆ ಭಾರತದ ಅಣುಶಕ್ತಿ ಸ್ಥಾವರಗಳು ಮತ್ತಿತರ ಕೇಂದ್ರಗಳನ್ನು ನಿರಂತರವಾಗಿ ತನಿಖೆಗೆ ಒಳಪಡಿಸುವುದಲ್ಲದೆ ಅಮೇರಿಕ ದೇಶದ ತನಿಖೆದಾರರು ಕೂಡ ಭಾರತದ ಸ್ಥಾವರಗಳನ್ನು ತನಿಖೆ ಮಾಡಲು ಏಕೆ ಅವಕಾಶ ನೀಡಲಾಗಿದೆ?

ಸಂಬಂಧ, ಅಮೇರಿಕ-ಭಾರತ ಮಾಡಿಕೊಳ್ಳ ಹೊರಟಿರುವ ಬೇರೆ ಕೆಲ ಒಪ್ಪಂದಗಳು, ಇತ್ಯಾದಿ ಶರತ್ತುಗಳಿಗೆಲ್ಲಾ ಬದ್ಧವಾಗಿರಬೇಕಾಗುತ್ತದೆ.

ಹೀಗಾಗಿ ಚೀನಾ-ಅಮೇರಿಕಾ ಒಪ್ಪಂದ ಚೀನಾದ ಸಾರ್ವಭೌಮತೆಯನ್ನು ರಕ್ಷಿಸಿದರೆ ಭಾರತ, ಅಮೇರಿಕಾ ಒಪ್ಪಂದ ಭಾರತದ ಸಾರ್ವಭೌಮತೆಯನ್ನು ಅಮೇರಿಕಾಕ್ಕೆ ಅಡಿಯಾಳಾಗಿಸುತ್ತದೆ. ಚೀನಾ-ಅಮೇರಿಕಾ 123 ಒಪ್ಪಂದದಲ್ಲಿನ ಈ ವಾಕ್ಯಗಳು ಆ ಮೇಲಿನ ವಿಷಯವನ್ನು ಸ್ಪಷ್ಟಪಡಿಸುತ್ತವೆ : ಈ ಒಪ್ಪಂದದ ಪಾಲನೆಯ ವಿಷಯದಲ್ಲಿ ತಮ್ಮ ದೇಶದ ಆಂತರಿಕ ಕಾನೂನನ್ನು ಉಲ್ಲೇಖಿಸಿ ಒಪ್ಪಂದವನ್ನು ವಿಫಲಗೊಳಿಸಬಾರದು ಎಂಬ ಅಂತರ ರಾಷ್ಟ್ರೀಯ ಕಾನೂನಿನ ತತ್ವವನ್ನು ಎರಡೂ ದೇಶಗಳು ಒಪ್ಪಿಕೊಳ್ಳುತ್ತವೆ.

ಭಾರತ-ಅಮೇರಿಕ 123 ಒಪ್ಪಂದದಲ್ಲಿ ಎರಡೂ ದೇಶಗಳ ನಡುವೆ ಒಪ್ಪಂದದ ಪಾಲನೆಯ ವಿಷಯದಲ್ಲಿ ಬೇರೆ ದೇಶಗಳ ಜೊತೆ ಅಮೇರಿಕ ಮಾಡಿಕೊಂಡ 123 ಒಪ್ಪಂದಗಳಲ್ಲಿರುವಂತೆ ಯಾವುದೋ ವಿವಾದ ಉದ್ಭವಿಸಿದರೆ ಅಂತರರಾಷ್ಟ್ರೀಯ ಕಾನೂನುಗಳಿಗನುಗುಣವಾಗಿ ಒಂದು ವಿಶೇಷ ಟ್ರಿಬ್ಯೂನಲ್ ಅಥವಾ ಅಂತರಾಷ್ಟ್ರೀಯ ನ್ಯಾಯಮಂಡಳಿಗೆ ವಿವಾದವನ್ನು ಒಪ್ಪಿಸುವ ಪ್ರಸ್ತಾಪವಿಲ್ಲ ಏಕೆ?



ಪ್ರಜಾವಾಣಿ ಚಿತ್ರ

ಈ ಒಪ್ಪಂದವನ್ನು ಅಮೇರಿಕ ಮುಂದೆ ಮುರಿದು ಹಾಕಿದರೂ ತನ್ನ ಹೊಣೆಗಾರಿಕೆಗಳನ್ನು ನಿರ್ವಹಿಸದಿದ್ದರೂ, ಈ ಒಪ್ಪಂದಕ್ಕಾಗಿ ಮಾಡಿಕೊಂಡ ಅಂತರರಾಷ್ಟ್ರೀಯ ಅಣುಶಕ್ತಿ ಆಯೋಗದ ತನಿಖೆಗಳು ಯಾವತ್ತೂ ಮುಂದುವರೆಯುತ್ತವೆ. ಪ್ರಧಾನಮಂತ್ರಿ ಲೋಕಸಭೆಯಲ್ಲಿ ಹೇಳಿಕೆ ನೀಡಿ ಘೋಷಿಸಿದ ಭಾರತ - ಅಮೇರಿಕ ನಡುವೆ ಸಮಾನ ಜವಾಬುದಾರಿಗಳು ಸಮಾನ ಶರತ್ತುಗಳು ಎಂಬ ತತ್ವವನ್ನು 123 ಒಪ್ಪಂದ ಏಕೆ ಉಲ್ಲಂಘಿಸಿದೆ? ಭಾರತವನ್ನು ನಿರಂತರವಾಗಿ ಅಂತರರಾಷ್ಟ್ರೀಯ ತನಿಖೆಗಳಿಗೆ ಒಪ್ಪಿಸಿಕೊಳ್ಳುವಂತೆ ಏಕೆ ಮಾಡಿದೆ?

ಅಮೇರಿಕದ ಕಾಯಿದೆಯಲ್ಲಿ ಇತರ ದೇಶಗಳೊಂದಿಗೆ ಅಮೇರಿಕ ಮಾಡಿಕೊಂಡ ಒಪ್ಪಂದಗಳಲ್ಲಿ ಒಪ್ಪಂದವನ್ನು ಅಮೇರಿಕ ಮುರಿಯುವುದಕ್ಕೆ ಸ್ಪಷ್ಟವಾಗಿ ಅಣ್ವಸ್ತ್ರಗಳ ತಯಾರಿಕೆ ಸಂಬಂಧಿಸಿದ 4 ಕಾರಣಗಳನ್ನು ಮಾತ್ರ ನಮೂದಿಸಲಾಗಿದೆ. ಆದರೆ ಭಾರತದೊಂದಿಗೆ ಮಾಡಿಕೊಂಡ ಒಪ್ಪಂದದಲ್ಲಿ ಈ ನಾಲ್ಕು ಕಾರಣಗಳಿಗಾಗಿ ಮಾತ್ರ ಒಪ್ಪಂದವನ್ನು ಮುರಿಯಬಹುದು ಎಂಬ ಸ್ಪಷ್ಟ ಉಲ್ಲೇಖವನ್ನು ಮಾಡದೆ, ಯಾವುದೇ ವಿಷಯದ ಬಗ್ಗೆ ಇಬ್ಬರಿಗೂ ಒಪ್ಪಿತವಾದ ಪರಿಹಾರ ಸಾಧ್ಯವಿಲ್ಲದೆ ಹೋದರೆ ಒಪ್ಪಂದವನ್ನು ಮುರಿಯಬಹುದು ಎಂಬ ಸ್ಪಷ್ಟ ಉಲ್ಲೇಖವನ್ನು ಮಾಡದೆ, ಯಾವುದೇ ವಿಷಯದ ಬಗ್ಗೆ ಇಬ್ಬರಿಗೂ ಒಪ್ಪಿತವಾದ ಪರಿಹಾರ ಸಾಧ್ಯವಿಲ್ಲದೆ ಹೋದರೆ ಒಪ್ಪಂದವನ್ನು ಮುರಿಯಬಹುದು ಎಂಬ ಉಲ್ಲೇಖಕ್ಕೆ ಏಕೆ ಅವಕಾಶ ನೀಡಲಾಗಿದೆ? ಅಣ್ವಸ್ತ್ರಗಳಿಗೆ ಸಂಬಂಧಿಸದ ಕಾರಣವನ್ನು ಎತ್ತಿ ಒಪ್ಪಂದ ಮುರಿಯಲು ಏಕೆ ಅವಕಾಶ ನೀಡಲಾಗಿದೆ.

ಅಮೇರಿಕದಿಂದ ಆಮದು ಮಾಡಿಕೊಂಡ ಅಣು ಇಂಧನ ಮಾತ್ರವಲ್ಲದೆ ಇತರೆ ದೇಶಗಳಿಂದ ಆಮದು ಮಾಡಿಕೊಂಡ ಅಣು ಇಂಧನವನ್ನು ಅಮೇರಿಕದಿಂದ ಆಮದು ಮಾಡಿಕೊಂಡ ದುಬಾರಿ ಬೆಲೆಯ ಸಂಸ್ಕರಣ ಕೇಂದ್ರದಲ್ಲಿಯೇ ಸಂಸ್ಕರಿಸಬೇಕು. ಆಮೂಲಕ ಇತರ ದೇಶಗಳಿಂದ ತಂದ ಇಂಧನದ ಮೇಲೆ ಕೂಡ ಅಮೇರಿಕದ ನಿಯಂತ್ರಣ ಉಂಟಾಗುವಂತೆ ಒಪ್ಪಂದದಲ್ಲಿ ಅವಕಾಶ ಮಾಡಿಕೊಡಲಾಗಿದೆ ಏಕೆ?

ಅಂತರರಾಷ್ಟ್ರೀಯ ತನಿಖೆಗೆ ಭಾರತದ ಅಣುಶಕ್ತಿ ಸ್ಥಾವರಗಳು ಮತ್ತಿತರ ಕೇಂದ್ರಗಳನ್ನು ನಿರಂತರವಾಗಿ ತನಿಖೆಗೆ ಒಳಪಡಿಸುವುದಲ್ಲದೆ ಅಮೇರಿಕ ದೇಶದ ತನಿಖೆದಾರರು ಕೂಡ ಭಾರತದ ಸ್ಥಾವರಗಳನ್ನು ತನಿಖೆ ಮಾಡಲು ಏಕೆ ಅವಕಾಶ ನೀಡಲಾಗಿದೆ?

ಹೀಗೆ 16 ಪ್ರಶ್ನೆಗಳನ್ನು ಎತ್ತಲಾಗಿದೆ

ಚೀನಾ ದೇಶ ಅಮೇರಿಕದೊಂದಿಗೆ ಮಾಡಿಕೊಂಡ 123 ಒಪ್ಪಂದದಲ್ಲಿ ಆಯಾ ದೇಶದ ಕಾನೂನುಗಳು ಒಪ್ಪಂದದ ಜಾರಿಯನ್ನು ವಿಫಲಗೊಳಿಸಬಾರದು ಎಂಬ ಸ್ಪಷ್ಟ ಉಲ್ಲೇಖವನ್ನು ಭಾರತದ ಮಾಡಿಕೊಂಡಿರುವ ಒಪ್ಪಂದದಲ್ಲಿ ಕೈಬಿಡಲಾಗಿದೆ. ಮಾತ್ರವಲ್ಲ, ಆಯಾ ದೇಶದ ಕಾನೂನುಗಳಿಗೆ ಅನುಗುಣವಾಗಿ ಈ ಒಪ್ಪಂದ ಜಾರಿಗೆ ಬರುತ್ತದೆಂದು ಹೈಡ್ ಕಾಯಿದೆಯ ಹಾನಿಕರ ಪ್ರತಿಬಂಧಕಗಳಿಗೆ ಸಿಲುಕಿಕೊಳ್ಳುವಂತೆ ಏಕೆ ಮಾಡಲಾಗಿದೆ.

ವಿಶಾಖಪಟ್ಟಣದಲ್ಲಿ ನೌಕಾ ಕವಾಯತ್ತಿನ ವಿರುದ್ಧ ಜನರ ಎಚ್ಚರಿಕೆ


"ನೀವು ಬುಶ್ ಜತೆಗೋ, ಅಥವಾ ದೇಶದ ಜನತೆಯ ಜತೆಗೋ, ನೀವೇ ನಿರ್ಧರಿಸಿ"

ಹೀಗೆಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ ಕಾರಟ್ ರವರು ಕಾಂಗ್ರೆಸ್ ಮತ್ತು ಯುಪಿಎ ಮುಖಂಡತ್ವಕ್ಕೆ ಸಲಹೆ ಮಾಡಿದ್ದಾರೆ. ಅವರು ಸೆಪ್ಟಂಬರ್ 8ರಂದು ವಿಶಾಖಪಟ್ಟಣದಲ್ಲಿ ಒಂದು ಬೃಹತ್ ರ್‍ಯಾಲಿಯನ್ನುದ್ದೇಶಿಸಿ ಮಾತನಾಡುತ್ತಿದ್ದರು. ಅಮೆರಿಕಾದೊಡಗೂಡಿ ನಡೆಸುತ್ತಿರುವ ನೌಕಾ ಕವಾಯತ್ತುಗಳನ್ನು ವಿರೋಧಿಸಿ ಕೊಲ್ಕತಾ ಮತ್ತು ಚೆನ್ನೈನಿಂದ ಹೊರಟ ಎಡಪಕ್ಷಗಳ ಜಾಥಾಗಳು ಪೂರ್ವ ಕರಾವಳಿಯುದ್ದಕ್ಕೂ ಸಂಚರಿಸಿ ವಿಶಾಖಪಟ್ಟಣದಲ್ಲಿ ಒಟ್ಟುಗೂಡಿದವು. ಅಲ್ಲಿಂದ ಕೆಲವೇ ಮೈಲುಗಳ ದೂರದಲ್ಲಿ ಅಮೆರಿಕಾದ ನೇತೃತ್ವದಲ್ಲಿ ನಡೆಯುತ್ತಿದ್ದ ನೌಕಾ ಕವಾಯತ್ತುಗಳನ್ನು ವಿರೋಧಿಸಿ ಅಲ್ಲಿಯೇ ರಾಮಕೃಷ್ಣ ಬೀಚಿನಲ್ಲಿ ಸೇರಿದ್ದ ಜನಸಾಗರವನ್ನು ಉದ್ದೇಶಿಸಿ ಮಾತನಾಡಿದ ಪ್ರಕಾಶ ಕಾರಟ್‌ರವರು ಕಾಂಗ್ರೆಸ್ ಮತ್ತು ಯುಪಿಎ ಮುಖಂಡರು ತಾವು ತಮ್ಮ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಭಾರತದ ಜನತೆಗೆ ನೀಡಿದ ವಚನಗಳಿಗೆ ಬದ್ಧರೋ ಅಥವಾ ಅಮೆರಿಕನ್ ಅಧ್ಯಕ್ಷ ಜಾರ್ಜ್ ಬುಶ್ ರವರಿಗೆ ನೀಡಿದ ವಚನಗಳಿಗೆ ಬದ್ಧರೋ ಎಂದು ನಿರ್ಧರಿಸಬೇಕಾದ ಸಮಯವೀಗ ಬಂದಿದೆ ಎಂದರು. ಯುಪಿಎ ಮುಖಂಡರು ದೇಶದ ಹಿತದೃಷ್ಟಿಯಿಂದ ಒಂದು ನಿರ್ಣಯ ಕೈಗೊಳ್ಳುತ್ತಾರೆ ಎಂದು ಅವರು ಆಶಿಸಿದರು. ಐದು ದಿನಗಳ ಜಾಥಾದುದ್ದಕ್ಕೂ ಸಭೆಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನರ ಹಾಜರಾತಿ ಎಡಪಕ್ಷಗಳು ಹೇಳಬೇಕೆಂದಿದ್ದುದು ಜನಗಳಿಗೆ ತಲುಪಿದೆ ಎಂಬುದನ್ನು ಸೂಚಿಸುತ್ತದೆ ಎಂದರು.

ಇನ್ನೊಂದು ಜಾಥಾದ ನೇತೃತ್ವ ವಹಿಸಿದ್ದ ಸಿಪಿಐ ಪ್ರಧಾನ ಕಾರ್ಯದರ್ಶಿ ಎ.ಬಿ.ಬರ್ದನ್ ರವರು ಮಾತನಾಡುತ್ತ ಈ ಕವಾಯತ್ತು ಎನ್‌ಡಿಎ ಸರಕಾರ ಆರಂಭಿಸಿದ ಅಮೆರಿಕಾದೊಂದಿಗೆ ಶಾಮೀಲಿನ ಉತ್ತುಂಗ, ಇವು ಕೇವಲ ಸಾಮಾನ್ಯ ಕವಾಯತು ಎಂದು ಸರಕಾರ ಸುಳ್ಳು ಹೇಳುತ್ತಿದೆ, ನಿಜವಾದ ಉದ್ದೇಶ ನಾಟೋ ಮಿಲಿಟರಿ ಕೂಟದ ಒಂದು ಏಶ್ಯನ್ ರೂಪವನ್ನು ರಚಿಸುವುದು ಎಂದು ಅವರು ಟೀಕಿಸಿದರು.

ಸಾಗರ ತಟದಲ್ಲಿ ಸೇರಿದ್ದ ಜನಸಾಗರವನ್ನು ಉದ್ದೇಶಿಸಿ ಫಾರ್ವರ್ಡ್ ಬ್ಲಾಕಿನ ಪ್ರಧಾನ ಕಾರ್ಯದರ್ಶಿ ದೇಬಬ್ರತ ಬಿಸ್ವಾಸ್ , ಆರ್‌ಎಸ್‌ಪಿ ಪ್ರಧಾನ ಕಾರ್ಯದರ್ಶಿ ಅಬನಿ ರಾಯ್, ಸಿಪಿಐ(ಎಂ)ನ ಪೊಲಿಟ್ ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ ಮತ್ತು ಸಿಪಿಐ ರಾಷ್ಟ್ರೀಯ ಕಾರ್ಯದರ್ಶಿ ಸುಧಾಕರ ರೆಡ್ಡಿ ಮಾತನಾಡಿದರು. ಸಿಪಿಐ(ಎಂ) ಆಂಧ್ರ ರಾಜ್ಯ ಕಾರ್ಯದರ್ಶಿ ಬಿ.ವಿ.ರಾಘವಲು ಮತ್ತು ಸಿಪಿಐ ರಾಜ್ಯ ಕಾರ್ಯದರ್ಶಿ ಕೆ.ನಾರಾಯಣ ಅಧ್ಯಕ್ಷತೆ ವಹಿಸಿದ್ದರು.

ಈ ಕಡಲು, ಈ ಭೂಮಿ ನಮ್ಮದು ಆ ಭಾನು ನಮ್ಮದು.... ಸಮುದ್ರ ದಂಡೆಯ ಮೇಲೆ ಜನಸಾಗರ



ಜ್ವರದಿಂದ ನಾಲ್ಕು ಮಹಿಳೆಯರ ಸಾವು

ಮಹಿಳೆಯರ ಹೋರಾಟಕ್ಕೆ ಅಧಿಕಾರಿಗಳು ಓಡಿಬರಬೇಕಾಯ್ತು

ಇತ್ತೀಚಿನ ದಿನಗಳಲ್ಲಿ ಬೆಂಗಳೂರಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವ್ಯಾಪಕವಾಗಿ ಜ್ವರದಿಂದ ಜನರು ನರಳುತ್ತಿದ್ದಾರೆ. ಹಣವಿರುವ ಜನರು ದೊಡ್ಡ ದೊಡ್ಡ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದರೆ, ಕೂಲಿ ನಾಲಿ ಮಾಡುವ ಜನರು ಹಣವಿಲ್ಲದೆ ಸರ್ಕಾರಿ ಆಸ್ಪತ್ರೆಯ ಚೂರು ಪಾರು ಚಿಕಿತ್ಸೆ ಪಡೆದು ತಿಂಗಳು ಗಟ್ಟಲೆ ವಾಸಿಯಾಗದೆ ನರಳುವ ಪರಿಸ್ಥಿತಿ ಉಂಟಾಗಿದೆ. ಜ್ವರಕ್ಕೆ ಕಾರಣ ತಿಳಿಸದೆ ವೈದ್ಯರು ಒಂದು ಕಡೆ ಜ್ವರ ವಾಸಿಯಾಗದಿರುವುದರ ಆತಂಕಪಡುವ ರೋಗಿಗಳು ಒಂದು ಕಡೆ ಈ ರೀತಿಯ ಪರಿಸ್ಥಿತಿ ನಗರದ ಸುತ್ತಮುತ್ತ ವ್ಯಾಪಿಸಿದೆ. ಇದಕ್ಕೆ ಪೂರಕವಾಗಿ ಕೃಷ್ಣರಾಜಪುರದ ಪ್ರದೇಶಕ್ಕೆ ಹೊಂದಿಕೊಂಡ ವಿಜನಾಪುರ ಕೊತ್ತೂರು ಪ್ರದೇಶದಲ್ಲಿ ಸಹ ಜ್ವರದ ಸಮಸ್ಯೆ ಇಡೀ ಪ್ರದೇಶಕ್ಕೆ ಹಬ್ಬಿ ಕೆ.ಆರ್.ಪುರಂ ಸರ್ಕಾರಿ ಆಸ್ಪತ್ರೆ ಮತ್ತು ಪ್ರದೇಶದ ಸುತ್ತಮುತ್ತಲಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಳನ್ನು ಪಡೆಯುತ್ತಿದ್ದರು. ದಿನಾಂಕ: 28.08.2007 ಮತ್ತು 29.08.2007 ಎರಡು ದಿನಗಳಲ್ಲಿ ಜ್ವರದಿಂದ ಬಳಲಿದವರಲ್ಲಿ 3 ಜನ ಮಹಿಳೆಯರ ಅಲ್ಲದೇ ಒಂದು ಮಗು ಸಾವನ್ನಪ್ಪಿರುತ್ತದೆ. ಆಯಿಷಾಬಾನು 27 ವರ್ಷ, ಗುಲ್ನಾಜ್ 32 ವರ್ಷ, ಪ್ಯಾರಿಜಾನ್ 67 ವರ್ಷ, ಸೈಯದ್ ಅಜೀಸ್ 10 ತಿಂಗಳ ಮಗು. ವಿಷಯ ತಿಳಿದ ಕೆಲವು ಜ್ವರದಿಂದ ನರಳುತ್ತಿರುವ ಜನ ಆತಂಕಗೊಂಡಿದ್ದಾರೆ. ಅಲ್ಲಿನ ಜನವಾದಿ ಮಹಿಳಾ ಸಂಘಟನೆ ಮುಖಂಡರು ಗೌರಮ್ಮನವರ ನೇತೃತ್ವದಲ್ಲಿ ತಕ್ಷಣ ಸತ್ತಿರುವವರ ಮನೆಗೆ ಭೇಟಿ ಕೊಟ್ಟು ವಿಷಯವನ್ನು ಸಂಗ್ರಹಿಸಿದ್ದಾರೆ. ಮಹಿಳೆಯರು, ಸಂಬಂಧಿಕರೂ ಕಾಯಿಲೆಯಿಂದ ನರಳುವುದನ್ನು ಗಮನಿಸಿ ತಕ್ಷಣ ಸಂಬಂಧಪಟ್ಟ ಅಧಿಕಾರಿಗಳಿಗೂ ವಿಷಯ ಮುಟ್ಟಿಸಲಾಯಿತು ಮತ್ತು ಸ್ಥಳೀಯವಾಗಿದ್ದ ಮಾಧ್ಯಮದ ಮಿತ್ರರಿಗೂ ಸುದ್ದಿ ತಲುಪುತ್ತಿದ್ದಂತೆಯೇ ಟಿ.ವಿ. 9 ಚಾನೆಲ್‌ಗಳಲ್ಲಿ ಪ್ರದೇಶದ ಚಿತ್ರಣ ಸ್ಥಳೀಯರ ನೋವಿನ ನುಡಿಗಳು, ಪ್ರಸಾರವಾಗುತ್ತಲೇ ಸಂಬಂಧಿಸಿದ ಅಧಿಕಾರಿಗಳ ದಂಡೇ ಪ್ರದೇಶಕ್ಕೆ ಓಡಿ, ಬಂದು ಜನರಲ್ಲಿ ಆತಂಕ ಪಡಬೇಡಿ ಜ್ವರ ಯಾವುದೆಂದು ಪರೀಕ್ಷೆ ಹೇಳುತ್ತವೆ ಎಂದು ಹೇಳಿದರು. ಸ್ಥಳೀಯ ಇಷ್ಟೆಲ್ಲಾ ಅನಾಹುತವಾದರೂ ತಿರುಗಿ ನೋಡದೆ ಇದ್ದ ಆರೋಗ್ಯ ಸಚಿವರು ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾದ ಮೇಲೆ ಕಾಯಿಲೆ ಬಗ್ಗೆ ತನಿಖೆ ನಡೆಸುವುದಾಗಿ ಹೇಳಿಕೆ ನೀಡಿದರು. ಅಲ್ಲದೆ ಸಂಬಂಧಿಸಿದ ಮೇಲಿನ ಅಧಿಕಾರಿಗಳನ್ನು ಸ್ಥಳಕ್ಕೆ ಕಳುಹಿಸಿದರು. 3 ದಿನಗಳ ಕಾಲ ಚಿಕಿತ್ಸೆ ಶಿಬಿರವನ್ನು ನಡೆಸಿ, 150 ಜನರಿಗೆ ಮೊದಲ ದಿನ ಚಿಕಿತ್ಸೆ ನೀಡಿ 59 ಜನರಿಗೆ ರಕ್ತ ಪರೀಕ್ಷೆ ಮಾಡಿರುತ್ತಾರೆ. 2 ದಿನ 23 ಜನರಿಗೆ ರಕ್ತ ಪರೀಕ್ಷೆಗೊಳಗಾಗಿದ್ದಾರೆ. 7 ರಿಂದ 8 ಜನರನ್ನು ಕೆ.ಆರ್.ಪುರಂ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿ 1 ವಾರಗಳ ಕಾಲ ಚಿಕಿತ್ಸೆ ನೀಡಿರುತ್ತಾರೆ. ಜನವಾದಿ ಮಹಿಳಾ ಸಂಘಟನೆಯಿಂದ ಜ್ವರಕ್ಕೆ ಕಾರಣ ಕಂಡು ಹಿಡಿಯಲು ಮತ್ತು ಪ್ರದೇಶದಲ್ಲಿನ ಸ್ವಚ್ಛತೆ ಕಾಪಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಒತ್ತಡವನ್ನು ತರಲಾಯಿತು. ಅಧಿಕಾರಿಗಳು ಇಡೀ 2ರಿಂದ 3 ದಿನ ವಿಜನಾಪುರ ಪ್ರದೇಶ ಬಿಟ್ಟು ಕದಲದೆ. ಚರಂಡಿಗಳ ಸ್ವಚ್ಛತೆ ಔಷಧಿ ಸಿಂಪಡಿಸುವಿಕೆ ಕಾರ್ಯಕ್ರಮಗಳನ್ನು ಜರೂರಾಗಿ ಮಾಡಿ ಸ್ವಚ್ಛಗೊಳಿಸಿದರು.

ಈಗ ಒಂದಷ್ಟು ಕೊಳ ಹೋಗಿದೆ. ಔಷಧಿ ಸಿಂಪಡಿಸುವಿಕೆ ಕಾರ್ಯಕ್ರಮ ನಡೆಯುತ್ತಿದೆ. ಒಂದಷ್ಟು ರೋಗಿಗಳಿಗೆ ಚೇತರಿಕೆ ಬಂದಿದೆ. ಈಗ ವೈದ್ಯರು ರಕ್ತ ಪರೀಕ್ಷೆಯನ್ನು ಮಾಡಿ ಜನರು ಆತಂಕಪಡಬೇಡಿ ವೈರಲ್ ಫೀವರ್ ಇದ್ದು, ಮಲೇರಿಯಾ ಇಲ್ಲ ಮತ್ತು ಕೆಲವರಿಗೆ ಟೈಫಾಯಿಡ್ ಜ್ವರ ಎಂದು ತಿಳಿಸಿ ಚಿಕಿತ್ಸೆಯನ್ನು ನೀಡಿರುತ್ತಾರೆ. ಜನವಾದಿ ತಕ್ಷಣ ಮಧ್ಯಪ್ರವೇಶ ಮಾಡಿದ ಫಲವಾಗಿ ಕಿವಿಕೇಳದೇ ಕುಳಿತಿದ್ದ ಅಧಿಕಾರಿಗಳು ಓಡೋಡಿ ಬರುವಂತಾಯಿತು. ಈ ಕೆಲಸದಲ್ಲಿ ಅಲ್ಲಿನ ಜೆ.ಎಂ.ಎಸ್. ಮುಖಂಡರಾದ ಅನುಸೂಯ. ನಸ್ರೀನ್ ತಾಜ್ ಮಲ್ಲಿಕಾ ಗಾಯತ್ರಿ, ಸುಶೀಲಮ್ಮ ಶಮೀಮ್, ಮುಬೀನ್, ಮುಮ್ತಾಜ್ ಮತ್ತು ಸಿಪಿಐ(ಎಂ)ನ ಮುಖಂಡರಾದ ರಮೇಶ ಗೌರಮ್ಮನವರ ನೇತೃತ್ವದಲ್ಲಿ ಬೆಂಗಳೂರು ಮಹಾನಗರಪಾಲಿಕೆಗೆ ಚುರುಕು ಮುಟ್ಟಿಸಿದಿದ್ದಾರೆ.

ಆರ್ಥಿಕ ಉದಾರೀಕರಣದ ದಾಳಿಗಳ ವಿರುದ್ಧ ದುಡಿಯುವ ಜನಗಳ ಬಲಿಷ್ಟ ಮೈತ್ರಿಕೂಟ

ಕಾರ್ಮಿಕರು ಮತ್ತು ರೈತಾಪಿ ಜನಗಳ ಜಂಟಿ ಸಮಾವೇಶದ ಕರೆ

ಒಟ್ಟು ಮೂರು ಕೋಟಿ ಸದಸ್ಯತ್ವವಿರುವ ದುಡಿಯುವ ಜನಗಳ ವಿವಿಧ ವಿಭಾಗಗಳ ಮೂರು ಸಂಘಟನೆಗಳ ಒಂದು ವಿಶಿಷ್ಟ ಸಮಾವೇಶ ಅಗಸ್ಟ್ 31 ರಂದು ನವದೆಹಲಿಯ ಮಾವಳಂಕರ್ ಸಭಾಂಗಣದಲ್ಲಿ ನಡೆಯಿತು. ಸಿಐಟಿಯು, ಅಖಿಲ



ಭಾರತ ಕಿಸಾನ್ ಸಭಾ (ಎಐಕೆಎಸ್) ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ(ಎಐಎಡಬ್ಲ್ಯುಯು) ಜಂಟಿಯಾಗಿ ಈ ಸಮಾವೇಶವನ್ನು ಏರ್ಪಡಿಸಿದ್ದವು. ನವ-ಉದಾರೀಕರಣದ ಧಾಳಿಗಳು ತೀವ್ರಗೊಳ್ಳುತ್ತಿದ್ದು ಅದರ ವಿರುದ್ಧ ಹೋರಾಟಗಳೂ ದೊಡ್ಡ ಪ್ರಮಾಣದಲ್ಲಿ ನಡೆಯಬೇಕಾಗಿದೆ. ಆದ್ದರಿಂದ ಕಾರ್ಮಿಕ ವರ್ಗ ಮತ್ತು ರೈತಾಪಿ ಜನಗಳು ಒಂದು ಬಲಿಷ್ಟ ಮೈತ್ರಿಕೂಟವನ್ನು ಕಟ್ಟಿಕೊಂಡು ತಮ್ಮ ಬದುಕಿನ ಮೇಲಿನ ಧಾಳಿಗಳನ್ನು ಎದುರಿಸಬೇಕು ಎಂದು ಈ ಸಮಾವೇಶ ಕರೆ ನೀಡಿದೆ.

ಕಳೆದ ಒಂದೂವರೆ ದಶಕದ ಸಾಮ್ರಾಜ್ಯಶಾಹಿ ಜಾಗತೀಕರಣ-ವಿರೋಧಿ ಹೋರಾಟದಲ್ಲಿ ದೇಶದ ಕಾರ್ಮಿಕ ವರ್ಗ 11 ಸಾರ್ವತ್ರಿಕ ಮುಷ್ಕರಗಳನ್ನು ನಡೆಸಿದೆ. ವಿವಿಧ ದುಡಿಯುವ ಜನವಿಭಾಗಗಳು ತಂತಮ್ಮ ವಲಯಗಳಲ್ಲಿ ಹೋರಾಟಗಳನ್ನು ನಡೆಸಿದ್ದಾರೆ. ಇದರಿಂದ ಸ್ವಲ್ಪ ಮಟ್ಟಿಗೆ ಈ ದಾಳಿಗಳನ್ನು ಹಿಮ್ಮೆಟ್ಟಿಸಲು ಕೂಡಾ ಸಾಧ್ಯವಾಗಿದೆ. ಆದರೂ ನವ-ಉದಾರೀಕರಣವಾದಿ ನೀತಿಗಳ ತೀವ್ರತೆ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಅವು ನಡೆಸಿರುವ ಹುಚ್ಚಾಟಗಳನ್ನು ಎದುರಿಸಲು ಇನ್ನೂ ದೊಡ್ಡ ಪ್ರಮಾಣದ ಚಳುವಳಿಯ ಅಗತ್ಯವಿದೆ ಎಂಬ ಭಾವನೆ ಕಳೆದ ಜನವರಿಯಲ್ಲಿ ಬೆಂಗಳೂರಿನಲ್ಲಿ ನಡೆದ 12ನೇ ಸಿಐಟಿಯು ಸಮ್ಮೇಳನದಲ್ಲಿ ವ್ಯಕ್ತವಾಗಿತ್ತು. ಇದರ ಪರಿಣಾಮವಾಗಿ ಎಪ್ರಿಲ್ 18 ರಂದು ದೇಶಾದ್ಯಂತ ಕೋಟ್ಯಾಂತರ ಕಾರ್ಮಿಕರು, ರೈತರು ಮತ್ತು ಕೃಷಿಕೂಲಿಕಾರರು ಸಿಐಟಿಯು, ಅಖಿಲ ಭಾರತ ಕಿಸಾನ್ ಸಭಾ ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಜಂಟಿ ಕರೆಗೆ ಓಗೊಟ್ಟು ಮತ ಪ್ರದರ್ಶನಗಳನ್ನು ನಡೆಸಿದರು. ಆ ಕಾರ್ಯಕ್ರಮ ದೇಶದಲ್ಲಿ ಉಂಟು ಮಾಡಿದ ಉತ್ಸಾಹದ ಹಿನ್ನೆಲೆಯಲ್ಲಿ ಈ ರಾಷ್ಟ್ರೀಯ ಸಮಾವೇಶ ನಡೆಯಿತು.

ಸಿಐಟಿಯು ಅಧ್ಯಕ್ಷರಾದ ಎಂ.ಕೆ. ಪಂಧೆ, ಎಐಕೆಎಸ್ ಕಾರ್ಯದರ್ಶಿ ನೂರುಲ್ ಹುದಾ ಹಾಗೂ ಎಐಎಡಬ್ಲ್ಯುಯು ಅಧ್ಯಕ್ಷರಾದ ರಾಮಯ್ಯ... ...ಒಂಡ್ಡ ಅಧ್ಯಕ್ಷ ಮಂಡಳಿ ನಡೆಸಿಕೊಟ್ಟ ಈ ಸಮಾವೇಶದಲ್ಲಿ ವಿವಿಧ ರಾಜ್ಯಗಳಿಂದ ಬಂದ ಈ ಮೂರು ಸಂಘಟನೆಗಳ ಸುಮಾರು 900 ಪ್ರತಿನಿಧಿಗಳು ಭಾಗವಹಿಸಿದ್ದರು. ಎಐಕೆಎಸ್ ಅಧ್ಯಕ್ಷರಾದ ಎಸ್ ಆರ್ ಪಿಳ್ಳೆಯವರು ಮಂಡಿಸಿದ ಸಮಾವೇಶದ ಘೋಷಣೆಯ ಮೇಲಿನ ಚರ್ಚೆಯಲ್ಲಿ 40 ಪ್ರತಿನಿಧಿಗಳು ಭಾಗವಹಿಸಿದರು.

ಘೋಷಣೆಯನ್ನು ಮಂಡಿಸುತ್ತ ಪಿಳ್ಳೆಯವರು ಜಾಗತೀಕರಣದ ನೀತಿಗಳಿಂದಾಗಿ ಕೃಷಿ ಬಿಕ್ಕಟ್ಟು ಉಲ್ಬಣಗೊಂಡಿರುವುದನ್ನು ಮತ್ತು ಉದ್ಯೋಗ - ನಷ್ಟ ಕೈಗಾರಿಕಾ ಬೆಳವಣಿಗೆಯ ಪರಿಸ್ಥಿತಿಯನ್ನು ವಿವರಿಸಿದರು. ಕೆಲವರಿಗೆ ಮಾತ್ರ ಸಮೃದ್ಧಿ ತಂದು ಎಲ್ಲೆಲ್ಲೂ ಸಂಕಟಗಳನ್ನೆ ಹೆಚ್ಚಿಸುತ್ತಿರುವ ಈ ನೀತಿಗಳ ವಿರುದ್ದ ಐಕ್ಯ ಪ್ರತಿರೋಧವನ್ನು ತೀವ್ರಗೊಳಿಸುವ ದಿಕ್ಕಿನಲ್ಲಿ ನಾವು ಕೆಲಸ ಮಾಡಬೇಕಾಗಿದೆ ಎಂದರು. ಪಂಧೆಯವರು ಮಾತನಾಡುತ್ತ ಹೇಗೆ ಈ ನೀತಿಗಳು ಆರ್ಥಿಕವನ್ನು ವಿಕೃತಗೊಳಿಸಿವೆ, ಶ್ರಮಜೀವಿಗಳ ಶ್ರಮದ ಹೆಚ್ಚೆಚ್ಚು ಪಾಲು ಬಂಡವಳಿಗರ ಮತ್ತು ಭೂಮಾಲಕರ ಪಾಲಾಗುತ್ತಿದೆ ಎಂದು ವಿವರಿಸಿದರು. ಎಐಎಡಬ್ಲ್ಯುಯು ಜಂಟಿ ಕಾರ್ಯದರ್ಶಿ ಹನ್ನನ್ ಮೊಲ್ಲ ದೇಶದಲ್ಲಿ ಕೃಷಿ ಕೂಲಿಕಾರರ ದಯನೀಯ ಸ್ಥಿತಿಯನ್ನು ವಿವರಿಸುತ್ತಾ ಅವರಿಗೆ ಈಗ ವರ್ಷಕ್ಕೆ 60-70 ದಿನಗಳ ಕೆಲಸವೂ ಸಿಗುತ್ತಿಲ್ಲ, ಅದೂ ಕೂಡಾ ಮನುಷ್ಯಯೋಗ್ಯವಲ್ಲದ ಕೂಲಿಗೆ ಎಂದರು. ಇಂತಹ ನೀತಿಗಳ ವಿರುದ್ಧ ದೇಶವ್ಯಾಪಿ ಕಾರ್ಯಾಚರಣೆ ನಡೆಯಬೇಕಾಗಿದೆ, ಅದಕ್ಕೆ ಮೊದಲು ತೀವ್ರ ಪ್ರಚಾರ ನಡೆಯಬೇಕಾಗಿದೆ ಎಂದು ಕರೆ ನೀಡಿದರು.

ಸಮಾವೇಶವನ್ನುದ್ದೇಶಿಸಿ ಸಿಐಟಿಯು ಕಾರ್ಯದರ್ಶಿ ಕೆ ಹೇಮಲತಾ, ಅಖಿಲ ಭಾರತ ರಾಜ್ಯ ಸರಕಾರೀ ನೌಕರರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸುಕೊಮಲ್ ಸೇನ್ ಹಾಗೂ ಅಖಿಲ ಭಾರತ ವಿಮಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ವೇಣುಗೋಪಲ್ ಕೂಡಾ ಮಾತನಾಡಿದರು. ಭಾರತ- ಅಮೆರಿಕ ಪರಮಾಣು ಒಪ್ಪಂದದ ವಿರುದ್ಧ ಹಾಗೂ ಆಂಧ್ರ ಪ್ರದೇಶದಲ್ಲಿ ನಡೆಯುತ್ತಿರುವ ಭೂಹೋರಾಟವಕ್ಕೆ ಸೌಹಾರ್ದ ವ್ಯಕ್ತಪಡಿಸಿ ಎರಡು ನಿರ್ಣಯಗಳನ್ನೂ ಸಮಾವೇಶ ಕೈಗೊಂಡಿತು.

ಮತಪ್ರದರ್ಶನ

ಸಮಾವೇಶದ ಮುಖ್ಯ ಘೋಷಣೆ 10 ಮುಖ್ಯ ಪ್ರಶ್ನೆಗಳನ್ನು ಗುರುತಿಸಿ ಜಿಲ್ಲಾ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಜಂಟಿ ಸಮಾವೇಶಗಳನ್ನು ಮತ್ತು ಬೃಹತ್ ಮತಪ್ರದರ್ಶನಗಳನ್ನು ನಡೆಸಬೇಕೆಂದು ಕರೆ ನೀಡಿದೆ. ಮೊದಲ ಹಂತದಲ್ಲಿ ಸ್ಥಳೀಯ, ಜಿಲ್ಲಾ ಮತ್ತು ರಾಜ್ಯಮಟ್ಟಗಳಲ್ಲಿ ಈ ಮೂರು ಸಂಘಟನೆಗಳ ಜಂಟಿ ಸಮಿತಿಗಳನ್ನು ರಚಿಸಿ ದೇಶಾದ್ಯಂತ ಪ್ರಚಾರಾಂದೋಲನ ನಡೆಸಿ ಅಂತಿಮವಾಗಿ ಸಂಸತ್ತಿನ ಮುಂದೆ ಒಂದು ಬೃಹತ್ ಮತಪ್ರದರ್ಶನ ನಡೆಸಬೇಕು ಎಂದು ಸಮಾವೇಶ ಕರೆ ನೀಡಿದೆ.

ಮೈಕೊ ಕಾಟ್ರಾಕ್ಟ್ ಎಂಪ್ಲಾಯೀಸ್ ಅಸೋಸಿಯೇಷನ್ ಆಡುಗೋಡಿಯಲ್ಲಿ ಸಂಘಟಿಸಿದ್ದ ಭಗತ್‌ಸಿಂಗ್ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಭಗತ್ ಸಿಂಗ್ ಭಾವಚಿತ್ರಕ್ಕೆ ಗೌರವ ಸಲ್ಲಿಕೆ. ಹೊಸತು ಪತ್ರಿಕೆಯ ಸಂಪಾದಕರಾದ ಡಾ. ಜಿ.ರಾಮಕೃಷ್ಣ, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎನ್.ಉಮೇಶ್, ಕಾರ್ಮಿಕರು ಚಿತ್ರದಲ್ಲಿದ್ದಾರೆ.



ಸಂಸತ್ ಕಲಾಪಗಳಿಗೆ ಬಿಜೆಪಿಯ ಅಡ್ಡಿಯೇಕೆ?

ಸಂಸತ್ತಿನಲ್ಲಿ ಭಾರತ-ಅಮೆರಿಕ ಪರಮಾಣು ಒಪ್ಪಂದದ ಬಗ್ಗೆ ಚರ್ಚೆ ನಡೆಯಲಿಲ್ಲ. ಬಿಜೆಪಿ ನಿಯಮ 184ರ ಪ್ರಕಾರ ಚರ್ಚೆಗೆ ನೋಟೀಸು ಕೊಟ್ಟಿತ್ತು. ಇದರಲ್ಲಿ ಚರ್ಚೆಯ ನಂತರ ಮತದಾನ ನಡೆಯಬೇಕು. ಆದರೆ ಇದಕ್ಕೆ ಅವಕಾಶ ನೀಡಲು ಸಾಧ್ಯವಿರಲಿಲ್ಲ. ಹಿಂದೆಂದೂ ಸಂಸತ್ತು ನಿಯಮ 184ರ ಅಡಿಯಲ್ಲಿ ಯಾವ ಸಂಧಿ ಅಥವಾ ಒಪ್ಪಂದವನ್ನು ಕೂಡಾ ಚರ್ಚಿಸಿಲ್ಲ. ಆದ್ದರಿಂದ ಮತದಾನದ ಅವಕಾಶವಿಲ್ಲದ ನಿಯಮ 193ರ ಅಡಿಯಲ್ಲಿ ಚರ್ಚಿಸಬಹುದೆಂದು ಲೋಕಸಭಾಧ್ಯಕ್ಷರು ಸೂಚಿಸಿದ್ದರು. ಬಿಜೆಪಿಯವರು ಕೂಡಾ ಇದಕ್ಕೆ ಒಪ್ಪಿದ್ದರು. ಆದರೆ ಅವರು ಸಂಸತ್ತಿನ ಕಲಾಪಗಳೇ ನಡೆಯದಂತೆ ಮಾಡಿದರು, ಆ ಮೂಲಕ ಈ ಪರಮಾಣು ಒಪ್ಪಂದದ ಮೇಲೆ ಚರ್ಚೆ ನಡೆಯದಂತೆ ಮಾಡಿದರು.


ಭಾರತ-ಅಮೆರಿಕಾ ಪರಮಾಣು ಒಪ್ಪಂದದ ಕುರಿತು ಜೆಪಿಸಿ ರಚಿಸಬೇಕೆಂಬ ತಮ್ಮ ಬೇಡಿಕೆಯನ್ನು ಪರಿಗಣಿಸುವಂತೆ ಮಾಡಲು ಹೀಗೆ ಮಾಡಬೇಕಾಯಿತು ಎಂಬುದು ಬಿಜೆಪಿ ಸಮರ್ಥನೆ. ಆದರೆ ನಿಜಕಥೆ ಬೇರೆಯೇ ಇದೆ. ತಮ್ಮ ವಿರೋಧ ಕೇವಲ ತೋರಿಕೆಗೆ ಎಂಬ ವಾಸ್ತವತೆ ಬಯಲಾಗಬಹುದು ಎಂಬ ಭಯವೇ ಇದಕ್ಕೆ ಕಾರಣವಾಗಿದೆ.

ಅಡ್ಡಿಪಡಿಸುವ ಆಟ

ಈ ಪರಮಾಣು ಒಪ್ಪಂದವನ್ನು ಅಧ್ಯಯನ ಮಾಡಲು ಸರಕಾರ ಜಂಟಿ ಸಂಸದೀಯ ಸಮಿತಿ(ಜೆಪಿಸಿ) ರಚಿಸಬೇಕೆಂಬ ತಮ್ಮ ಒತ್ತಾಯವನ್ನು ಒಪ್ಪಲಿಲ್ಲವಾದ್ದರಿಂದ ತಾವು ಹೀಗೆ ಮಾಡಬೇಕಾಗಿ ಬಂತು ಎಂಬುದು ಅವರ ಸಮರ್ಥನೆ. ಆದರೆ ನಿಯಮ 184ರ ಅಡಿಯಲ್ಲಿ ಚರ್ಚೆ ನಡೆಯಲು ಸಾಧ್ಯವಿಲ್ಲ ಎಂದು ಒಪ್ಪಿಕೊಂಡ ಮೇಲೆ ಜೆಪಿಸಿ ರಚಿಸಬೇಕೆಂಬ ಒತ್ತಾಯಕ್ಕೆ ಏನೂ ಅರ್ಥವಿಲ್ಲ ಎಂಬುದು ಪರಿಣತರ ಅಭಿಪ್ರಾಯ. ಆದರೂ ಅದು ಪಟ್ಟು ಹಿಡಿದು ಸಂಸತ್ತಿನ ಕಲಾಪಗಳು ನಡೆಯದಂತೆ ಸತತವಾಗಿ ಅಡ್ಡಿ ಪಡಿಸಿ ಸಂಸತ್ತನ್ನು ಅನಿರ್ದಿಷ್ಟ ಕಾಲ ಮುಂದೂಡುವಂತೆ ಮಾಡಿತು. ದುರದೃಷ್ಟವಶಾತ್, ಬಿಜೆಪಿಯ ಆಟ ಯಶಸ್ವಿಯಾಯಿತು.

ರೂಪುರೇಷೆ ಇವರದೇ


ಹೌದು, ಜೆಪಿಸಿಯ ಬಗ್ಗೆ ಅದರ ಪಟ್ಟು ಸಂಸತ್ತಿನಲ್ಲಿ ಪರಮಾಣು ಒಪ್ಪಂದದ ಬಗ್ಗೆ ಚರ್ಚೆ ನಡೆಯದಂತೆ ಮಾಡುವುದಕ್ಕಾಗಿಯೇ ಎಂಬುದು ಹಲವು ರಾಜಕೀಯ ವೀಕ್ಷಕರ ವಿಶ್ಲೇಷಣೆ. ಏಕೆಂದರೆ ಚರ್ಚೆ ನಡೆದಿದ್ದರೆ ಬಿಜೆಪಿಯ ಗೋಸುಂಬೆತನ, ಅದರ



ಸಾಮ್ರಾಜ್ಯಶಾಹೀ-ಪರ ಸ್ವರೂಪ ಬಯಲಿಗೆ ಬರುತ್ತಿತ್ತು. ಎಷ್ಟೆಂದರೂ ಅಮೆರಿಕಾದೊಂದಿಗೆ ರಕ್ಷಣಾ ಸಹಕಾರವನ್ನು ನರಸಿಂಹರಾಯರ ಕಾಂಗ್ರೆಸ್ ಸರಕಾರ ಆರಂಭಿಸಿದರೂ ಈ ಸಾಮರಿಕ ಮೈತ್ರಿಯ ರೂಪುರೇಷೆ ತಯಾರಾದದ್ದು ಬಿಜೆಪಿ ನೇತೃತ್ವದ ಎನ್‌ಡಿಎ ಯ ಆರು ವರ್ಷಗಳ ಅಧಿಕಾರಾವಧಿಯಲ್ಲಿ ತಾನೇ?

'ಸ್ವಾಭಾವಿಕ ಮಿತ್ರ'ನೊಂದಿಗೆ ಗುಪ್ತ ಮಾತುಕತೆ

ಮೇ 1998ರಲ್ಲಿ ಪೋಖ್ರಾನ್ ನಲ್ಲಿ




ಅಣುಸ್ಫೋಟ ನಡೆಸಿ ಮಹಾಕಾರ್ಯ ಮಾಡಿದೆ ಎಂದು ಬೀಗಿದ ಎನ್‌ಡಿಎ ಸರಕಾರ ಅಮೆರಿಕಾ ನಿರ್ಬಂಧಗಳನ್ನು ಹೇರಿದಾಗ ಕಕ್ಕಾಬಿಕ್ಕಿಯಾಯಿತು. ಅದನ್ನು ತೆಗೆಸಲು ಅಮೆರಿಕಾದ ಸ್ಟ್ರೋಬ್ ಟಾಲ್ಬೋಟ್ ಮತ್ತು ಆಗ ವಿದೇಶಾಂಗ ಮಂತ್ರಿಯಾಗಿದ್ದ ಜಸ್ವಂತ್ ಸಿಂಗ್ ನಡುವೆ ಎಂಟು ದೀರ್ಘ ಸುತ್ತುಗಳಲ್ಲಿ ಗುಪ್ತ ಮಾತುಕತೆಗಳು ನಡೆದವು. ಇದಕ್ಕನುಗುಣವಾಗಿ 1999ರಲ್ಲಿ ಭಾರತ ಮೊದಲ ಬಾರಿಗೆ ಅಮೆರಿಕಾದ ಅಂತರಾಷ್ಟ್ರೀಯ ಮಿಲಿಟರಿ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿತು. 2000ದಲ್ಲಿ ಅಧ್ಯಕ್ಷ ಕ್ಲಿಂಟನ್ ರವರ ಭಾರತ ಭೇಟಿಯ ನಂತರ ಈ ಮೈತ್ರಿ ಆಳಗೊಂಡಿತು. ಎನ್‌ಡಿಎ ಆಳ್ವಿಕೆಯಲ್ಲಿ ಭಾರತ ಸರಕಾರ ಅಮೆರಿಕಾದ ಕ್ಷಿಪಣಿ ರಕ್ಷಣಾ ಕಾರ್ಯಕ್ರಮವನ್ನು ಸ್ವಾಗತಿಸಿದ ಮೊದಲ ದೇಶ ಎಂದು ದಾಖಲಾಯಿತು. ಭಾರತ ಸಮಗ್ರ ಪರೀಕ್ಷಾ ನಿರ್ಬಂಧ ಸಂಧಿ ಅಥವಾ ಸಿಟಿಬಿಟಿ ಪಕ್ಷಪಾತದಿಂದ ಕೂಡಿದೆಯಾದ್ದರಿಂದ ಅದಕ್ಕೆ ಸಹಿಹಾಕುವುದಿಲ್ಲ ಎಂದು ಬಹಳ ಕಾಲದಿಂದ ಹೇಳುತ್ತ ಬಂದಿದೆ. ಆದರೆ ವಾಜಪೇಯಿ ಸರಕಾರ ಅಮೆರಿಕನ್ ಸಾಮ್ರಾಜ್ಯಶಾಹಿಯನ್ನು ಸಂತುಷ್ಟಗೊಳಿಸಲು ಅದಕ್ಕೆ ಸಹಿ ಹಾಕಲೂ ಸಿದ್ಧವಾಗಿತ್ತು. ಅಮೆರಿಕ ಸಂಯುಕ್ತ ಸಂಸ್ಥಾನ ಭಾರತವನ್ನು ತನ್ನ "ಸ್ವಾಭಾವಿಕ ಮಿತ್ರ", ಎಂದು ಪರಿಗಣಿಸಬೇಕು ಎಂಬ ಆಕಾಂಕ್ಷೆಯನ್ನು ಕೂಡಾ ವಾಜಪೇಯಿ ವ್ಯಕ್ತಪಡಿಸಿದ್ದರು. ನ್ಯೂಯಾರ್ಕ್‌ನಲ್ಲಿ ಸಪ್ಟಂಬರ್ 11ರ ಧಾಳಿ ನಡೆದಾಗ ತಕ್ಷಣವೇ ವಾಜಪೇಯಿಯವರು ಅಧ್ಯಕ್ಷ ಬುಶ್ ರವರಿಗೆ ಪತ್ರ ಬರೆದು ಅವರಾಗಿ ಕೇಳದಿದ್ದರೂ ಭಯೋತ್ಪಾದನೆಯ ವಿರುದ್ಧ ಅಮೆರಿಕಾದ ಸಮರದಲ್ಲಿ ಭಾರತದ ಮಿಲಿಟರಿ ಸೌಲಭ್ಯಗಳನ್ನು ಬಳಸಿಕೊಳ್ಳಬಹುದು ಎಂದು ಆಹ್ವಾನ ನೀಡಿದರು! ಅಂತಿಮವಾಗಿ ಭಾರತದ ಬದಲು ಅಮೆರಿಕಾವು ಪಾಕಿಸ್ತಾನವನ್ನು ಆರಿಸಿಕೊಂಡಾಗ ಇದು "ಭೂಗೋಳದ ತರ್ಕ" ಎಂದು ಅಡ್ವಾಣಿ ಮರುಗಿದರು. ಅಮೆರಿಕಾದೊಂದಿಗೆ ಸಾಮರಿಕ ಮೈತ್ರಿಗೆ ತಮ್ಮ ಆತುರವನ್ನು ಶ್ರುತ ಪಡಿಸಲು ಗೃಹ ಮಂತ್ರಿ ಅಡ್ವಾಣಿ ಅಮೆರಿಕಕ್ಕೆ ಭೇಟಿ ನೀಡಿದರಷ್ಟೇ ಅಲ್ಲ, ಭದ್ರತಾ ಸಹಕಾರವನ್ನು ಚರ್ಚಿಸುವ ಹೆಸರಿನಲ್ಲಿ ಸಿಐಎ ಮುಖ್ಯ ಕಚೇರಿಗೂ ಭೇಟಿ ನೀಡಿ ಬಂದರು!

ಪಾಲುದಾರಿಕೆ ವಿಸ್ತರಣೆ ಮಾತುಕತೆ

2002ರಲ್ಲಿ ಬುಶ್ ಆಡಳಿತ ತನ್ನ ರಾಷ್ಟ್ರೀಯ ಭದ್ರತಾ ಕಾರ್ಯತಂತ್ರವನ್ನು ರೂಪಿಸಿತು. "ಅಮೆರಿಕಾದ ಹಿತದೃಷ್ಟಿಯಿಂದ ಭಾರತದೊಡನೆ ಒಂದು ಬಲಿಷ್ಟ ಸಂಬಂದ ಅಗತ್ಯವಾಗಿದೆ ಎಂಬ ನಂಬಿಕೆಯ ಆಧಾರದಲ್ಲಿ ಭಾರತದೊಡನೆ ತನ್ನ ದ್ವಿಪಕ್ಷೀಯ ಸಂಬಂಧವನ್ನು ಪರಿವರ್ತಿಸುವ ಕಾರ್ಯವನ್ನು ಅಮೆರಿಕಾ ಕೈಗೆತ್ತಿಕೊಂಡಿದೆ" ಎಂದು ಅದರಲ್ಲಿ ಹೇಳಲಾಗಿತ್ತು. ಇದಕ್ಕನುಗುಣವಾಗಿ 2004ರಲ್ಲಿ ವಾಜಪೇಯಿ ಸರಕಾರದ ಅಡಿಯಲ್ಲಿ ಸಾಮರಿಕ ಪಾಲುದಾರಿಕೆ ಸುತ್ತಿನ ಮಾತುಕತೆಗಳು ಆರಂಭವಾದವು . ಇವನ್ನು ಬಾಹ್ಯಾಕಾಶ, ಪರಮಾಣು, ಉನ್ನತ ತಂತ್ರಜ್ಞಾನ ಮತ್ತು ಕ್ಷಿಪಣಿ ರಕ್ಷಣಾ ರಂಗಗಳಿಗೆ ವಿಸ್ತರಿಸಲಾಯಿತು.

ಸಂಸತ್ತಿನಲ್ಲಿ ಈಗ ಮನಮೋಹನ್ ಸಿಂಗ್ ಸರಕಾರ ಮಾಡಿರುವ ಒಪ್ಪಂದದ ಕುರಿತು ಚರ್ಚೆ ನಡೆದಿದ್ದರೆ ಇವೆಲ್ಲ ಮತ್ತು ಬಿಜೆಪಿ ಅಮೆರಿಕಾದೊಂದಿಗೆ ಸಾಮರಿಕ ಸಂಬಂಧದಲ್ಲಿ ಪ್ರಯತ್ನಿಸಿದ್ದ ಇನ್ನೂ ಹಲವು ಅಂಶಗಳು ಬಯಲಿಗೆ ಬರುತ್ತಿದ್ದವು. ಈ ಮೂಲಕ ಈಗಿನ ಪರಮಾಣು ಒಪ್ಪಂದಕ್ಕೆ ಅದರ ವಿರೋಧ ಕೇವಲ ತೋರಿಕೆಗೆ ಮಾತ್ರ ಎಂದು ಬಯಲಾಗುತ್ತಿತ್ತು. ಸಂಸತ್ತಿನ ಕಲಾಪಗಳಿಗೆ ಸತತವಾಗಿ ಅಡ್ಡಿಪಡಿಸಿ ಅಧಿವೇಶನವನ್ನು ಮುಂದೂಡುವಂತೆ ಮಾಡಿದ್ದು ಈ ಕಾರಣಕ್ಕಾಗಿಯೇ ಎಂದು ಬೇರೆ ಹೇಳಬೇಕೇ? ○

ಆಂದೋಲನವೋ? ಬಾಂಬೋ?



ಆಂಧ್ರದಲ್ಲಿ ಜನಾಂದೋಲನ ಗರಿಗೆದರಿದೆ. ರಾಜ್ಯದ ಲಕ್ಷ ಲಕ್ಷ ಜನ ಬಡವರು ನಿವೇಶನ, ಭೂಮಿಗಾಗಿ ಆಂದೋಲನಕ್ಕೆ ಧುಮುಕಿದ್ದಾರೆ. ಚಳುವಳಿ ಹೊಸ ಹೊಸ ಪ್ರದೇಶಗಳಿಗೆ ವಿಸ್ತರಿಸುತ್ತಾ ವ್ಯಾಪಿಸುತ್ತಿದೆ.

ತಮ್ಮ ನೆಲೆ ಜನ ಬೆಂಬಲ ಕಳೆದುಕೊಳ್ಳುತ್ತಾ ಕಂಗಾಲಾಗಿರುವ ನಕ್ಸಲೀಯರು ಆಂಧ್ರದ ಮಾಜಿ ಮುಖ್ಯಮಂತ್ರಿ ಜನಾರ್ಧನ ರೆಡ್ಡಿ ಮತ್ತು ಪತ್ನಿ ರಾಜಲಕ್ಷ್ಮಿಯವರಿದ್ದ ಕಾರಿಗೆ ಬಾಂಬ್ ಇಟ್ಟು, ನಾಲ್ಕು ಜನ ಕಾಂಗ್ರೆಸ್ ಕಾರ್ಯಕರ್ತರನ್ನು ಕೊಂದಿದ್ದಾರೆ.

ಜನಸಮೂಹಗಳನ್ನು ಬಡಿದೆಬ್ಬಿಸುವ, ಎಚ್ಚರಿಸುವ ಸಾಮೂಹಿಕ ಆಂದೋಲನ ಕೈಬಿಟ್ಟು ಬಾಂಬ್ ಬಂದೂಕಿನ ಆರಾಧನೆಯನ್ನೇ ಮುಂದುವರೆಸುತ್ತಿರುವ ನಕ್ಸಲೀಯರು ಇನ್ನೂ ಎಷ್ಟು ದಿನ ಇದೇ ದಾರಿಯಲ್ಲಿ ಸಾಗುವರೋ ಕಾದು ನೋಡಬೇಕಿದೆ.

ಮುಸ್ಲಿಂ ಉಗ್ರಗಾಮಿಗಳು ಬಾಂಬ್ ಸ್ಫೋಟಿಸಿ ಅಮಾಯಕರನ್ನು ಕೊಂದ ಬೆನ್ನಲ್ಲೇ ನಡೆದ ಇನ್ನೊಂದು ಬಾಂಬ್ ಪ್ರಕರಣ ಇದಾಗಿದೆ. ○

ಗಣಿಗಾರ ಗಣರಾಯ

ಗಣಿಗಾರ ಗಣರಾಯ ಎಂಬ [illegible] ಕೆಲಿ
ಕೂಡುತಿಹುದು ಸಹಜವೇ ಆ ಹಣದ ಥೈಲಿ
ಎಷ್ಟೆಂದರೂ ಅವನು ಗಣರಾಯ ನೋಡಿ
ಗಣಿಗಾರ ಕೈ ಮುಗಿದ ಕಪ್ಪವನು ನೀಡಿ

- ವಿಡಂಬಾರಿ

ಅಂಗವಿಕಲರನ್ನು ತರಬೇತಿಗೊಳಿಸುವ ಸಮನ್ವಯ ಶಿಕ್ಷಣಕ್ಕೆಂದು ಸರ್ಕಾರವು ನೀಡುತ್ತಿರುವ ಅನುದಾನದಲ್ಲಿ ಶಿಕ್ಷಕರಿಗೂ ಸರಿಯಾದ ವೇತನ ನೀಡದೇ, ಶಿಕ್ಷಣಕ್ಕೂ ಖರ್ಚು ಮಾಡದೇ ಸ್ವಯಂಸೇವಾ ಸಂಸ್ಥೆಗಳೇ ನುಂಗಿ ಹಾಕುತ್ತಿವೆ.

ಅಂಗವಿಕಲರ ಹಣ ಶಿಕ್ಷಕರ ಸಂಬಳ ದೋಚುತ್ತಿರುವ ಎನ್‌ಜಿಓಗಳು

ಆರ್.ರಾಮಕೃಷ್ಣ



ನಾಲ್ಕೈದು ದಶಕಗಳ ಹಿಂದೆ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಶಿಕ್ಷಕರಿಗೆ ಸರ್ಕಾರದಿಂದ ನೇರವಾಗಿ ವೇತನ ನೀಡುವ ಪದ್ಧತಿ ಇರಲಿಲ್ಲ. ಖಾಸಗಿ ಸಂಸ್ಥೆಗೆ ಅನುದಾನ ಬರುತ್ತಿತ್ತು. ಅದರಿಂದ ಆ ಸಂಸ್ಥೆಗಳು ಶಿಕ್ಷಕರಿಗೆ ವೇತನ ನೀಡುತ್ತಿದ್ದವು.

ಇಂತಹ ಪರಿಸ್ಥಿತಿಯಲ್ಲಿ ಸರ್ಕಾರದ ಅನುದಾನವೆಷ್ಟೊ? ಶಿಕ್ಷಕರು ಪಡೆದ ಸಂಬಳವೆಷ್ಟೋ? ಸಂಸ್ಥೆಯವರು ತೋರಿದ ಕಡೆ ಶಿಕ್ಷಕರು ಸಹಿ ಮಾತ್ರ ಹಾಕಬೇಕಿತ್ತು. ಅವರು ಬರೆ ಕೊಂಡದ್ದೇ ಮೊತ್ತ. ಈ ಅನ್ಯಾಯ ವಂಚನೆಯ ವಿರುದ್ಧ ಶಿಕ್ಷಕರು ದೊಡ್ಡ ಚಳುವಳಿಯನ್ನೇ ಮಾಡಿದರು. ಸುದೀರ್ಘ ಹೋರಾಟದ ನಂತರ ಕೊನೆಗೆ ನೇರವಾಗಿ ಶಿಕ್ಷಕರ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆಯಾಗುವಂತಹ ವ್ಯವಸ್ಥೆ ಜಾರಿಗೆ ಬಂತು. ಅನುದಾನಿತ ಸಂಸ್ಥೆಯ ಶಿಕ್ಷಕರು ಕನಿಷ್ಟ ಗೌರವದಿಂದ ಬದುಕುವ ವ್ಯವಸ್ಥೆಯಾಯಿತು.

ಈಗ ಮತ್ತೊಮ್ಮೆ ಅದೇ ಹಳೆಯ ಕಾಲದ ವಂಚಕ ವ್ಯವಸ್ಥೆಯೇ ಜಾರಿಗೆ ಬರುತ್ತಿದೆ. ಸ್ವಲ್ಪ ಭಿನ್ನ ಸ್ವರೂಪದಲ್ಲಿ, ರಾಜ್ಯದಲ್ಲಿ ವಿಕಲ ಚೇತನ (ಅಂಗವಿಕಲ) ಮಕ್ಕಳಿಗೆ ಅಗತ್ಯವಾದ ವಿಶೇಷ ಶಿಕ್ಷಣ ನೀಡಲು ಶ್ರಮಿಸುತ್ತಿರುವ ಸಂಪನ್ಮೂಲ ಶಿಕ್ಷಕರ ಬದುಕು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಶಿಕ್ಷಣ ವಿರೋಧಿ ನೀತಿಯಿಂದ ಮತ್ತು ಸರ್ಕಾರೇತರ ಸಂಘ (ಎನ್‌ಜಿಓ) ಗಳ ಲೂಟಿಕೋರ ನೀತಿಯಿಂದಾಗಿ ಅಡಕತ್ತರಿಯಲ್ಲಿ ಸಿಲುಕಿದಂತಾಗಿದೆ.

ಶಿಕ್ಷಣದ ಮಹತ್ವವನ್ನು ಸಾರುವ ಸರ್ಕಾರಿ ಜಾಹಿರಾತುಗಳನ್ನು ನಾವು ಟಿ.ವಿ.ಗಳಲ್ಲಿ ನೋಡಬಹುದು. ಅದರಲ್ಲಿ ಶಿಕ್ಷಣವಿಲ್ಲದ ತಾಯಿ ವ್ಯಾಪಾರಿಯಿಂದ ಹಣದ ಲೆಕ್ಕಾಚಾರದಲ್ಲಿ ಮೋಸ ಹೋಗುತ್ತಾಳೆ. ಆದರೆ ಶಾಲೆ ಕಲಿಯುತ್ತಿರುವ ಮಗಳಿಗೆ ಅದು ಅರ್ಥವಾಗಿ ವಂಚನೆ ತಪ್ಪಿಸುತ್ತಾಳೆ.

ಆದರೆ ಇಲ್ಲೇನು ನಡೆದಿದೆ ನೋಡಿ. ಸರ್ಕಾರ ಶಿಕ್ಷಕರಿಗೆ ಸಂಬಳವೆಂದು ತಿಂಗಳಿಗೆ 6-7 ಸಾವಿರ ರೂ ನೀಡುತ್ತದೆ. ಆದರೆ ಅದನ್ನು ಪಡೆದುಕೊಳ್ಳುವ ಎನ್‌ಜಿಓ ಸಂಸ್ಥೆಗಳು ಅದರಲ್ಲಿ ದೊಡ್ಡ ಪಾಲು ಮುರಿದುಕೊಂಡು 1000-1500, 2000 ಹೀಗೆ ಒಂದಿಷ್ಟು ಕೈಗೆ ಉದುರಿಸಿ ಸಹಿ ಹಾಕಿಸಿಕೊಳ್ಳುತ್ತಾರೆ. ಎಷ್ಟೋ ಜನಕ್ಕೆ ಅದೂ ಇಲ್ಲ. ಅದೇ ಹಿಂದಿನಂತೆ ಅವರು ಬರೆದುಕೊಂಡಿದ್ದೆ ಮೊತ್ತ. ಪಾಠ ಹೇಳುವ ಶಿಕ್ಷಕರಿಗೆ ಈ ಗತಿ. ಇಂತಹ ಜನ ಅಮಾಯಕರು ಅನಕ್ಷರಸ್ಥರು, ಮುಗ್ಧ ಹಳ್ಳಿಗರು ಸಿಕ್ಕರೆ ಇನ್ನೇನು ಮಾಡಿಯಾರು.

ರಾಜ್ಯದಲ್ಲಿ ಸುಮಾರು 1127 ಸಂಪನ್ಮೂಲ ಶಿಕ್ಷಕರಿದ್ದಾರೆ. ಇವರು ಸುಮಾರು 25 ಸಾವಿರಕ್ಕೂ ಹೆಚ್ಚು ಮಕ್ಕಳಿಗೆ ಶಿಕ್ಷಣ ನೀಡುತ್ತಿದ್ದಾರೆ. ಇವರು ಸಾಮಾನ್ಯ ಮಕ್ಕಳಂತಲ್ಲದೆ ಅಂಗವಿಕಲ ರಾಗಿರುವುದರಿಂದ ಅವರಿಗೆ ವಿಶೇಷ ಶಿಕ್ಷಣವೇ ಬೇಕು. ಇದಕ್ಕೆ ಅಗತ್ಯ ತರಬೇತಿಯನ್ನು ಈ ಶಿಕ್ಷಕರು ಪಡೆದವರಾಗಿದ್ದಾರೆ. ಈ ಅಂಗವಿಕಲ ಮಕ್ಕಳೆಲ್ಲಾ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳೇ. ಆದರೆ ಇತರ ಮಕ್ಕಳಿಗೆ ಸರಿ ಸಮಾನವಾಗಿ ಇವರು ಕಲಿಯಲಾರದವರಾಗಿರುವುದರಿಂದ ಇವರಿಗೆ ಈ ವಿಶೇಷ ಸಮನ್ವಯ ಶಿಕ್ಷಣ ನೀಡಲಾಗುತ್ತದೆ. ಇದರ ಸಂಬಂಧವಾಗಿ ರಾಜ್ಯದಲ್ಲಿ 118 ಸ್ವಯಂ ಸೇವಾ ಸಂಸ್ಥೆ (ಎನ್‌ಜಿಓ)ಗಳು ಕೇಂದ್ರ ಸರ್ಕಾರದ ಅನುದಾನ ಪಡೆಯುತ್ತಿವೆ. ಆದರೆ ಶಿಕ್ಷಕರ ಅನ್ನ ಕಸಿದುಕೊಂಡು ಅವರ ಹೊಟ್ಟೆ ಮೇಲೆ ಹೊಡೆಯುವ ಈ ಸಂಸ್ಥೆಗಳ ಕೆಲಸಕ್ಕೆ ಸಾಟಿಯೇ ಇಲ್ಲ ಎನ್ನುವಂತಾಗಿದೆ. ಕೇಂದ್ರ ಸರ್ಕಾರದಿಂದ ಕರ್ನಾಟಕ ರಾಜ್ಯಕ್ಕೆ ವಾರ್ಷಿಕ ಸುಮಾರು 11 ಕೋಟಿಗಳಷ್ಟು ಹಣ ಬಿಡುಗಡೆಯಾಗುತ್ತಿದ್ದು, ಇದರಲ್ಲಿ [illegible] ಎನ್‌ಜಿಓ ಗಳ ಮಾಲೀಕರ [illegible] ಜೇಬು, ತಿಜೋರಿ ತುಂಬುತ್ತಿರುವ ಪಾಲೇ ಅಧಿಕ.

ಇವೆಲ್ಲಾ ಯಾಕೆ: ಸರ್ಕಾರವು ಜಾಗತೀಕರಣದ ಮಂತ್ರ ಹೇಳುತ್ತಿದೆ. ಸರ್ಕಾರಕ್ಕೆ ಜವಾಬ್ದಾರಿ ಕಡಿಮೆ ಎನ್ನುತ್ತದೆ ಜಾಗತೀಕರಣ ಅದಕ್ಕಾಗಿ ಖಾಸಗೀಕರಣ, ಶಿಕ್ಷಣದ ಖಾಸಗೀಕರಣ ಜಾಗತೀಕರಣವಾದಿಗಳು ಸರ್ಕಾರವು ಯೋಜನೆಗಳನ್ನೆಲ್ಲಾ ಸರ್ಕಾರೇತರ ಸ್ವಯಂ ಸೇವಾ ಸಂಘಗಳಿಗೆ ವಹಿಸಿಕೊಡ ಬೇಕೆನ್ನುತ್ತಾರೆ. ಆಗಲೇ ಯೋಜನೆಗಳು ಯಶಸ್ಸು ಕಾಣುತ್ತವೆ ಎಂಬ ವಾದಗಳಿವೆ. ಹೀಗಾಗಿ ಇಂತಹ ನೀತಿಗಳು ಬರುತ್ತಿದೆ.

ಜನಸೇವೆ, ಪರಿಸರ ಸಂರಕ್ಷಣೆ, ರೋಗಿಗಳ ಸೇವೆ, ಇತ್ಯಾದಿಗಳ ಹೆಸರಿನಲ್ಲಿ ಕೆಲಸ ಮಾಡುವ ಸಾವಿರಾರು ಸರ್ಕಾರೇತರ ಸ್ವಯಂ ಸೇವಾ (ಎನ್‌ಜಿಓ) ಸಂಸ್ಥೆಗಳು ನಮ್ಮ ದೇಶದಲ್ಲಿವೆ. ಇದರಲ್ಲಿ ಕೆಲವು ಸಾಮಾಜಿಕ ಉದ್ದೇಶದಿಂದ ದುಡಿಯುವ ಸಂಸ್ಥೆಗಳು ಇರಬಹುದು. ಘೋಷಿತ ಉದ್ದೇಶಕ್ಕೆ ಬದ್ಧವಾದ ಕೆಲವು ಪ್ರಾಮಾಣಿಕ ವ್ಯಕ್ತಿಗಳು ಇರಬಹುದು.

ಆದರೆ ಇದರಲ್ಲಿ ಎಷ್ಟೋ ಸಂಸ್ಥೆಗಳಿಗೆ ವಿದೇಶಿ ಹಣ ಬರುತ್ತದೆ. ವಿದೇಶಿ ಹಣ ಕಬಳಿಸಲೆಂದೇ ಎನ್‌ಜಿಓ ಸ್ಥಾಪಿಸಿರುವವರಿಗೇನೂ ಕಡಿಮೆಯಿಲ್ಲ. ಅವರಲ್ಲಿ ರಾಜ್ಯ-ಕೇಂದ್ರ ಸರ್ಕಾರಗಳ ಯೋಜನೆಗಳ ಹಣವನ್ನು ನೆಕ್ಕಲು ಸ್ಥಾಪಿಸಲಾದ ಸಂಸ್ಥೆಗಳದ್ದೂ ದೊಡ್ಡ ಸಂಖ್ಯೆಯೇ. ಸಂಪನ್ಮೂಲ ಶಿಕ್ಷಣದ ಕೆಲಸದಲ್ಲಿ ತೊಡಗಿರುವ ಸಾವಿರಕ್ಕೂ ಹೆಚ್ಚು ಸಂಸ್ಥೆಗಳಲ್ಲಿ ಇಂಥವೇ ಜಾಸ್ತಿ. ಇವುಗಳಲ್ಲಿ ಬೆಂಗಳೂರಿನ ಸಮರ್ಥನಂ ಅಂಧ ಮಕ್ಕಳ ಶಾಲೆ, ಸರ್ವೋದಯ ವಿದ್ಯಾ ಸಂಸ್ಥೆ ಮುಂತಾದವುಗಳು ವಿದೇಶಿ ಅನುದಾನವನ್ನು ಪಡೆಯುತ್ತವೆಂದು ಹೇಳಲಾಗಿದೆ.

ಲೂಟಿ ಲೂಟಿ ಲೂಟಿ...

ಗುಲ್ಬರ್ಗಾ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಅಳ್ಳಗಿಯಲ್ಲಿ 'ವಿಜಾಪುರ ಸಮಗ್ರ ಗ್ರಾಮೀಣ ಅಭಿವೃದ್ಧಿ ಸಂಸ್ಥೆ'ಗೆ ವಾರ್ಷಿಕ [illegible] ಅನುದಾನದಲ್ಲಿ ಈ ವರ್ಷ ಮೂರು [illegible] ಕಂತಾಗಿ 12,23,913-00 ರೂ. ಬಿಡುಗಡೆಯಾಗಿದೆ. ಶಿಕ್ಷಕರ ವೇತನಕ್ಕೆಂದೇ 9 ಲಕ್ಷಕ್ಕಿಂತ ಹೆಚ್ಚು ಬಿಡುಗಡೆಯಾಗಿದೆ.

ಈ ಶಾಲೆಯ ಗುಳುಂ. ಕಿವಿಯ ತೊಂದರೆ ಇರುವ ಮಕ್ಕಳಿಗೆಂದು ಒಂದೇ ಶ್ರವಣ ಉಪಕರಣ ತಂದು ಒಬ್ಬರಾದ ಮೇಲೆ ಒಬ್ಬರಂತೆ ಅದನ್ನೇ ಎಲ್ಲರಿಗೂ ತೊಡಿಸಿ ಫೋಟೋ ತೆಗೆದು ವರದಿ ನೀಡಲಾಗಿದೆ.

ಇಲ್ಲಿ ಅಂಗವಿಕಲ ಮಕ್ಕಳಿಗೆ ಯಾವ, ಹಾಸ್ಟೆಲ್ ನಡೆಸಲಾಗುತ್ತಿಲ್ಲವಾದರೂ ಹಾಸ್ಟೆಲ್ ಹೆಸರಿನಲ್ಲಿ ದುಡ್ಡು ಹೊಡೆಯಲಾಗುತ್ತಿದೆ. ಎನ್.ಡಿ. ಗುಜರಿ ಈ ಸಂಸ್ಥೆ ಅಧ್ಯಕ್ಷರು.

ಬಿಜಾಪುರದ ಮುದ್ದೇಬಿಹಾಳದ ಸಿದ್ದಲಿಂಗೇಶ್ವರ ವಿದ್ಯಾವರ್ಧಕ ಸಂಸ್ಥೆಯ ಶಿಕ್ಷಕರ, ಅಂಗವಿಕಲ ಮಕ್ಕಳಿಗೆ ಸೇರಬೇಕಾದ ದುಡ್ಡು ಮುಕ್ಕಿರುವ ಪರಿನೋಡಿ. ಇಲ್ಲಿ ಶಿಕ್ಷಕರಿಗೆ ವೇತನ ಖೋತಾ. ಹಾಸ್ಟೆಲ್ ಇಲ್ಲ. ಆದರೆ ಅದರ ಹೆಸರಿನಲ್ಲಿ ದುಡ್ಡು ಸ್ವಾಹ: ಮಕ್ಕಳಿಗೆ ಅಗತ್ಯವಾದ ಕಲಿಕಾ ಉಪಕರಣಗಳೇ ಇಲ್ಲ.

'ಶ್ರೀ ಮಾತಾ ಕಾಳಿಕಾದೇವಿ ವಿದ್ಯಾವರ್ಧಕ ಸಂಘ' ಎಂಬ ಎನ್‌ಜಿಓ ದಾವಣಗೆರೆ ಜಿಲ್ಲೆಯ ಚನ್ನಗಿರಿಯಲ್ಲಿದೆ. ಈ ಸಂಸ್ಥೆಯ ಕತೆಯೂ ಅಷ್ಟೇ. ಜೊತೆಗೆ ದಬ್ಬಾಳಿಕೆ.

ಈ ಸಂಸ್ಥೆಗಳಲ್ಲಿ ಯಾರೂ ಯಾವುದನ್ನೂ ಪ್ರಶ್ನಿಸುವಂತಿಲ್ಲ. ಪ್ರತಿಭಟಿಸುವಂತಿಲ್ಲ. ಸಂಘ ಮಾಡುವಂತಿಲ್ಲ. ಸಂಘಟನೆ ಮಾಡಿದರು ಎಂಬ ಕಾರಣಕ್ಕೆ ಶಿಕ್ಷಕ ಹುದ್ದೆ ಕಳಕೊಂಡವರು ಹಲವರು. ಶಿಕ್ಷಕರ ಸಂಬಳದ ದೊಡ್ಡ ಭಾಗ.

ದಾವಣಗೆರೆಯಲ್ಲಿ 'ಸ್ಲಿವಮ್' ಎಂಬ ಸಂಸ್ಥೆಯೊಂದಿದೆ, ಸತೀಶ್ ಕೊಳೇನಹಳ್ಳಿ ಇದಕ್ಕೆ ಅಧ್ಯಕ್ಷರು. ಇವರು ಜೆಡಿ(ಎಸ್) ಪಕ್ಷದಿಂದ ದಾವಣಗೆರೆ ಎಪಿಎಂಸಿ ಗೆ ಅಧ್ಯಕ್ಷರಾಗಿಯೂ ಗೆದ್ದು ಬಂದಿದ್ದಾರೆ. ತಮ್ಮ ಸಂಸ್ಥೆಯಲ್ಲಿ ಶಿಕ್ಷಕರಿಗೆ ಸಂಬಳವನ್ನೇ ಕೊಟ್ಟಿಲ್ಲ. ಬಂದ ಅನುದಾನ ತಿಂದು ತೇಗಿದ್ದರೂ ಶಿಕ್ಷಕರಿಗೆ ಅನುದಾನ ಬಂದಿಲ್ಲ ಎನ್ನುತ್ತಾರೆ. ಗಟ್ಟಿಯಾಗಿ ಕೇಳಿದ ಶಿಕ್ಷಕರನ್ನು ಶಿಕ್ಷಣ ಇಲಾಖೆಯಲ್ಲಿನ ತಮ್ಮ ಪ್ರಭಾವ ಬಳಸಿ ಡಿಡಿಪಿಐ ಮುಂತಾದವರನ್ನು ಬಳಸಿಕೊಂಡು ವಿಪರೀತ ಕಿರುಕುಳವನ್ನೇ ನೀಡಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ(ಡಿಡಿಪಿಐ) ಜಿ.ನಾಗೇಂದ್ರಪ್ಪ ಅಸಲಿಗೆ ಅಸ್ತಿತ್ವದಲ್ಲೇ ಇಲ್ಲದ 'ನಾಮ ಮಾತ್ರ' ಸಂಸ್ಥೆಗಳಿಗೆ ಒಟ್ಟು ಲಕ್ಷಾಂತರ ಹಣ ಬಿಡುಗಡೆ ಮಾಡಿ ಸಸ್ಪೆಂಡ್ ಆಗಿದ್ದರೆಂದರೆ 'ಅಂಗ ವಿಕಲ' ಹೆಸರಿನಲ್ಲಿ ಇಲ್ಲಿ ಏನೆಲ್ಲಾ ನಡೆದಿದೆ ಎಂದು ತಿಳಿಯುತ್ತದೆ.

ಶಿಕ್ಷಕರು ವಿದ್ಯಾರ್ಥಿ ಶಿಕ್ಷಕರಿಗೆ ಇಲ್ಲಿ ಆಗುತ್ತಿರುವ ಈ ವಂಚನೆ ಮೋಸವನ್ನು ತಪ್ಪಿಸುವ ದೃಢ ನಿರ್ಧಾರ ಮಾಡಿದ್ದಾರೆ. ಹೋರಾಟದ ಹಾದಿ ಹಿಡಿದಿದ್ದಾರೆ.

'ಕರ್ನಾಟಕ ರಾಜ್ಯ ಸಂಪನ್ಮೂಲ ಶಿಕ್ಷಕರ ಸಂಘ' ರಚಿಸಿಕೊಂಡಿರುವ ಶಿಕ್ಷಕರು ಹಂತ ಹಂತವಾಗಿ ಹೋರಾಟ ಬಲಗೊಳಿಸುತ್ತಾ ಬರುತ್ತಿದ್ದಾರೆ.

ಮೇ ತಿಂಗಳಲ್ಲಿ ನಡೆದ ಹೋರಾಟದಲ್ಲಿ ಕೆಲವು ಬೇಡಿಕೆ ಈಡೇರಿದರೂ, ಪ್ರಮುಖ ಬೇಡಿಕೆಗಳನ್ನು ಹಾಗೇ ಇವೆ. ಸಂಪನ್ಮೂಲ ಶಿಕ್ಷಕರನ್ನು ಎನ್‌ಜಿಓ ಗಳ ಕಪಿಮುಷ್ಠಿಯಿಂದ ಬಿಡಿಸಬೇಕು. ಈ ಶಿಕ್ಷಣದ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಳ್ಳಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ, ಎಂಬ ತತ್ವದಂತೆ ತಮಗೆ ಸಮನಾದ ಶಾಲಾ ಶಿಕ್ಷಕರಿಗೆ ಸಿಗುವ ವೇತನ ಮತ್ತು ಸೌಕರ್ಯಗಳನ್ನು ನೀಡಬೇಕೆಂದೂ, ಅನುದಾನ ಬಳಕೆಯಲ್ಲಿ ಆಗುತ್ತಿರುವ ವಂಚನೆ ತಪ್ಪಿಸಿ ವಿದ್ಯಾರ್ಥಿಗಳಿಗೆ ಸೂಕ್ತ ಸೌಲಭ್ಯ, ಸೌಕರ್ಯ ನೀಡಬೇಕೆಂದು ಶಿಕ್ಷಕರು ಆಗ್ರಹಿಸುತ್ತಿದ್ದಾರೆ. ಸೆಪ್ಟೆಂಬರ್ 10 ರಿಂದ 4 ದಿನಗಳ ಕಾಲ ಬೆಂಗಳೂರಿನ ಬನಪ್ಪ ಪಾರ್ಕಿನಲ್ಲಿ ನಡೆದ ಹೋರಾಟದ ಫಲವಾಗಿ ಮುಖ್ಯಮಂತ್ರಿ ಗಳೊಂದಿಗೆ ಮಾತುಕತೆ ಯಾಗಿದೆ, ತನಿಖೆಯ ಭರವಸೆ ಸಿಕ್ಕಿದೆ.

ಮನವಿ ಭರವಸೆಗಳಿಗಿಂತ ತಮ್ಮ ಸಂಘಟಿತ ಹೋರಾಟ ಮೇಲೆ ವಿಶ್ವಾಸವಿಟ್ಟು ಶಿಕ್ಷಕರು ಮುಂದೆ ಹೆಜ್ಜೆ ಇಟ್ಟಿದ್ದಾರೆ. ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್ಐ) ಹಾಗೂ ಎಸ್‌ಎಫ್‌ಐ ಸಂಘಟನೆಗಳು ಇವರ ಬೆಂಬಲಕ್ಕೆ ನಿಂತಿವೆ.

ಸೋಮಪ್ಪ ಆಯಟಿ ಅಧ್ಯಕ್ಷರಾಗಿ, ಬೀರಪ್ಪ ಕಾರ್ಯದರ್ಶಿಯಾಗಿ, ಶ್ರೀನಿವಾಸ ಮೂರ್ತಿ ಸಂಚಾಲಕರಾಗಿ ಈ ಹೋರಾಟಕ್ಕೆ ನೇತೃತ್ವ ನೀಡುತ್ತಿದ್ದಾರೆ.

"39 ಲಕ್ಷ ಬಿಡುಗಡೆಯಾಗಿದೆ ಅನುದಾನವೇ ಬಂದಿಲ್ಲ ಅಂತಾರೆ" - ಸಂಪನ್ಮೂಲ ಶಿಕ್ಷಕರ ಅಳಲು



"2003 ರಿಂದ ನಾನು ಸಂಪನ್ಮೂಲ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ. 6879 ರೂ. ಸಂಬಳ ಕೊಡಬೇಕಾದ ಕಡೆ ಪಾಕೆಟ್ ಮನಿ ಅಂತ ಹದಿನೈದು ನೂರು ರೂಪಾಯಿ ಮಾತ್ರ ಕೊಡುತ್ತಿದ್ದಾರೆ. ಒಂದು [illegible] ಒಂದು [illegible] ದೆ. ಬಾಡಿಗೆ ಮನೆಯಲ್ಲಿದ್ದುಕೊಂಡು ನಾವು ಹೇಗೆ ಜೀವನ ಮಾಡಬೇಕು? ನನ್ನ ಗಂಡ ಈ ಉದ್ಯೋಗ ನಂಬಿ ಶಿಗ್ಗಾಂವ್‌ನಿಂದ ಮುದ್ದೆಬಿಹಾಳಕ್ಕೆ ಬಂದರು. ನಮ್ಮ ಸಂಸಾರದಲ್ಲಿ ಈ ವೇತನವೇ ಒಂದು ಅಡ್ಡಿಯಾಗಿದೆ. ನಮ್ಮ ಜೀವನ ಕೂಲಿಕಾರ್ಮಿಕರಿಗಿಂತ ಕಡೆಯಾಗಿದೆ. ಮುಷ್ಕರ ಮಾಡುತ್ತೇವೆ ಅಂದರೆ ಬೆಂಗಳೂರಿಗೆ ಹೋಗ್ರಿ, ಡೆಲ್ಲಿಗೆ ಬೇಕಾದ್ರೆ ಹೋಗಿ ಏನೂ ಆಗಲ್ಲ ಅಂತಾರೆ. ನನ್ನ ಹೆರಿಗೆ ಸಮಯದಲ್ಲೇ 7 ತಿಂಗಳು ಸಂಬಳ ಕೊಡಲಿಲ್ಲ"

ಸುಮಂಗಲ ಎಸ್.ಹಿರೇಮಠ್
ಸಿದ್ದಲಿಂಗೇಶ್ವರ ವಿದ್ಯಾವರ್ಧಕ ಸಂಘ,
ಮುದ್ದೇಬಿಹಾಳ್



"ನಾಗಣ್ಣ ಬುಜರಿ ಅಧ್ಯಕ್ಷರಾಗಿರುವ ನಮ್ಮ ಸಂಸ್ಥೆಯಲ್ಲಿ 25 ಜನ ಶಿಕ್ಷಕರು, 433 ಮಕ್ಕಳು, ಏಳು ಜನ ಸಂಸ್ಥೆಯ ಅಧ್ಯಕ್ಷರ ಸಂಬಂಧಿ[illegible] ಅವರಿಗೆ ಪೂರ್ತಿ ಸಂಬಳ. ಉಳಿದ ಶಿಕ್ಷಕರಿಗೆ ತಲಾ ಒಂದೊಂದು ಸಾವಿರ ಕೊಟ್ಟು, ಅನುದಾನ ಬಂದ ನಂತರ ಕೊಡುತ್ತೇವೆ ಎನ್ನುತ್ತಾರೆ. ಮಾರ್ಚ್‌ನಲ್ಲಿ 39 ಲಕ್ಷ ರೂ. ಬಿಡುಗಡೆಯಾಗಿದ್ದರೂ 'ಇನ್ನೂ ಅನುದಾನ ಬಿಡುಗಡೆ ಆಗಿಲ್ಲ' ಎನ್ನುತ್ತಾ, ಎರಡು ವರ್ಷಕ್ಕೆ ಸಂಬಳ ಕೊಡದೇ ಶಿಕ್ಷಕರಿಂದ ಸಹಿ ಹಾಕಿಸಿಕೊಂಡು ಈಗ ಮೋಸ ಮಾಡುತ್ತಿದ್ದಾರೆ. ಶಿಕ್ಷಕರು ಬೀದಿ ಪಾಲಾಗಬೇಕಾಗಿದೆ."

ಬಿರಾದಾರ ಬಿಜಿ, ಸಂಪನ್ಮೂಲ
ಶಿಕ್ಷಕರು,ಬಡ್ಸ್ ಸಂಸ್ಥೆ ಅಫ್‌ಜಲ್‌ಪುರ,
ಗುಲ್ಬರ್ಗಾ ಜಿಲೆ



ವಿ. ಚಂದ್ರಶೇಖರ್

ಕುಂದಾಪುರ ಪುರಸಭೆ ದಿವಾಳಿಯೆಬ್ಬಿಸಿದ ಕಾಂಗ್ರೆಸ್

ರಾಜ್ಯಾದ್ಯಂತ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಘೋಷಿಸಿದ ಹಿನ್ನಲೆಯಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ ಪುರಸಭೆಯಲ್ಲಿ ಚುನಾವಣೆ ಕಾವು ಏರ ತೊಡಗಿದೆ. ಪ್ರಮುಖ ರಾಜಕೀಯ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ, ಸಿಪಿಐ (ಎಂ) ಹಾಗೂ ಜೆಡಿಎಸ್ ಪಕ್ಷಗಳು ಪುರಸಭೆಯ ಮುಂದಿನ ಅವಧಿಯಲ್ಲಿ ಅಧಿಕಾರದ ಗದ್ದುಗೆ ಹಿಡಿಯುವ ಯತ್ನದಲ್ಲಿವೆ. ರಾಜ್ಯ ಸರಕಾರ 2 ಬಾರಿ ಚುನಾವಣೆ ಮುಂದೂಡಿದ್ದರಿಂದ ಹಾಗೂ ಮೀಸಲಾತಿಯಲ್ಲಿ ಸಾಕಷ್ಟು ಬದಲಾವಣೆಗಳು ಕಾಣಿಸಿದ್ದರಿಂದ ಸಾಕಷ್ಟು ಗೊಂದಲಗಳೂ ಮೂಡಿ ಬಂದರೂ ಈಗ ಚುನಾವಣೆ ನಡೆಯುವುದು ಖಾತ್ರಿಯಾದ್ದರಿಂದ ತಯಾರಿಗಳು ಭರದಿಂದ ಸಾಗಿದೆ.

ಕಾಂಗ್ರೆಸ್‌ನ ಕೆಟ್ಟ ಆಡಳಿತ

ಕುಂದಾಪುರ ಪುರಸಭೆಯಲ್ಲಿ ಕಳೆದೈದು ವರ್ಷ ಕಾಂಗ್ರೆಸ್ ಆಡಳಿತ ನಡೆಸಿತು. ಕುಂದಾಪುರದ ಪುರಸಭೆಯ ಇತಿಹಾಸದಲ್ಲೇ ಅತ್ಯಂತ ಕೆಟ್ಟ ಆಡಳಿತ ಅವಧಿ ಇದಾಗಿತ್ತು ಎನ್ನುವುದು ಜನಸಾಮಾನ್ಯರ ಅಭಿಪ್ರಾಯವೂ ಹೌದು. ಪ್ರಾರಂಭದಲ್ಲೇ 23 ಮಂದಿ ಸದಸ್ಯ ಬಲದ ಬೋರ್ಡ್‌ನಲ್ಲಿ ಕೇವಲ 11 ಸದಸ್ಯರ ಬಲ ಹೊಂದಿದ ಕಾಂಗ್ರೆಸ್ ಪರಿಸ್ಥಿತಿಯ ಅನುಕೂಲತೆಯೊಂದಿಗೆ ಅಧಿಕಾರಕ್ಕೇರಿತು. ಈ ಐದು ವರ್ಷಗಳ ಅವಧಿಯಲ್ಲಿ ಹಲವಾರು ಹಗರಣಗಳು ಹಾಗೂ ಕೆಟ್ಟ ಆಡಳಿತದ ರುಚಿಯನ್ನು ಜನತೆ ಕಾಣುವಂತಾಯಿತು. ಆಡಳಿತದ ಪ್ರಾರಂಭದಲ್ಲೆ ರಾಜ್ಯ ಸರಕಾರದ ಒಂದು ಕಾರ್ಯಕ್ರಮ, ರಾಜ್ಯಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯನ್ನು ಕುಂದಾಪುರದಲ್ಲಿ ಆಯೋಜಿಸಲ್ಪಟ್ಟ ಸಂದರ್ಭದಲ್ಲಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಪುರಸಭಾ ಅಧ್ಯಕ್ಷರು ಮಾತನಾಡುವುದಕ್ಕೆ ಅವಕಾಶ ನೀಡಲಿಲ್ಲ ಎಂದು ಕೋಪಗೊಂಡು ಸ್ಥಳೀಯ ಪತ್ರಕರ್ತರೋರ್ವರಿಗೆ ಸಾರ್ವಜನಿಕರೆದುರೇ ತಪರಾಕಿ ನೀಡಿ ರಾಜ್ಯಮಟ್ಟದಲ್ಲಿ ಕುಂದಾಪುರದ ಘನತೆಗೆ ಮಸಿ ಬಳಿದರು ತದನಂತರದಲ್ಲಿ ಕುಂದಾಪುರ ನಿರೀಕ್ಷಣಾ ಕಛೇರಿಯಲ್ಲಿ ನಡೆದ ಘಟನೆಗಳು ಈ ಲೇಖನದಲ್ಲಿ ಬರೆಯಲು ಅರ್ಹವಾದವುಗಳಲ್ಲ.

ವೈಫಲ್ಯ - ಹೊರೆ

ರಾಜ್ಯ ಸರಕಾರ ಜಾರಿಗೆ ತಂದ ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ಅತ್ಯಂತ ಸ್ಫೂರ್ತಿಯಿಂದ ಹಾಗೂ ತರಾತುರಿಯಿಂದ ಜಾರಿಗೆ ತರಲು ಹೊರಟ ಕಾಂಗ್ರೆಸ್ ಬೋರ್ಡ್ ಕುಂದಾಪುರ ಜನತೆಯಿಂದ ಸಾಕಷ್ಟು ವಿರೋಧ ಎದುರಿಸಬೇಕಾಯಿತು. ರಾಜ್ಯದ ಹೆಚ್ಚಿನ ಎಲ್ಲಾ ಪುರಸಭೆಗಳಲ್ಲೂ ಸ್ವಯಂ ಘೋಷಿತ ಆಸ್ತಿ ತೆರಿಗೆ ಜಾರಿಗೆ ತರಲು ವಿರೋದ ವ್ಯಕ್ತವಾಗುತ್ತಿದ್ದಾಗ್ಯೂ ಕುಂದಾಪುರದ ಬೋರ್ಡ್ ಅದರಲ್ಲೂ ಮುಖ್ಯವಾಗಿ ಕಾಂಗ್ರೆಸ್ ಪಕ್ಷ ಇದಕ್ಕೆ ವಿರೋದ ವ್ಯಕ್ತಪಡಿಸದೇ ಜಾರಿಗೆ ತರುವುದಕ್ಕೆ ಮುಂದಾಯಿತು.



ಸ್ವಯಂ ಘೋಷಿತ ಆಸ್ತಿ ತೆರಿಗೆಯ ವಿರುದ್ಧ ಪ್ರತಿಭಟನೆ

ಈ ಹಿಂದಿನ ಅವಧಿಯಲ್ಲಿ ಸಿಪಿಐ(ಎಂ) ಹಾಗೂ ಜನತಾದಳ ಮೈತ್ರಿಕೂಟದ ಬೋರ್ಡು ಇದ್ದಾಗ 32 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳು, ಕುಡಿಯುವ ನೀರಿನ ಯೋಜನೆ ಮುಂತಾದವುಗಳನ್ನು ಜನರಿಗೆ ಯಾವುದೇ ಹೊರೆಯಾಗದಂತೆ ಮೂಲಭೂತ ಸೌಕರ್ಯ ಕಲ್ಪಿಸುವ ಒಂದು ಯೋಜನೆಯನ್ನು ರೂಪಿಸಿ ಜಾರಿಗೊಳಿಸಲು ಮುಂದಾಗಿತ್ತು. ಆದರೆ ತದನಂತರದಲ್ಲಿ ಬಂದ ಜನಹಿತ ಮರೆದ ಕಾಂಗ್ರೆಸ್ ಪಕ್ಷದ ವೈಫಲ್ಯದಿಂದಾಗಿ ಇಡೀ ಯೋಜನೆಯೇ ಇಂದು ಜನತೆಯ ತಲೆಯ ಮೇಲೆ ಸಾಲದ ಹೊರೆಯಾಗಿ ಕುಳಿತಿದೆ.

ಒಟ್ಟು 32 ಕೋಟಿ ರೂಪಾಯಿ ಯೋಜನೆಯಲ್ಲಿ ಪುರಸಭೆಯ ವಿಫಲತೆಯಿಂದಾಗಿ ಇಂದು 22 ಕೋಟಿಯಷ್ಟು ಮಾತ್ರ ಟೆಂಡರ್ ಕರೆಯಲಾಗಿದ್ದು 'ಕುಡ್ಸೆಂಪ್' ನೀಡಿದ ಕೆಲಸದ ವರದಿಯಂತೆ 17 - 18 ಕೋಟಿ ರೂ. ನ ಕಾಮಗಾರಿ ಆಗಿದ್ದು ಇದೀಗ ಯಾವ ಕಾಮಗಾರಿಗಳೂ ನಡೆಯುತ್ತಿಲ್ಲ. ಉಳಿದ 10 ಕೋಟಿ ರೂ. ಪುರಸಭೆಯ ಆಡಳಿತ ವೈಫಲ್ಯದಿಂದ ವಾಪಾಸಾಗಿದೆ ಎಂಬುದಾಗಿ ಹೇಳಲಾಗುತ್ತಿದೆ. ಈಗಾಗಲೇ ಕರೆದ ಟೆಂಡರ್‌ನಲ್ಲಿಯೇ ಬಹಳ ಪ್ರಮುಖವಾಗಿ ಆಗಬೇಕಾಗಿದ್ದ ಶೆಣೈ ಪಾರ್ಕನಿಂದ ಗಂಗೊಳ್ಳಿ ಕಡುವಿನವರೆಗಿನ ರಸ್ತೆ ಕಾಂಕ್ರೀಟಿಕರಣ ಕಾಮಗಾರಿ ಆಗಲೇ ಇಲ್ಲ. ಟೆಂಡರ್‌ನಲ್ಲಿದ್ದಂತೆ ಬಸ್ರೂರು ಮೂರ್‌ಕೈಯಿಂದ ಹುಣ್ಸೆಕಟ್ಟೆಸಾರದ ವರೆಗಿನ ರಸ್ತೆ ಕಾಂಕ್ರೀಟಿಕರಣ ಕಾಮಗಾರಿ ಕೈ ಬಿಡಲಾಗಿದೆ. ಇನ್ನು ಆದಂತಹ ರಸ್ತೆ ಕಾಮಗಾರಿಗಳು ಕೂಡ ಅರ್ಧಂಬರ್ಧ ಆಗಿದ್ದು ತಡೆಗೋಡೆ, ಚರಂಡಿ ನಿರ್ಮಾಣಗಳನ್ನು ಪೂರ್ತಿಗೊಳಿಸದೆ ಕೈ ಬಿಡಲಾಗಿದೆ.

ಭ್ರಷ್ಟಾಚಾರ

ಹಿಂದಿನ ಯೋಜನೆಯಂತೆ ಪುರಸಭಾ ಕಛೇರಿ ನಿರ್ಮಾಣವು 96 ಲಕ್ಷದ ಯೋಜನೆಯಾಗಿದ್ದು ಅಂಗಡಿ ಕೋಣೆಗಳು ರಸ್ತೆಗೆ ತಾಗಿ ನಿರ್ಮಾಣಗೊಂಡು ಒಳಬದಿಯಲ್ಲಿ ಪಾರ್ಕಿಂಗ್ ವ್ಯವಸ್ಥೆ ಇದ್ದು ಮೊದಲ ಮಹಡಿ ಪುರಸಭಾ ಕಛೇರಿಯಾಗಿತ್ತು. ಕಾಂಗ್ರೆಸ್ ಬೋರ್ಡ್ ಕೆಲವು ವೈಯಕ್ತಿಕ ಹಿತಾಸಕ್ತಿಗಳಿಗೆ ಒಳಗಾಗಿ ಮೀನು ಮಾರ್ಕೆಟ್ಟಿಗಾಗಿ ಮೀಸಲಿಟ್ಟ ಹಣವನ್ನು ಕಛೇರಿ ನಿರ್ಮಾಣಕ್ಕೆ ವರ್ಗಾಯಿಸಿ ಇದೀಗ ನಿರ್ಮಾಣಗೊಂಡ 1.79 ಕೋಟಿಯ ಕಛೇರಿಯು ನಿರೀಕ್ಷಿತ ಆದಾಯವನ್ನು ಪುರಸಭೆಗೆ ತರುವಲ್ಲಿ ವಿಫಲವಾಗಿ ಕೇವಲ ಸಾಲದ ಹೊರೆಯಾಗಿ ಕುಳಿತಿದೆ. ಮೀನು ಮಾರ್ಕೆಟ್ ಅಭಿವೃದ್ಧಿ ಕೂಡ ಮೂಲೆಗುಂಪಾಗಿ ಹೋಗಿದೆ.

ಪುರಸಭೆ ಜನತೆಗೆ ಅತೀ ಪ್ರಮುಖವಾದ ಕುಡಿಯುವ ನೀರಿಗಾಗಿ ಅತ್ಯಂತ ಕಡಿಮೆ ದರದಲ್ಲಿ ನೀರು ಪೂರೈಸುವ ಯೋಜನೆಯನ್ನು ಸಿಪಿಐ(ಎಂ) ನೇತೃತ್ವದ ಪುರಸಭೆ ರೂಪಿಸಿತ್ತು. ಈ ಯೋಜನೆಯ ಸರಿಯಾದ ನಿರ್ವಹಣೆ ಸಾಧ್ಯವಾಗದೆ ಇಂದು ಕೂಡ ಪುರಸಭೆಯ ನಾಗರಿಕರಿಗೆ ಕುಡಿಯುವ ನೀರು ಮರಿಚೀಕೆಯಾಗಿದೆ. ಕುಡಿಯುವ ನೀರಿಗೆ ದುಬಾರಿ ಡಿಪಾಸಿಟ್ ಹಾಗೂ ಮಾಸಿಕ ದರ ವಿಧಿಸಿದ ಆಡಳಿತ ಪಕ್ಷ ತೀರಾ ವಿರೋಧ ಎದುರಿಸಬೇಕಾಗಿ ಬಂತು. ಕೊನೆಗೆ ಸುವರ್ಣ ಕರ್ನಾಟಕ ಯೋಜನೆ ಹೆಸರಲ್ಲಿ ಡಿಪಾಸಿಟ್ ಹಣವನ್ನು ಕಡಿಮೆ ಮಾಡಿ ಮಾನ ಉಳಿಸಿಕೊಳ್ಳಬೇಕಾಯಿತು. ಈಗಲೂ ನೀರಿನ ಸಂಪರ್ಕ ನೀಡುವ ಕೆಲಸವನ್ನು ಖಾಸಗಿಯವರಿಗೆ ನೀಡಿ ಪುರಸಭೆಯು ಜನತೆಯನ್ನು ಹಗಲು ದರೋಡೆ ಮಾಡಲು ಅವಕಾಶ ನೀಡಿದೆ. ಇದರಲ್ಲಿ ಸಾಕಷ್ಟು ಕಮೀಷನ್ನು ಕೈಬದಲಾಗಿದೆ.

ಕುಂದಾಪುರ ಪುರಸಭೆಯ ಪ್ರಮುಖ ಸಮಸ್ಯೆಯಾದ ಘನ ತ್ಯಾಜ್ಯ ವಿಲೇವಾರಿಗಾಗಿ ಇದುವರೆಗೂ ಒಂದು ಪ್ರದೇಶವನ್ನು ನಿಗದಿ ಮಾಡಲು ಆಡಳಿತ ಪಕ್ಷಕ್ಕೆ ಸಾಧ್ಯವಾಗದೇ ಇದ್ದುದರಿಂದ ಈ ಯೋಜನೆ ಜಾರಿಯಾಗಿಲ್ಲ. ಕುಂದಾಪುರದ ಕೊಳಚೆ ಸಮಸ್ಯೆ ತೀರಲಿಲ್ಲ. ಕುಂದಾಪುರ ನಗರದ ಕೊಳಚೆ ಪ್ರದೇಶದ ಅಭಿವೃದ್ಧಿ, ಉದ್ಯಾನವನಗಳ ಅಭಿವೃದ್ಧಿ, ಸಾರ್ವಜನಿಕ ಶೌಚಾಲಯಗಳ ನಿರ್ಮಾಣ, ಮಳೆನೀರು ಹರಿಯುವ

ಪುಟ 14ಕ್ಕೆ

ಕಾಂಗ್ರೆಸ್-ಬಿಜೆಪಿ ಮಿಲಾಖತ್

ಕಾಂಗ್ರೆಸ್ ಪಕ್ಷ ಪ್ರಾರಂಭದಿಂದಲೇ ಉಂಟಾದ ಆಂತರಿಕ ಕಚ್ಚಾಟದಿಂದಾಗಿ 11 ಮಂದಿಯ ಸದಸ್ಯ ಬಲದ ಕಾಂಗ್ರೆಸ್ ಪಕ್ಷ ಕೇವಲ 4 ಮಂದಿ ಮಾತ್ರ ಆಡಳಿತ ನಡೆಸುವಂತಾದರೂ ಐದು ವರ್ಷ ಪೂರೈಸಿದ್ದು ಇದಕ್ಕೆಲ್ಲಾ ಪೂರಕವಾಗಿ ತನ್ನ ಪೂರ್ಣ ಬೆಂಬಲವನ್ನು ಬಿಜೆಪಿ ಪಕ್ಷ ಕಾಂಗ್ರೆಸ್‌ಗೆ ನೀಡಿತು. ಜನತೆಯ ಹಿತಾಸಕ್ತಿ ಮರೆತ ಬಿಜೆಪಿ ಕೇವಲ ಕಂಟ್ರಾಕ್ಟ್ ಲಾಬಿಗಾಗಿ ಕಾಂಗ್ರೆಸನ್ನು ಅಧಿಕಾರದಲ್ಲುಳಿಯುವಂತೆ ಮಾಡಿತು. ತಮ್ಮ ಪಕ್ಷದ ಸದಸ್ಯೆಗೆ ಕಾಂಗ್ರೆಸ್ ಸದಸ್ಯರೊರ್ವರು ಅವಾಚ್ಯವಾಗಿ ಬೈದು ಕೈ ಮಾಡಿದಾಗಲೂ ವಿರೋಧಿಸಲಾಗದಷ್ಟು ನೀಚತನಕ್ಕೆ ಇಳಿಯಿತು. ಪುರಸಭೆಯ ನೂತನ ಕಛೇರಿ ನಿರ್ಮಾಣ [illegible] ಪೂರ್ಣಗೊಂಡಾಗ [illegible] 1.59 ಕೋಟಿ ಎಂದು ವರದಿ ನೀಡಿದ 'ಕುಡ್ಸೆಂಪ್' ನಂತರ ಇದ್ದಕ್ಕಿದಂತೆ 1.76 ಕೋಟಿ ರೂ.ಗಳಿಗೆ ಪುರಸಭೆಗೆ ಹಸ್ತಾಂತರಿಸಲು ಹೊರಟಾಗ ಕಾಂಗ್ರೆಸ್‌ನ ಕೆಲವು ಸದಸ್ಯರೂ ಸೇರಿದಂತೆ ಸಿಪಿಐ(ಎಂ) ಸದಸ್ಯರು ವಿರೋಧಿಸಿ ಹಾಗೂ ಕಛೇರಿಯ ಉದ್ಘಾಟನೆ ಕಾರ್ಯಕ್ರಮವನ್ನು ಬಹಿಷ್ಕರಿಸಿದಾಗ ಬಿಜೆಪಿ ಕಾಂಗ್ರೆಸ್‌ನ ವೇದಿಕೆಯಲ್ಲಿ ಪಾಲು ಪಡೆದು ಪುರಸಭೆ ಜನತೆಗೆ ದ್ರೋಹ ಬಗೆಯಿತು. ಕಾಂಗ್ರೇಸ್‌ನ ದುರಾಡಳಿತ ಹಾಗೂ ಆಂತರಿಕ ಕಚ್ಚಾಟದಿಂದ ಕಾಂಗ್ರೇಸ್ ಪಕ್ಷದ ಸದಸ್ಯರು ಬಂಡಾಯ ಎದ್ದಾಗ ಕಾಂಗ್ರೇಸ್ ದುರಾಡಳಿತ ಖಂಡಿಸಿ ಸಿ.ಪಿ.ಐ. (ಎಂ) ಪಕ್ಷ ಮಂಡಿಸಲುದ್ದೇಶಿಸಿದ ಅವಿಶ್ವಾಸ ಗೊತ್ತುವಳಿಗೆ ಬಿಜೆಪಿ ಅಡ್ಡಗಾಲು ಹಾಕಿತು.

'ಅತ್ಯುತ್ತಮ ಪುರಸಭೆ' ಪ್ರಶಸ್ತಿ ಪಡೆದ ಸಿಪಿಐ(ಎಂ)ನದು ಭಿನ್ನ ಆಡಳಿತ

ಹಿಂದಿನ ಅವಧಿಯಲ್ಲಿ (1996 - 2001) ಆಡಳಿತ ನಡೆಸಿದ ಸಿ.ಪಿ.ಐ. (ಎಂ) ಹಾಗೂ ಜನತಾದಳ ಮೈತ್ರಿಕೂಟ ಕುಂದಾಪುರ ಪುರಸಭೆಯ ಇತಿಹಾಸದಲ್ಲೇ ಒಂದು ಭಿನ್ನ ರೀತಿಯ ಆಡಳಿತವನ್ನು ನೀಡಿ ಜನತೆಯ ಗಮನ ಸೆಳೆಯಿತು. ಈ ಅವಧಿಯಲ್ಲಿ ಕರ್ನಾಟಕ ರಾಜ್ಯ ಸರಕಾರ ಕೊಡಮಾಡುವ ಅತ್ಯುತ್ತಮ ಪುರಸಭೆಗಾಗಿನ ಪ್ರಶಸ್ತಿಯೂ ಕುಂದಾಪುರ ಪುರಸಭೆಗೆ ಲಭಿಸಿತು. ಕುಡಿಯುವ ನೀರು, ದಾರಿದೀಪ ಹಾಗೂ ಶುಚಿತ್ವದ ನಿರ್ವಹಣೆಯಲ್ಲಿ ಜನತೆಯ ಪ್ರೀತಿಗೆ ಪಾತ್ರವಾಯಿತು. ಇಡೀ 5 ವರ್ಷದ ಅವಧಿಯಲ್ಲಿ ಪುರಸಭೆಯ ಪ್ರತಿಯೊಂದು ನಿರ್ಣಯವು ಸರ್ವಾನುಮತದ ನಿರ್ಣಯ ಎನ್ನುವ ಹೆಗ್ಗಳಿಕೆ ಮೈತ್ರಿಕೂಟ ಬೋರ್ಡಿನದ್ದಾಯಿತು. ಪುರಸಭೆಯ ಪ್ರತಿಯೊಂದು ವಾರ್ಡಿಗೂ ಸಮಾನ ಪ್ರಾಧಾನ್ಯತೆಯನ್ನು ಕಾಮಗಾರಿ ಹಾಗೂ ಇತರೇ ವಿಷಯದಲ್ಲಿ ನೀಡಲಾಯಿತು. ಕಛೇರಿ ಒಳಗಡೆ ಜನಸಾಮಾನ್ಯರ ಕೆಲಸ ಕಾರ್ಯಗಳಿಗೆ ಪ್ರಾಮುಖ್ಯತೆಯನ್ನು ನೀಡುವುದರ ಮುಖಾಂತರ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲಾಯಿತು. ಇದೇ ಅವಧಿಯಲ್ಲಿ ಕುಂದಾಪುರ ಪುರಸಭೆಯ ಅಭಿವೃದ್ಧಿಯ ದೃಷ್ಟಿಕೋನವನ್ನು ಇಟ್ಟುಕೊಂಡು ಕುಂದಾಪುರದ ಹಲವು ಅಭಿವೃದ್ಧಿ ಕೆಲಸಗಳಿಗೆ ಸುಮಾರು ಅರ್ಧದಷ್ಟು ಅನುದಾನ ಹೊಂದಿರುವ 32 ಕೋಟಿ ಸಾಲ ಯೋಜನೆ ಅಂಗೀಕರಿಸಲಾಯಿತು.





ಪಿಸುಮಾತು ಬಹುದೂರ ಕೇಳುತ್ತೆ

- ಚೀನಿ ಗಾದೆ

'ಯಾಕ್ ಹಿಂಗ್ ಸತ್ರು?' ನಾನು ನಡುವಯಸು ದಾಟಿದ ಹೆಂಗಸೊಬ್ಬಳಿಗೆ ಪ್ರಶ್ನಿಸಿದೆ. 'ಯಾರಿಗ್ಗೊತ್ತೇ ತಂಗೀ ಯಾರ ಹೊಟ್ಟ್ಯಾಗ ಏನ ಇರ್ತದೋ...? ಹೆಣ್ ಜೀವನ ಹಿಂಗೇ ಬಯಲ್ನಾಗ ಇಟ್ಟ ದೀಪಾದಂಗ. ಯಾವಾಗನೂ ಆರಬಹುದು' ಎಂಥ ಮಾರ್ಮಿಕ ಮಾತುಗಳನ್ನು ನುಡಿದಳು?!

ಕನಸುಗಳ ವ್ಯಾಪಾರ

ನನಗೆ ಸರಿಯಾಗಿ ನೆನಪಾಗುತ್ತಿಲ್ಲ. ಯಾವ ವರ್ಷ? ಸ್ಮೃತಿ ಪಟಲದಲ್ಲಿ ಉಳಿದಿದ್ದು ಘಟನೆ ಮಾತ್ರ. ಇಬ್ಬರು ಯುವತಿಯರು ಗೋಲಗುಂಬಜ್ ಮೇಲಿಂದ ಹಾರಿ ಪ್ರಾಣ ಬಿಟ್ಟಿದ್ದರು. ಹರೆಯದ ಯುವತಿಯರವರು. ಮದುವೆ ಮುರಿದು ಹೋಗಿತ್ತು. ವರದಕ್ಷಿಣೆ ಬಾಜಾರಿನಲ್ಲಿ ಇವರ ಮನೆ ದಾಟಿ ಮುಂದೆ ಹೋಗುವವರೇ ಇಂಥದೇ ಆತಂಕದ ಗಾಳಿ ಬೀಸುತ. ಸುದ್ದಿಯೊಂದು ಅಚ್ಚಾಗಿತ್ತು. ಅಕ್ಕ ತಂಗಿಯರಿಬ್ಬರು ಕೈ ಕೈ ಹಿಡಿದು ಬಾವಿಗೆ ಹಾರಿ ಹೆತ್ತವರು ಮದುವೆಗೆ ಮಾಡಬೇಕಾದ ಖರ್ಚು ಮತ್ತು ವರ ಹುಡುಕುವ ಹೈರಾಣು ತಪ್ಪಿಸಿದ್ದರು. ರೈತನೊಬ್ಬ ಆತ್ಮಹತ್ಯೆ ಮಾಡಿಕೊಂಡರೆ ಸಂಘ, ಸಂಪುಟ ಸರ್ಕಾರಗಳ ನಿಯೋಗ ಭೇಟಿಯಿತ್ತು ಕಾರಣ ಹುಡುಕುತ್ತಾರೆ. ಕೃಷಿ ಬಿಕ್ಕಟ್ಟಿಗೆ ಸಂಪೂರ್ಣ ಪರಿಹಾರ ಕೊಡದಿದ್ದರೂ ಪ್ಯಾಕೇಜ್ ಘೋಷಣೆಯ ನಾಟಕವಾದರೂ ಕಾಟಾಚಾರಕ್ಕೆ ನಡೆಯುತ್ತದೆ. ಆದರೆ ಈ ಹೆಣ್ಣು ಮಕ್ಕಳ ಮರಣದ ಕಾರಣ ಕೇಳುವವರಾರು? ಪತ್ರಿಕೆ ಓದಿದ ಜಂಟಲ್‌ಮನ್? ಒಬ್ಬರು 'ಛೇ ಬದುಕು ಎದುರ್ಸ್ಯಾ ಹಿಮ್ಮತ್ ಇಲ್ಲದವರು... ಬದುಕಿದ್ದು ಏನಾರಾ ಸಾಧಿಸಬೇಕು.' ಗಂಭೀರ ಉಪದೇಶ ಕೊಟ್ಟು ಹಣೆಗೆ ಗಂಟಿಟ್ಟು ಮುಖ ಹೊರಳಿಸಿದ್ದರು. 'ಯಾಕ್ ಹಿಂಗ್ ಸತ್ರು?' ನಾನು ನಡುವಯಸು ದಾಟಿದ ಹೆಂಗಸೊಬ್ಬಳಿಗೆ ಪ್ರಶ್ನಿಸಿದೆ. 'ಯಾರಿಗ್ಗೊತ್ತೇ ತಂಗೀಯಾರ ಹೊಟ್ಟ್ಯಾಗ ಏನ ಇರ್ತದೋ...? ಹೆಣ್ ಜೀವನ ಹಿಂಗೇ ಬಯಲ್ನಾಗ ಇಟ್ಟ ದೀಪಾದಂಗ. ಯಾವಾಗನೂ ಆರಬಹುದು' ಎಂಥ ಮಾರ್ಮಿಕ ಮಾತುಗಳನ್ನು ನುಡಿದಳು?! ಏನೂ ಅರಿಯದ ಹೆಂಗಸಿರಬಹುದೆಂದು ಭಾವಿಸಿದ್ದೆ. ಹೀಗೆ ಹೇಳುವ ಮೂಲಕ ನೋವಿನ ಬಲೆ ಬಿಡಿಸಿ ಬೆಡಗು ಬಯಲಾಗಿಸುವ ಸವಾಲು ಒಡ್ಡಿದಂತೆ ಭಾಸವಾಯ್ತು?

ಹಸಿರು ತೋರಣ ಬರಲಿಲ್ಲ

ಅದೊಂದು ದಿನ ಯಾವುದೋ ಹಳ್ಳಿಗೆ ಹೋಗಿದ್ದೆ. ವರದಕ್ಷಿಣೆ ಮಹಿಳೆಯರ ಮೇಲೆ ನಡೆಯುವ ಅನ್ಯಾಯ, ಎದುರಿಸಬೇಕಾದ ಮಾರ್ಗ, ಛಲ ಹೀಗೆಲ್ಲ ಮಾತಾಡಿದ್ದೆ. ಕೊನೆಯಲ್ಲಿ ಒಬ್ಬ ಯುವತಿ ಬಂದು ನನ್ನ ಕೈ ಹಿಡಿದು ಗಳಗಳನೇ ಅಳತೊಡಗಿದಳು. ಯಾಕೆಂದು ವಿಚಾರಿಸಿದರೆ ಹೇಳಲೊಲ್ಲಳು. ಸುತ್ತಾ ಇರುವ ಹೆಣ್ಣು ಮಕ್ಕಳು, 'ಅಕಿಗಿ ಜರಾ ತಲಿ ಖರಾಬ್ ಆಗ್ಯಾದರೀ, ಈಚೀಚೆಗೆ ಹಿಂಗೇ ಮಾಡಲತಾಳ. ನೀವು ಬರ್ರಿ... ಅಂದು ಅವಳನ್ನು ನನ್ನಿಂದ ಬೇರ್ಪಡಿಸಿ ಮನಿಗಿ ಹೋಗಿ... ತಂಗೀ... ನಿಮ್ಮಪ್ಪ ಕರೀತಾರ ನೋಡು..' ಅಂತ ಅವಳನ್ನ ಒತ್ತಾಯದಿಂದ ಕಳಿಸತೊಡಗಿದರು. ಅವಳ ಕಣ್ಣಲ್ಲಿ ವಿಚಿತ್ರವಾದ ನೋವಿತ್ತು. ಹತಾಶೆಯಿತ್ತು. ಹುಡುಕಾಟವೂ ಇತ್ತು. ಮೈ ಮೇಲೆ ಖಬರಿಲ್ಲ. ಸೆರಗಿನ ಪರಿವೆಯಿರಲಿಲ್ಲ. ಮಾತು ಮಾತಿಗೆ ಮುಂಗುರುಳು ತೀಡುತ್ತಲೇ ಬಿಕ್ಕುತ್ತಿದ್ದಳು. ಏನೂ ಹೇಳಲಿಲ್ಲ. ಹೇಳಲಿಲ್ಲವೇ? ಹೌದು ಏನೆಲ್ಲ ಹೇಳಿದಳು. ಬಸ್ಸು ಹತ್ತುವ ಮುನ್ನ ಗೊತ್ತಾಗಿದ್ದಿಷ್ಟು. ಎಳೆ ವಯಸಲ್ಲಿಯೇ ತಾಯಿ ಕಳಕೊಂಡ ನಿರ್ಮಲ ತಮ್ಮ ತಂಗಿಯರಿಗೆ ಅಡಿಗೆ ಮಾಡುತ ಬೆಳೆದಳು. ಕಣ್ಣ ಮುಂದೆಯೇ ತಮ್ಮಂದಿರರು ಬೆಳೆ ಬೆಳೆದು ಶಾಲೆಗೆ ಹೋಗಿ, ಸಣ್ಣಪುಟ್ಟ ಕೆಲಸ ಮಾಡುತ ಮುಂದೊಮ್ಮೆ ಖಾಸಗಿ ಸಂಸಾರವೂ ಸುರು ಮಾಡಿಕೊಂಡರು. ಮೊದಲಿಗೆಲ್ಲ ಹರೆಯಕ್ಕೆ ಕಾಲಿಟ್ಟ ಮಗಳಿಗೆ ಗಂಡು ಹುಡುಕಲು ಆಸಕ್ತಿ ತೋರಿದ ತಂದೆ ಬರು ಬರುತ ಬಿಟ್ಟೇ ಬಿಟ್ಟ. ನೊಡಲು ಸುಂದರಳಲ್ಲದ ಅನಕ್ಷರಸ್ಥೆ ನಿರ್ಮಲ. ಓದಿದ ತಂಗಿಗೆ ನೆಂಟಸ್ತನವಾಗಿ ಧಾರೆ ಎರೆದು ಕೊಡುವಲ್ಲಿಯೂ ಹಿರಿತನದಿಂದ ಜವಾಬ್ದಾರಿ ನಿರ್ವಹಿಸಿದಳು. ತನ್ನ ಬದುಕಿಗೂ ಮುಂದೊಮ್ಮೆ ಹಸಿರು ತೋರಣ ಬರಬಹುದೆಂದು ಕಾದಳು. ಸ್ವಲ್ಪ ಖರ್ಚಿನಲ್ಲಿ ತಂಗಿಯ ಮದುವೆಯಾಯ್ತು. ತಮ್ಮ ತಂಗಿ ತಂದೆಗೆಲ್ಲ ಅಡಿಗೆ ಮಾಡಿ ಮನೆ ನೋಡಿಕೊಂಡು ಬಂದ ನಿರ್ಮಲಳಿಗೆ ಮದುವೆ ಪ್ರಶ್ನೆ ಬಂದಾಗ ವ್ಯಾಪಾರ ಕುದರಲೇ ಇಲ್ಲ. ದುಬಾರಿ ಖರ್ಚಿಗೆ ಹೆತ್ತವರು ಬೆನ್ನಿಗೆ ಬಿದ್ದವರು ಸಿದ್ಧರಾಗಲೇ ಇಲ್ಲ. ದಿನಗಳು ಯಾರಿಗೆ ಕಾಯುತ್ತವೆ? ಸೂರ್ಯ ಬಂದ ಸೂರ್ಯ ಹೋದ. ಅಸಂಖ್ಯ ದಿನಗಳು. ಲೆಕ್ಕ ಇಟ್ಟವರಾರು? ಪ್ರಿಯಕೆ ಭಾವನೆಗಳಿಗೆ ಹೆಣ್ಣು ಗಂಡೆಂಬ ಬೇಧವುಂಟೇ? ಅದೊಂದು ದಿನ ನಿರ್ಮಲ ನಡುರಾತ್ರಿಯಲ್ಲಿ ಮುಚ್ಚಿದ ಹೆಬ್ಬಾಗಿಲು ಧಡಾರೆಂದು ತೆರೆದು ಚೀರುತ ಅಳುತ್ತ ರಸ್ತೆಗೆ ಧಾವಿಸಿದಳು. ಯಾರೋ ತನ್ನನ್ನು ಬಲಾತ್ಕಾರಿಸಲು ಬಂದರೆಂದು ಬೊಬ್ಬಿಟ್ಟು ಅತ್ತಳು. ಯಾರೆಂದು ಗೊತ್ತಿಲ್ಲ? ಮನೆಯಲ್ಲಿರುವುದು ತಂದೆ ಮಾತ್ರ. ಛೇ ಸಂಶಯಿಸಲು ಸಾಧ್ಯವೇ ಇಲ್ಲವೆಂದು ಎಲ್ಲರ ನಂಬಿಕೆ. ಸತ್ಯವೂ ಇರಬಹುದೇನೋ ಹಸೆಮಣೆಗೆ ಕಾದ ನಿರ್ಮಲಳ ಮಾನಸಿಕ ಸ್ಥಿತಿಯ ಪರಿಣಾಮವಿರಬಹುದು. ವಯಸು ಕೈಮಿರೇ ಬಿಟ್ಟಿತು. ಮದುವೆಗೆ ವಯಸ್ಸಿಲ್ಲ. ಆದರೆ ಮಹಿಳೆಯ ಬಗ್ಗೆ ಸಮಾಜದ ತಿಳುವಳಿಕೆಗೆ ಗ್ರಹಣವಿದೆ. ಯಾವ ಚಿಕಿತ್ಸೆ ಯಾರು ಕೊಡಿಸುವುದು? ಮುಪ್ಪಾದ ತಂದೆ ದಮ್ಮಿನಿಂದ ಮೂಲೆ ಹಿಡಿದಿದ್ದಾನೆ. ತಮ್ಮನ ಮನೆಯಲ್ಲಿ ಊಟ ಸಿಗುತ್ತದೆ. ನಿರ್ಮಲಳ ಜೀವನಕ್ಕೆ ಕಾರಣವೇ ಇಲ್ಲದಂತಾಗಿದೆ. ಬದುಕಿರಲು ಒಂದು ನೆಪಬೇಕು. ಓದು ಸಾಧನೆ ಗುರಿ ಇವಾವೂ ಗೊತ್ತಿಲ್ಲದ ನಿರ್ಮಲ ಈಗ ಹುಚ್ಚಿಯೇ....

ಖಾಲಿ ಖೋಲಿಗಳ ನಡುವೆ

ಜಾಥಾ ಸಂದರ್ಭದಲ್ಲಿ ಇರಬೇಕೇನೋ.... 'ನಾರೀ ಪುರಾಣ ನಾಟಕದ ತರುವಾಯ ಜಾಥಾ ವಾಹನ ಹತ್ತಿ ಹೊರಡುವಾಗ, ಅಗರ್ಭ ಶ್ರೀಮಂತ ಮನೆಯ ಮದುವೆಯಾಗದ ಹೆಂಗಸೊಬ್ಬಳು ಭೇಟಿಯಾದಳು. ಕಳಾಹೀನ ಮುಖ ಡಿಗ್ರೀ ಓದಿದ್ದಾಳೆ. ಕಾಲೇಜು ಓದುವಾಗ ಮನಸ್ಸು ಕದ್ದ ಹುಡುಗನನ್ನು ಮುಗ್ಧವಾಗಿ ಪ್ರೀತಿಸೇ ಬಿಟ್ಟಳು. ಆದರೆ ಆತ ಯಾರೆಂದು ಸತ್ಯ ಹುಡುಕಿದರೆ, ಮೂರು ಮಕ್ಕಳ ತಂದೆಯೆಂಬುದು ಪತ್ತೆಯಾಗಿ ಈ ಪ್ರೇಮ ವಿವಾಹದ ಬೆಲೆ ತಿಳಿಯಿತು. ಮುಂದೆ ಓದಿಸಲು ಮನೆಯಲ್ಲಿ ಪರವಾನಿಗೆ ಸಿಗಲೇ ಇಲ್ಲ. ಯಾವುದಾದರೂ ಕೆಲಸಕ್ಕೆ ಹೋಗುವೆನೆಂದ ಈಕೆಗೆ ಸಿರಿವಂತ ಹೆತ್ತವರಿಗೆ ಪ್ರತಿಷ್ಠೆ



ಅಡ್ಡ ಬಂದು ಕಳಿಸಲಿಲ್ಲ. ಹೊರ ಪ್ರಪಂಚದ ಕೊಂಡಿ ಕಳಚಿದವು. ನಾಲ್ಕು ಗೋಡೆಯುಳ್ಳ ಅನೇಕ ಖೋಲಿಗಳಿರುವ ಬಂಗಲೆಯಲ್ಲಿ ಈಕೆ ಒಂಟಿಯೇ. ಕತ್ತಲೆಂಬುದು ರಾತ್ರಿ ಮಾತ್ರ ಬರಲಿಲ್ಲ. ಹಗಲಿಗೆ ಬೆಳಕೆ ಇರಲಿಲ್ಲ. ಕಗ್ಗ ಹಳ್ಳಿಯ ಹೆಂಗಸಂತೆ ಕಾಣುವ ಇವಳ ನೋಟದ ಆಳ ಅಳತೆಗೆ ಸಿಗದಂತಹದು. ನಿಸ್ತೇಜ ಕಣ್ಣುಗಳು ಅಗಲ ಹಣೆಯಲ್ಲಿ ಅಡ್ಡಾದಿಡ್ಡಿ ಚೆಲ್ಲಿಕೊಂಡ ಹುಡಿ ಕುಂಕುಮ. ಮಾತಾಡಲೇ ಒಲ್ಲೆನೆನ್ನುವಂತ ಬಿಗಿದುಕೊಂಡ ತುಟಿಗಳು... ನಮ್ಮ ಜೀಪು ಚಲಿಸಿತು. ಅವಳ ಕಣ್ಣ ದಿಟ್ಟಿಯ ಪ್ರಶ್ನೆ ಹೊತ್ತು... ಎಲ್ಲಿಂದಲೋ ನೆನಪುಗಳು ಒತ್ತರಿಸಿ ಬಂದವು. ನಾನು ಚಿಕ್ಕವಳಿದ್ದಾಗಲೇ ಮನಕೆ ನಾಟಿದ ಪ್ರಸಂಗವದು...

ಹೆಸರೇನು? ಸುಶೀಲಾ ಇರಬೇಕು. ನಾನು ಸಣ್ಣಾಕಿ, ಆದರೂ ಆಕಿಯ ಜೊತೆಗೆ ನನಗೆ ಒಡನಾಟ ಇತ್ತು. ಆಕೆ ನೋಡಲೇನು ಅಂಥ ಸುಂದರಿಯೇನಲ್ಲ. ನಸುಗಪ್ಪು, ಉಬ್ಬಿದ ಹಲ್ಲು, ಸಣ್ಣ ಹಣೆ. ರಾಶಿ ಗಪ್ಪ ಕೂದಲೊಂದೇ ಗಮನ ಸೆಳೆವಂಥದು. ನಮ್ಮ ಪುಟ್ಟ ಗಲ್ಲಿಯಲ್ಲಿ ಅವಳ ಮನೆಯವರು ಶ್ರೀಮಂತರೇ. ಹೋಳಿಗೆಯ ಮೇಲೆ ತುಪ್ಪ. ಪ್ರತಿ ದಿನ ಸಣ್ಣಕ್ಕಿ ಅನ್ನ. ರೊಟ್ಟಿಯೊಂದಿಗೆ ಪಲ್ಯ, ಉಣ್ಣುವವರು, ಮದುವೆಗಳಲ್ಲಿ ದುಬಾರಿ ಬೆಲೆಯ ಧರಿಸು ಧರಿಸುವವರು. ಹೆಂಗಸರನ್ನು ಬಾಗಿಲಾಚೆ ಹಣಕಲು ಬಿಡದವರು. ರಜಾಕಾರ ಚಳುವಳಿಯ ಸಂದರ್ಭದಲ್ಲಿಯಂತೂ ಮನೆಯ ಹೆಬ್ಬಾಗಿಲಿಗೆ ಪರ್ದಾ ಹಾಕಿ ಕಾವಲಿಗೆ ಗೂರ್ಖಾ ನಿಲ್ಲಿಸಿದವರು!! ಸುಂದರ ಹೆಂಗಸರನ್ನೇ ಸೊಸೆಯಾಗಿ ತಂದವರು. ಹೀಗೆ ಏನೆಲ್ಲ, ಗರಿ ಗಳಿಂದ ಬೀಗುವ ಮನೆಯಲ್ಲಿ ಸುಶೀಲಾ ಜನಿಸಿ ಬೆಳೆದು ಹರೆಯಕ್ಕೆ ಬಂದಳು. ಅವಳ ಬೆನ್ನಹಿಂದೆ ತಂಗಿಯೂ ತಂಗಿ ಬಲು ಸುಂದರಿ...

ಕೆಂಡದ ಮೇಲೆ ಕಣ್ಣೀರು

ನಾನವತ್ತು ಸುಶೀಲಾ ಮನೆಗೆ ಹೋಗಿದ್ದೆ. ತೊಗರಿ ಕಡ್ಡಿಗಳನ್ನು ಒಲೆಗೆ ತಳ್ಳುತ, ರೊಟ್ಟಿ ತಟ್ಟುತ್ತಿದ್ದಳು. ನಾನು ಅವಳ ಮುಂದೆ ಕೂತೆ. ಏನೇನೋ ಮಾತಾಡುತ್ತಿದ್ದೆ. ಸುಶೀಲಾಳಿಂದ ಪ್ರತಿಕ್ರಿಯೆ ಇಲ್ಲ. ಯಾಕೆಂದು ನೋಡಿದರೆ ಅವಳು ಅಳುತ್ತಿದ್ದಳು. ಅವಳ ಕಣ್ಣೀರು ಕೆಂಡದ ಮೇಲೆ ಬಿದ್ದು ಚುರ್ರೆನ್ನುತ್ತಿತ್ತು. ನಾನು ಗಾಬರಿಯಿಂದ ಸುಶೀಲಕ್ಕ ಯಾಕಳ್ತಿ....? ಕೇಳಿದ್ದೆ ಮತ್ತೂ ಅತ್ತಳು. ನಾ ನೋಡಲಾಕ ಚೆಂದಿಲ್ಲ...? ಕೇಳಿದಳು. ಯಾರಂದ್ರು...? ನನ್ನ ಪ್ರಶ್ನೆಗೆ ಸುಶೀಲಾ ಗಂಟಲುಬ್ಬಿ ಹೇಳಿದ್ದು ಇಂದಿಗೂ ನೆನಪಿದೆ.


"ನಿನ್ನ ನನ ತಂಗಿ ನೆಂಟಸ್ತನ ಆಯ್ತು ಯಾಕಂದ್ರ ಅಕಿ ನೋಡಲಾಕ ಸುಂದರ ಹಳಾ. ನಂಗ ನೋಡದವರು ಒಬ್ಬರ್ರೂ ಪಸಂದ ಮಾಡಲಿಲ್ಲ ನಾ ಏನ್ ಮಾಡ್ಲೀ? "ನಿನ ಹೆಣಾ ಎಲ್ಲೆ, ಇದಿ ಹಂಗ ಹುಟ್ಟಿ ಕುಂತಿದಿ. ಎಲ್ಲಾರೂ ಬಿದ್ದು ಸಾಯಿ. ಒಬ್ಬರೇ ಬಂದು ಪಸಂದ ಮಾಡವಲ್ರು. ನಿನ್ನಂಥ ಹಲ್ಲಬೀರಿಗೆ ಮನ್ಯಾಗ ಇಟ್ಕೊಂಡು ಉಪ್ಪಿನಕಾಯಿ ಹಾಕಬೇಕೇನು? ನನ್ನ ಜೀವಕ್ಕೆ ಮೂಲ ಆಗಿದಿ. ಆಸ್ತಿ ಮಾರಿ ಹುಂಡಾ ಕೊಟ್ಟು ನಿನ್ನ ಮದಿ ಮಾಡಿ ನಾವು ಬಿಕ್ಕಿ ಬೇಡಬೇಕೇನು? ನಿನಗೆ ಮರ್ಗಿ ನುಂಗ್ಲಿ....? ಅಂತ ನಮ್ಮವ್ವ ದಿನಾ ಬಯ್ತಾಳ. ನಾ ಎಲ್ಲಿಗೆ ಹೋಗ್ಲೀ? ಹ್ಯಾಂಗ ಮಾಡ್ಲೀ? ನಂಗನೂ ಜೀವನಾ ಸಾಕಾಗ್ಯಾದ... ಅಂತ ಸುಶೀಲಾ ಧಮ ಧಮಾಂತ ಅಳತೊಡಗಿದಳು. ನಾನು ಗಾಬರಿಯಿಂದ ಸುಮ್ಮನೇ ಅವಳ ಮುಖ ನೋಡ್ತಿದ್ದೆ. ಸುಶೀಲಾನ ತಪ್ಪೇನದಾ..?

ಮುಂದೊಮ್ಮೆ ಸುಶೀಲಾಗ ಕುಡುಕ ಗಂಡಗ ಕೊಟ್ಟು ಮದಿವಿ ಮಾಡಿದ್ರು. ಆದರ ಅಂವ ಗಂಡಸೇ ಇರಲಿಲ್ಲ. ಸುಶೀಲಾನ ಇಡೀ ಬದುಕೇ ಲಿಗಿಲಿಗಿ ಬೆಂಕಿಯ ಮೇಲೆ ಕಣ್ಣೀರ ಹನಿಯತರ ಟಪಗುಟ್ಟಿತು. ಹೆಚ್ಚುತ್ತಿರುವ ವರದಕ್ಷಿಣೆ, ನಾಶವಾಗದ ಪಾಳೇಗಾರಿಕೆ, ಕ್ರೌರ್ಯ ಸೃಷ್ಟಿಸುತ್ತಿರುವ ಬಂಡವಾಳ ಜಗತ್ತಿನ ಆರ್ಥಿಕ ನೀತಿ, ಕುಸಿಯುತ್ತಿರುವ ಮಹಿಳೆಯರ ಸ್ಥಾನಮಾನ, ಪಸರಿಸುತ್ತಿರುವ ಥಳಕು ಬಳಕಿನ ಸಂಸ್ಕೃತಿ, ವ್ಯಾಪಾರದ ಸರಕಾಗುತ್ತಿರುವ ಹೆಣ್ಣಿನ ಕಟಿ- ತುಟಿ - ಬಣ್ಣ, ಯಾಕೋ ಮನಸು ರೋಸಿ ಹೋದಂತೆ ಅನಿಸಿತು. ಎಷ್ಟು ನಮೂನೆ ಹುಚ್ಚುತನ? ಈ ಭ್ರಮೆ, ಈ ಸಾವು, ನಿರಾಶೆ, ಈ ಪರದೆ ಹರಿದು ನಿಜ ಬದುಕಿನತ್ತ ಪ್ರಯಾಣಿಸಲು ಸಾಧ್ಯವಿಲ್ಲವೇ? ಸಾಧ್ಯತೆಗಳ ಬಾಗಿಲು ತೆರೆಯಬೇಕಾದ ಜವಾಬ್ದಾರಿ ಪ್ರಜ್ಞಾವಂತರ ಹೆಗಲ ಮೇಲಿಲ್ಲವೇ? ಪ್ರಜ್ಞಾವಂತರನ್ನೊಳಗೊಂಡ ಸಮಷ್ಟಿ ಶಕ್ತಿಯಲ್ಲಿಯೇ ನೋವಿನ ಬಲೆ ಬಿಡಿಸಿ ಬೆಡಗು ಬಯಲಾಗಿಸುವ ತಾಖದೆಯಲ್ಲವೇ?

ವಾರದ ಸಂದರ್ಶನ

ದೇವನೂರರರ ಸಂದರ್ಶನ ಮಾಡಬೇಕೆಂಬುದು ಮೊದಲ ಸಂಚಿಕೆ ಬಿಡುಗಡೆಯ ಮುನ್ನವೇ ನಮ್ಮ ಬಯಕೆ. ಆದರೆ ಅವರು ಸಿಗಬೇಕಲ್ಲಾ! ಸಿಕ್ಕರೂ ಮಾತನಾಡಬೇಕಲ್ಲ. ಮಾತನಾಡುವುದು ಎಂದರೆ ದೇವನೂರರಿಗೆ ಅಪಥ್ಯವೇನೋ ಎನಿಸಿಬಿಡುತ್ತದೆ. ಹೇಳುವಾಗಲೂ ತುಂಬಾ ತೂಗಿ ತೂಗಿ ಶಬ್ದಗಳನ್ನು ಹೊರ ಹೊರಡಿಸುತ್ತಾರೆ ಮೌನದ ಮಾತುಗಾರ! (ಕಂಜೂಸಿಯೇ ಇರಬಹುದು) ಎನ್ನಿಸಿ ಬಿಡುತ್ತದೆ.

ಮಾತು ಕಡಿಮೆಯಾದರೂ ಅರ್ಥವಂತಿಕೆ ಅಗಾಧ. ಹೀಗಿರುವ 'ಜನರ ಮಿತ್ರ' ದೇವನೂರರರ ಸಂದರ್ಶನ ತಣ್ಣನೆಯ ಇರುಳಿನಲ್ಲಿ ಮೈಸೂರಿನಲ್ಲಿ ನಡೆಸಲಾಯಿತು. 'ಇದು ಬಹಳ ದಿವ್ಸಗಳ ಪೆಂಡಿಂಗ್ ಕೆಲ್ಸ ಆಲ್ವೇಸ್ ಕಣ್ರೀ"ಎಂದೇ ಮಾತನ್ನಾರಂಭಿಸಿದಾಗ 'ಸಾರ್ ತಾವು ಮಾತಾಡೋದೇ ತೀರಾ ಕಡಿಮೆ. ನಾನು ಕೇಳಿದ ದೊಡ್ಡ ಭಾಷಣ ಎಂದರೆ 27 ನಿಮಿಷಗಳದ್ದು... ನಿಮ್ಮ ಮಾತುಗಳ ಎಲ್ಲಾ ಪೇಪರ್ ಕಟಿಂಗ್ಸ್ ನನ್ನಲ್ಲಿದೆ' ಎಂದು ಸಂಗಾತಿ ಸುಬ್ರಹ್ಮಣ್ಯ ಚಾಲನೆ ನೀಡಿದರು. ದೇವನೂರು ಒಬ್ಬ ಅತ್ಯಂತ ಸೃಜನ ಶೀಲ ಸಾಹಿತಿ ಹೇಗೋ, ಹಾಗೆಯೇ ಸಂಘಟಕ, ರಾಜಕಾರಣಿ.. ಸರ್ವೋದಯ ಕರ್ನಾಟಕದ ಅಧ್ಯಕ್ಷರು.. ಇವುಗಳ ಮಿಳಿತದ ಮಾತುಗಳನ್ನು ನಿರೀಕ್ಷಿಸುತ್ತಾ....



ಸಂದರ್ಶಕರು :
ಎಸ್.ವೈ.ಗುರುಶಾಂತ್,
ಆರ್.ಸುಬ್ರಹ್ಮಣ್ಯ, ಮೈಸೂರು

ಬಿಜೆಪಿಗೆ ಬರೀ ದುಡ್ಡಿನ ದಾಹವಲ್ಲ ರಕ್ತದ ದಾಹವೂ ಇದೆ

ಜನಶಕ್ತಿ: ಇಂಡೋ- ಅಮೇರಿಕಾ ದ ನಡುವಿನ ನೂಕ್ಲಿಯರ್ ಒಪ್ಪಂದದ ಬಗ್ಗೆ ಬಹಳಷ್ಟು ಚರ್ಚೆಯಾಗುತ್ತಿದೆ. ತಮ್ಗೇನನಿಸುತ್ತದೆ?

ದೇವನೂರು: ಮೊದಲನೆಯದಾಗಿ ನನಗೆ ಅಮೇರಿಕಾದ ಇಂಟಲಿಜೆನ್ಸಿಯಾ ಬಗ್ಗೆ ಭೀತಿ ಇದೆ. ಭಯವಿದೆ. ಇದರ ಬಗ್ಗೆ ಹೆಚ್ಚಿನ ವಿವರಗಳು ನನಗೆ ಗೊತ್ತಿಲ್ಲ. ನ್ಯೂಟ್ರಲ್ ವಿವೇಕ ಇರುವ ಬುದ್ಧಿ ಜೀವಿಗಳು ಪ್ರತಿಕ್ರಿಯಿಸುವುದು ಅಗತ್ಯ.ಇಂತಹ ಭೀತಿಗೆ ಎಡಪಂಥೀಯರೂ ಒಳಗಾಗಿರುವುದು ಛಾಕ್ಸ್ ಇರಬಹುದು. ನಾನು ತಿಳಿದುಕೊಳ್ಳಬೇಕು.

ಜ: ಇವತ್ತು ಭಾರತದಂತಹ ದೇಶಗಳಿಗೆ ಸಾಲ ಕೊಡುವುದು ತಂತ್ರಜ್ಞಾನ ಕೊಡುತ್ತೇವೆ ಎಂಬುದು ತಂತ್ರ ಅನ್ನಿಸುವುದಿಲ್ಲವೇ?

ದೇ: ಎಲ್ಲವೂ ಯುದ್ಧ, ಇದು ಪರೋಕ್ಷ ಯುದ್ಧ. ಕಾಂಕ್ವರ್ ಮಾಡೋದು, ಅಂತಿಮವಾಗಿ ಗೆಲ್ಲೋದು, ಸ್ವಾಧೀನಪಡಿಸಿ ಕೊಳ್ಳೋದು. ನಂತ್ರ ಸ್ವಾಯತ್ತತೆ ನಾಶ, ಎಲ್ಲದಕ್ಕೂ ಹೆಚ್ಚು ಭೀತಿ ಹುಟ್ಟಿಸುವುದು ಅದರ ಅನೈತಿಕತೆ, ಸದ್ದಾಂ ಹುಸೇನನನ್ನು ಒಪ್ಪದಿರಬಹುದು. ಆದರೆ ಆ ದೇಶದೊಳಕ್ಕೆ ನುಗ್ಗಿ ಈ ಅಮೇರಿಕಾ ನಡೆಸಿದ ಅತ್ಯಾಚಾರ, ಆಕ್ರಮಣ, ಹಿಂದಿನ ಬರ್ಬರತೆಗೂ ಮೀರಿದೆ. ಇದು ಸಹಜವಾಗಿ ನಮಗೆ ಅಮೇರಿಕಾದ ಬಗ್ಗೆ ಭಯ, ಭೀತಿ ಹುಟ್ಟಿಸುತ್ತದೆ.

(ನಡುವೆ ಚಹಾಕ್ಕಾಗಿ ಒಂದು ಬ್ರೇಕ್)

ಜ: ರೈತರ ಆತ್ಮಹತ್ಯೆಗಳು ದೊಡ್ಡ ಪ್ರಮಾಣದಲ್ಲಿ ಹೆಚ್ಚುತ್ತಿವೆ. ಇದು ಯಾಕೆ? ಹೇಗೆ ಇವುಗಳನ್ನು ವಿಶ್ಲೇಷಿಸುತ್ತೀರಿ?

ದೇ: ರೈತರ ಆತ್ಮಹತ್ಯೆ ಇತ್ತೀಚಿನ ವಿದ್ಯಾಮಾನಗಳು. ಅದು ಒಂದಲ್ಲ ಒಂದು ರೀತಿಯಲ್ಲಿ ಜಾಗತೀಕರಣದ ಫಲ. ಮುಖ್ಯವಾಗಿ

- ❖ ಅಲ್ಲಿ ಕೊಡುವ ಸಬ್ಸಿಡಿ ಹಣ ಇಲ್ಲಿ ರೈತರ ಆತ್ಮಹತ್ಯೆಗೆ ಕಾರಣವಾಗುತ್ತಿದೆ.
- ❖ ಸರ್ಕಾರಗಳೇ ಸ್ವಾಯತ್ತತೆ ಕಳೆದುಕೊಂಡ ಸರ್ಕಾರಗಳು. ಎಲ್ಲವೂ ಲಾಭಿಗಳಿಗೆ ಸಿಕ್ಕಿಹಾಕಿಕೊಂಡಿವೆ.
- ❖ ಉದ್ಯೋಗ ಸ್ವಾವಲಂಬನೆಯೇ ಅಭಿವೃದ್ಧಿ. ಉದ್ಯೋಗ ಕೀಳುವುದೇ ಅಭಿವೃದ್ಧಿ ಎಂದಾಗಿದೆ.
- ❖ ದಕ್ಷಿಣ ಅಮೇರಿಕಾ ಇಂದು ಒಂದು ದಾರಿ ತೋರಿಸುತ್ತಿದೆ.. ಅದನ್ನು ಗಮನಿಸಬೇಕು.
- ❖ ಜೆಡಿ(ಎಸ್) ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದದ್ದೇ ಅಕ್ರಮ.
- ❖ ಗ್ರಾಮ ವಾಸ್ತವ್ಯ ಸಿ.ಎಂ.ಮಾಡೋ ಕೆಲ್ಸನಾ? ಇಲ್ಲಿ ವಿಜೃಂಭಿಸುವುದು ಅಸಹಾಯಕತೆ ಮತ್ತು ದೈನ್ಯತೆ.
- ❖ ಕರ್ನಾಟಕದಲ್ಲಿ ವಿರೋಧ ಪಕ್ಷ (ಕಾಂಗ್ರೆಸ್) ಅಂತಾ ಎಲ್ಲಿದೆ. ರೂಲಿಂಗ್ ಪಾರ್ಟಿ ಬಿಹೇವಿಯರ್ ಆಳುವ ಪಕ್ಷದ ನಡವಳಿಯೇ ಅವರಲ್ಲಿಲ್ಲವೂ?
- ❖ ಬಿಜೆಪಿಗೆ ದುಡ್ಡಿನ ದಾಹ ಮಾತ್ರವಲ್ಲ ರಕ್ತದ ದಾಹವಿದೆ.
- ❖ ಎಷ್ಟೇ ಕಷ್ಟವಾದರೂ ಹಿಂಸೆಯನ್ನೇ ಒಂದು ತತ್ವವಾಗಿ ಅನುಸರಿಸುತ್ತಿರುವುದು ಒಪ್ಪದ ಮಾತು. ಈ ಹಾದಿ ಅಪಾಯಕಾರಿ. ನಕ್ಸಲೀಯರವಾದವೇ ಇರಲಿ, 'ಧಾರ್ಮಿಕ ಮುಖವಾಡವೇ ಆಗಲಿ...
- ❖ ದಲಿತ ಚಳುವಳಿಯಲ್ಲಿ ಪ್ರತಿಭಟಿಸುವ ಶಕ್ತಿ ಅಂತಃ ಸತ್ವವಾಗಿಯೇ ಇದೆ. ಅಲ್ಲಿ ಹೊಸತನವು ಬೆಳೆದು ಬರಬೇಕಿದೆ.

ಮೊದಲು ಸರ್ಕಾರ ವ್ಯವಸಾಯದ ಉತ್ಪತ್ತಿಯಿಂದ ನಡೆಯುತ್ತಿತ್ತು. ಈಗ ನೂರೆಂಟು ಬಾಬತ್ತುಗಳು ಬಂದಿವೆ. ವ್ಯವಸಾಯ ನಿರ್ಲಕ್ಷಿತ ಕ್ಷೇತ್ರವಾಗಿ ಬಿಟ್ಟಿದೆ. ಉದಾಹರಣೆಗೆ ಸಕ್ಕರೆ ಬೆಳೆಯುತ್ತಿದ್ದೇವೆ. ಈಗ ಬೇರೆಡೆಯಿಂದ ಬೀಟ್ ರೂಟ್ ಮೂಲದ ಸಕ್ಕರೆ ಬರುತ್ತಿದೆ. ಅಲ್ಲಿ ಯಥೇಚ್ಛವಾಗಿ ಬೆಲೆ ಕಡಿಮೆ ಮಾಡಲೆಂದೇ ಸಬ್ಸಿಡಿ ಕೊಡುತ್ತಾರೆ. ಈ ಸಬ್ಸಿಡಿ ಹಣ ನಮ್ಮ ರೈತರ ಆತ್ಮಹತ್ಯೆಗೆ ಕಾರಣ. ಅದಿಲ್ಲದಿದ್ದರೆ ಆ ಸಕ್ಕರೆ ಬರುತ್ತಿರಲಿಲ್ಲ. ಇಲ್ಲಿ ಬೆಲೆ ಇರುತ್ತಿತ್ತು. ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿರಲಿಲ್ಲ. ಇದು ಅರ್ಥೈಸಿ ಕೊಳ್ಳಲು ಒಂದು ಉದಾಹರಣೆ. ಎರಡನೇಯದು ನಮ್ಮ ವ್ಯವಸಾಯ ಪದ್ಧತಿ. ಹೆಚ್ಚಿಗೆ ಸಾಲ ಮಾಡುತ್ತಿದ್ದೇವೆ, ಮಾಡುವಂತಾಗಿದೆ. ರಸಗೊಬ್ಬರ, ಕ್ರಿಮಿನಾಶಕ, ಬಿತ್ತನೆ ಬೀಜಕ್ಕೆ. ಇನ್ನೊಂದು ನೀರನ್ನು ಯಥೇಚ್ಛ ಪೋಲು ಮಾಡೋದು. ಇವು ಪ್ರಮುಖ ಕಾರಣ ಅನ್ನಿಸುತ್ತೆ.

ಜ: ಸರ್ಕಾರಗಳು ಈ ಸನ್ನಿವೇಶಕ್ಕೆ ಹೇಗೆ ಪ್ರತಿಕ್ರಿಯಿಸುತ್ತಿವೆ. ವಿದರ್ಭ, ಕರ್ನಾಟಕ, ಪಂಜಾಬ್ ಕಣ್ಣೆದುರಿಗೆ ಇವೆಯಲ್ಲಾ...

ದೇ: ಸರ್ಕಾರಗಳೋ, ಸ್ವಾಯತ್ತತೆ ಕಳೆದುಕೊಂಡ ಸರ್ಕಾರಗಳು ಎಲ್ಲವೂ ಲಾಭಿಗಳಿಗೆ ಸಿಕ್ಕಿಹಾಕಿಕೊಂಡಿವೆ. ರಸಗೊಬ್ಬರ, ಕ್ರಿಮಿನಾಶಕ ಸಾವಯವ ಗೊಬ್ಬರವೇ ಇರಬಹುದು. ಅದಕ್ಕೂ ಪ್ಲಾಂಟ್ ಒಂದನ್ನು ಕಟ್ಟಬೇಕೆಂದಿಲ್ಲ. ಹೊಸ ಪದ್ಧತಿ ರೂಢಿಸಬೇಕಾಗಿಲ್ಲ ಸರ್ಕಾರಕ್ಕೆ. ಹೀಗಾಗಿ ಗಾಯಕ್ಕೆ ಒಂದಿಷ್ಟು ಮುಲಾಮು ಹಚ್ಚುವ ಕೆಲ್ಸ ಮಾಡುತ್ತಿದೆ ಹೊರ್ತು ರಕ್ತ ಶುದ್ಧೀಕರಣ ಮಾಡುವುದಿಲ್ಲ. ಆದ್ದರಿಂದಲೇ ಸಮಸ್ಯೆ ಬಗೆಹರಿಯೋಲ್ಲ.

ನೈಸರ್ಗಿಕ ಕೃಷಿ ಬಗ್ಗೆ ನಾವು ರೈತ ಸಂಘ, ಡಿ.ಎಸ್.ಎಸ್. ಸಾವಯುವ ಕೃಷಿ ಬಗ್ಗೆ ಪ್ರಚಾರಿಸಿದೆವು. ಸರ್ಕಾರವು ಅದನ್ನೇ ಹೇಳಿತು. ರಾಸಾಯನಿಕ ಗೊಬ್ಬರಗಳಿಂದ ಅಪಾಯ ಕಡಿಮೆ ಇರಬಹುದು. ಆದರೆ ಅದು ದುಬಾರಿಯಾಯಿತು. ಇವರೇ ಅಲ್ಲಿಗೆ ಶಿಫ್ಟ್ ಆಗಿಬಿಟ್ಟರು. ಒಟ್ಟಿನಲ್ಲಿ ಅದೆಲ್ಲಾ ವ್ಯಾಪಾರ, ಕಮೀಷನ್, ನಿಜವೋ ಸುಳ್ಳೋ ರಸ್ತೆ ಮಾಡಲು (ಚತುಷ್ಪಥ) ವಾಜಪೇಯಿಗೆ 12000 ಕೋಟಿ ಶೇರ್ ಸಿಕ್ಕಿತು ಅಂತಾರೆ. ಇತ್ತೀಚೆಗೆ ಕಿಕ್ ಬ್ಯಾಗ್, ಷೇರು ಕಮೀಷನ್‌ಗಾಗಿ ಕೆಲ್ಸಗಳು ನಡೆಯುತ್ತಿವೆ. ಆಡಳಿತ ಮಾಡುವವರು ಹೀಗಾದರೆ ಹೇಗೆ? ಇದು ಏನು ಮಾಡಲು ಸಾಧ್ಯ. ಇದು ಅರ್ಥವಾಯ್ತಲ್ಲ. ಅರ್ಥವಾಯ್ತು ಅನ್ನೋದು ಇಂಪಾರ್ಟೆಂಟ್ ಸಾರ್.

ಜ: ಕೇಂದ್ರ, ರಾಜ್ಯ ಸರ್ಕಾರಗಳು ಆವರ್ತನಿಧಿ 1000 ಕೋಟಿ ಇಡುತ್ತಿದ್ದೇವೆ ಎನ್ನುತ್ತಾರೆ. ಬೆಂಬಲ ಬೆಲೆ ಕೊಡಬಹುದು ಅಂತಾರೆ. ಆಲೂಗಡ್ಡೆ, ಭತ್ತ, ಇತ್ಯಾದಿಗಳಿಗೆ ಈಗ ವಿದರ್ಭ ಪ್ಯಾಕೇಜ್ ಬಂದಿದೆ ಕರ್ನಾಟಕದಲ್ಲಿ ಅದು ಎಷ್ಟು ಜನರಿಗೆ ತಲುಪಿದೆ. ಪರಿಹಾರ ದೊರೆತಿದೆ?

ದೇ : ಸಮಸ್ಯೆಗೆ ಮೂಲ ಕಾರಣ ಬೇರೆ ಇದೆ. ಈಗ ಬೇರೆ ವಸ್ತುಗಳು ಬಂದು ಬೀಳುತ್ತಿದೆ. ಇಡೀ ಜಗತ್ತಿನಲ್ಲಿ ಮನುಷ್ಯ ಸಂಬಂಧಿಗಳಿಂದ ಮನುಷ್ಯ ಕೇಂದ್ರೀತವಾಗಿ ಒಂದು ನಾಗರೀಕತೆ, ಸಮಾಜ ಕಟ್ಟಬೇಕೆಂದಿಲ್ಲ. ಎಲ್ಲರಿಗೂ ಉದ್ಯೋಗ, ಸ್ವಾವಲಂಬನೆ ಇದೇ ಅಭಿವೃದ್ಧಿ ಎಂದಾಗಬೇಕಿತ್ತು. ಆದರೆ ಇವತ್ತು ಒಂದಿಷ್ಟು ಉದ್ಯೋಗ ಕೀಳುವುದೇ ಅಭಿವೃದ್ಧಿ ಎಂದಾಗಿದೆ.

ಒಂದು ಲಕ್ಷ ಕೋಟಿ ಬಂಡವಾಳ ಎನ್ನುತ್ತಾರೆ ಇದನ್ನು ಇಮ್ಯಾಜಿನ್(ಊಹೆ) ಮಾಡಿಕೊಳ್ಳುವುದೇ ಕಷ್ಟ. ಜನಶಕ್ತಿ ಪತ್ರಿಕೆ ಬಿಡುಗಡೆ ಸಂದರ್ಭದಲ್ಲಿ ಇದನ್ನು ಹೇಳಿದೆ. ಇದು ದೇಹದೊಳಗೆ ಬರೀ ಬಿಳಿ ರಕ್ತದ ಕಣಗಳು ವಿಪರೀತ ಹೆಚ್ಚಾಗುವಂತಹ ಪ್ರಕ್ರಿಯೆ. ಹೀಗಾಗಿ ನಮ್ಮ ದೇಹದ ಸಮತೋಲನ, ರಕ್ಷಣಾ ವ್ಯವಸ್ಥೆಯೇ ಏರುಪೇರಾಗಿ ಕುಸಿಯಲಿದೆ. ಕುಸಿತಾ ಇದೆ.

ಜ: ವಿದರ್ಭ ಪ್ಯಾಕೇಜ್ ಬಗ್ಗೆ ಪ್ರಧಾನಿ ವಿಮರ್ಶೆಗೆ ಬಂದು ಸಭೆ ಮಾಡಿ ಹೋಗಿದ್ದಾರೆ. ಹೇಳಿದಷ್ಟು ಹಣ ಕೊಟ್ಟಿಲ್ಲ.

ದೇ: ಪ್ಯಾಕೇಜ್ ಅಂತಾ 224 ಕೊಟಿ ಬಿಡಿ, 548 ಕೋಟಿಯೇ ಕೊಡಲಿ ಸಮಸ್ಯೆ ಬಗೆಹರಿದೀತಾ? ಅದು ತಾತ್ಕಾಲಿಕ ಸಮಾಧಾನವೇ ಹೊರತು ಪರಿಹಾರವಲ್ಲ.

ಜ: ಎಪಿಎಂಸಿ ಕಾಯ್ದೆ ಬಂದಿದೆ?

ದೇ: ಅದಷ್ಟು ಗೊತ್ತಿಲ್ಲ. ಗಮನಿಸಿ ಹೇಳಬೇಕು.

ನಾನು ಮೊದಲು ಚೀನಾ ಏನು ಹೇಳುತ್ತದೆ ಎಂದು ಗಮನಿಸುತ್ತಿದ್ದೆ. ಈಗ ದಕ್ಷಿಣ ಅಮೇರಿಕಾವನ್ನು ನೋಡುತ್ತಿರುವೆ. ಲ್ಯಾಟಿನ್ ಅಮೇರಿಕಾ ಸುಸ್ತಾಗಿ ಎದ್ದು ಬಿದ್ದು ಚೇತರಿಸಿಕೊಳ್ಳುತ್ತಿದೆ. ತನ್ನ ದಾರಿಯನ್ನು ಹುಡುಕಿಕೊಳ್ಳಲು ಪ್ರಯತ್ನಿಸುತ್ತಿದೆ. ಇದನ್ನು ಗಮನಿಸುವುದು ತುಂಬಾ ಮುಖ್ಯ.

ಜ: ಅವರು ಜಾಗತೀಕರಣ ಹೊಡೆತಕ್ಕೆ ಮೊದಲು ಸಿಕ್ಕವರಲ್ಲವೇ? ಅದು ಒಂದು ದಾರಿ ತೋರಿಸಬಹುದೇನೋ?

ದೇ: ಜಾಗತೀಕರಣದ ಹೊಡೆತ ಅನುಭವಿಸಿ ಚಿಗುರುತ್ತಿದ್ದಾರೆ. ಈ ಹೋರಾಟಗಳ ಮಾಹಿತಿಗಳು ಪತ್ರಿಕೆಯಲ್ಲಿ ಬರಲಿ. ಸಣ್ಣ ಮಾಹಿತಿಯೇ ಇರಲಿ. ಅದು ವ್ಯಾಲ್ಯೂಬಲ್ (ಮೌಲಿಕ) ಅದು ಬೆಳಕು.

ಜ: ಅಧಿಕಾರದ ಹಸ್ತಾಂತರ ಕರ್ನಾಟಕದಲ್ಲಿ ಬಹಳ ದೊಡ್ಡ ವಿಷಯವೆಂದು ಚರ್ಚೆಯಾಗುತ್ತಿದೆ. ಬಿಜೆಪಿಗೆ ಹಸ್ತಾಂತರ ಮಾಡಬೇಕೇ?

ದೇ: ಅಕ್ಟೋಬರ್ 3ರವರೆಗೂ ಕಾಯಬೇಕು ಗು). ದೇವರು ಮತ್ತು ದೇವೇಗೌಡರಿಗೆ ಗೊತ್ತು ಎಂದು ಪಿ.ಮಹ್ಮದ್‌ರವರು ಪ್ರಜಾವಾಣಿಯಲ್ಲಿ ವ್ಯಂಗ್ಯಚಿತ್ರ ಬರೆದಿದ್ದಾರೆ. ತುಂಬಾ ಅರ್ಥಪೂರ್ಣ.

ಜ: ಒಪ್ಪಂದದಂತೆ ಬಿಜೆಪಿಗೆ ಹೋಗಬೇಕಾ?

ದೇ: ಅವರು ಅಧಿಕಾರಕ್ಕೆ ಬಂದಿದ್ದೇ ಒಂದು ಅಕ್ರಮ. ಅದರ ಸಂತಾನ - ಮಗು ಅಂದ್ರೆ ಆಡಳಿತ ಹೆಂಗಿರುತ್ತೆ. ಅಧಿಕಾರಕ್ಕೆ ಬಂದಿದ್ದನ್ನೇ ನಾವು ಒಪ್ಪಲು ಅಸಾಧ್ಯ. ಅಂತಹದ್ದೊಂದು ಆಗಬಾರದಿತ್ತು. ಅಲ್ಲವಾ. ಗಣಿ ದುಡ್ಡು, ಗಣಿ ದುಡ್ಡು... ಮತ್ತು ವಚನ ಭ್ರಷ್ಟತೆ. ಸೆಕ್ಯುಲರ್ ಎಂದು ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿಯೇ ಗೆದ್ದಿದ್ದಾರೆ. ಈಗ ಅವರದ್ದು ವಚನ ಭ್ರಷ್ಟತೆ. ಕುಮಾರ ಸ್ವಾಮಿ ವಚನ ಭ್ರಷ್ಟ ನಾಗಲೋ ಅಥವಾ ಅಪ್ಪನ ಒತ್ತಡ ಎಂದೆಲ್ಲಾ ಮಾತನಾಡುತ್ತಿದ್ರು. ಆದರೆ ಓಟು ನೀಡಿದ ಜನರಿಗೆ ವಂಚನೆ ಮಾಡಿ ವಚನ ಭ್ರಷ್ಟನಾಗಿಲ್ಲವೇ? ಜಾತ್ಯಾತೀತತೆ, ಮಣ್ಣು ಮಸಿ ಅಂತಾ ಹೇಳಿದ್ದರಲ್ಲಾ.

ಜ: ಅಭಿವೃದ್ಧಿ, ಮುಖ್ಯಮಂತ್ರಿ ಗ್ರಾಮ ವಾಸ್ತವ್ಯ ಸ್ಟಂಟಾ ಅಥವಾ ಜನ ಮರುಳಾಗುತ್ತಾರಾ ಯಾರೂ ಮಾಡದ ಪ್ರಯೋಗ ಅನ್ನುತ್ತಾರಲ್ಲ?

ದೇ: ಗ್ರಾಮ ವಾಸ್ತವ್ಯ - ಇದನ್ನು ಮುಖ್ಯಮಂತ್ರಿ ಮಾಡೋ ಕೆಲ್ಸನಾ. ಅದಕ್ಕೆ ಪ್ರತಿಕ್ರಿಯೆ. ಹತಾಶೆ ಮತ್ತು ದೈನ್ಯತೆ. ಜನರು ಸಂಭಮಿಸುತ್ತಾರೆ ಎನ್ನುತ್ತಾರೆ. ಅದು ಸಂಭ್ರಮಿಸುವುದಲ್ಲ. ಅದರ ಆಳದಲ್ಲಿರೋದು ಜನ ಸಾಮಾನ್ಯರ ಅಸಹಾಯಕತೆ ಮತ್ತು ದೈನ್ಯತೆ. ಶೆಡ್ಯೂಲ್ ಕ್ಯಾಸ್ಟ್‌ನವರ (ಪ.ಜಾತಿ) ಪ್ರದೇಶದಲ್ಲಿ ಕುಮಾರಸ್ವಾಮಿ ಮಲಗಿದ್ದಾರೆ. ಆ ಮನೆಯ ಹುಡುಗಿ ಅಪ್ಪನ ಪೋಟೋ ಕೊರಳಿಗೆ ಹಾಕಿ ನಿಂತಿದ್ದಾಗ ಕುಮಾರಸ್ವಾಮಿ 500 ರೂಪಾಯಿಗಳ ನೋಟು ಕೊಡುತ್ತಿದ್ದರು. ಪೋಟೋ ಪತ್ರಿಕೆಯಲ್ಲಿ ಬಂದಿತ್ತಲ್ಲ. ಇದೇನನ್ನು ತೋರಿಸುತ್ತದೆ. ಅಸಹಾಯಕತೆ ಮತ್ತು ದೈನತೆಯನ್ನೇ.


ಜ: ಬಿಜೆಪಿ ಈಗಿನ ಸರ್ಕಾರದಲ್ಲಿ ಉಪಮುಖ್ಯಮಂತ್ರಿ, ಕೆಲವು ಮಂತ್ರಿಗಳನ್ನು ಹೊಂದಿರುವುದಾಗಲೇ ಕರ್ನಾಟಕದಲ್ಲಿ ಏನೆಲ್ಲಾ ಅನಾಹುತಗಳನ್ನು ಮಾಡಿದೆ. ಕೋಮುಗಲಭೆಗಳು ಬಾಬಾಬುಡನ್ ಗಿರಿ ಪ್ರಶ್ನೆ. ಕೋಮುಗಲಭೆಕೋರರ ಮೇಲಿನ ಕೇಸ್ ಹಿಂದಕ್ಕೆ. ಸಂಘಪರಿವಾರಕ್ಕೆ ಕುಮ್ಮಕ್ಕು, ಬಜೆಟ್ ಇತ್ಯಾದಿ ಮುಂದೆ ಹೇಗೆ? ಅದು ನಮ್ಮ ದೇಶದ ಸಂವಿಧಾನಕ್ಕೆ ಬದ್ಧವಾಗಿ ವರ್ತಿಸೀತೆ?

ದೇ : ಕಷ್ಟವಿದೆ, ಬಹಳ ಕಷ್ಟವಿದೆ. ಜೆಡಿ(ಎಸ್)

ಪುಟ 15ಕ್ಕೆ

ಹಳೆಯ ಹೈದರಾಬಾದ್ ನಗರದ ಸಮಸ್ಯೆಗಳ ಪರಿಹಾರಕ್ಕೆ ಹೋರಾಟ

ಪಾದಯಾತ್ರೆ ಮೇಲೆ ಮುಸ್ಲಿಂ ಮೂಲಭೂತವಾದಿಗಳಿಂದ ಹಲ್ಲೆ



ಹೈದರಾಬಾದ್ ಈಗ ಹೈಟೆಕ್ ನಗರ ಎಂದು ಖ್ಯಾತಿ ಗಳಿಸಿದೆ. ಆದರೆ ಅದೇ ನಗರದ ಹಳೆಯ ಪ್ರದೇಶಗಳಲ್ಲಿ ಸಮಸ್ಯೆಗಳು ದಿನೇ-ದಿನೇ ಉಲ್ಬಣಗೊಳ್ಳುತ್ತಿವೆ. ಜಾಗತೀಕರಣ ಎಂದರೆ ಇದೇ ತಾನೇ? ಸಮಸ್ಯೆಗಳು ಎಷ್ಟು ಅಸಹನೀಯವಾಗುತ್ತಿವೆಯೆಂದರೆ ಜನ ಈಗ ಬೀದಿಗಿಳಿಯುತ್ತಿದ್ದಾರೆ. ಕಳೆದ 60ವರ್ಷಗಳಲ್ಲಿ ಆಳರಸರ ನಿರ್ಲಕ್ಷ್ಯ ಮತ್ತು ತಾವು ಆರಿಸಿ ಕಳಿಸಿದ ಪ್ರತಿನಿಧಿಗಳ ಭ್ರಷ್ಟಾಚಾರಗಳಿಂದ ಅವರೀಗ ರೋಸಿಹೋಗಿದ್ದಾರೆ.

ಜನಗಳ ಈ ಸಂಕಟಗಳಿಗೆ ದನಿ ನೀಡಲು ರಾಜ್ಯಸಭಾ ಸದಸ್ಯ ಹಾಗೂ ಸಿಪಿಐ(ಎಂ) ಕೇಂದ್ರ ಸಮಿತಿಯ ಸದಸ್ಯ. ಪಿ ಮಧುರವರ ನೇತೃತ್ವದಲ್ಲಿ ಅಗಸ್ಟ್ 25ರಿಂದ ನಡೆದ ಒಂಭತ್ತು ದಿನಗಳ ಪಾದಯಾತ್ರೆಗೆ ವ್ಯಾಪಕ ಜನಸ್ಪಂದನೆ ವ್ಯಕ್ತವಾಗಿದೆ. ಇದು ಎಷ್ಟು ತೀವ್ರವಾಗಿದೆಯೆಂದರೆ ಈ ಪ್ರದೇಶದಿಂದ ಗೆದ್ದುಬರುತ್ತಿರುವ ಎಮ್ ಐ ಎಮ್ (ಮಜ್ಲಿಸ್ ಇತ್ತೆಹದುಲ್ ಮುಸ್ಲಿಮಿನ್)ಗೆ ತಮ್ಮ ನಿಜರೂಪ ಬಯಲಾಗುವ ನಡುಕ ಉಂಟಾಗಿದೆ. ಸೆಪ್ಟಂಬರ್ 3ರಂದು ಅವರು ಪಾದಯಾತ್ರೆಯ ಮೇಲೆ ಕಲ್ಲು-ಇಟ್ಟಿಗೆಗಳಿಂದ ನಡೆಸಿದ ಧಾಳಿಯೇ ಇದಕ್ಕೆ ಸಾಕ್ಷಿ. ಇದರಲ್ಲಿ 15 ಸಿಪಿಐ(ಎಂ) ಕಾರ್ಯಕರ್ತರು ಗಾಯಗೊಂಡರು, ಮೂವರನ್ನು ಆಸ್ಪತ್ರೆಗೆ ಸೇರಿಸಬೇಕಾಗಿ ಬಂತು. ಆದರೂ ಪಾದಯಾತ್ರೆ ನಿಲ್ಲಲಿಲ್ಲ. ಈ ಧಾಳಿ ಹೈದರಾಬಾದಿನಲ್ಲಿ ವ್ಯಾಪಕ ಖಂಡನೆಗೊಳಗಾಯಿತು.

ಹೈಟೆಕ್ ಹೈದರಾಬಾದ್ ಅತ್ಯಾಧುನಿಕ ಮಾಹಿತಿ ತಂತ್ರಜ್ಞಾನದ ಕೇಂದ್ರವಾಗುತ್ತಿದ್ದರೆ ಹಳೆಯ ಹೈದರಾಬಾದಿನಲ್ಲಿ ಸಾಕ್ಷರತೆ ಇಳಿಯುತ್ತಿದೆ, ವಸತಿ, ಆರೋಗ್ಯ, ಕುಡಿಯುವ ನೀರು, ಉದ್ಯೋಗ ಎಲ್ಲ ಕ್ಷೇತ್ರಗಳಲ್ಲೂ ಸಮಸ್ಯೆಗಳು ಉಲ್ಬಣಗೊಳ್ಳುತ್ತಿವೆ, ಅಭಿವೃದ್ಧಿ ನಿಧಿಗಳ 30ಶೇ. ಮಾತ್ರ ನಿಜವಾಗಿ ಖರ್ಚಾಗುತ್ತಿದೆ, ಉಳಿದವನ್ನೆಲ್ಲ ಕಾಂಟ್ರಾಕ್ಟರ್ ಗಳು, ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ನುಂಗಿ ಹಾಕುತ್ತಿದ್ದಾರೆ ಎಂದ ಪಿ ಮಧುರವರು ಸಿಪಿಐ(ಎಂ) ಇತರ ಪಕ್ಷಗಳ ಸಹಕಾರ ಪಡೆದು ಹಳೆಯ ನಗರದ ಅಭಿವೃದ್ಧಿಗಾಗಿ ಹೋರಾಟ ಮತ್ತು ಭೂಹೋರಾಟವನ್ನು ತೀವ್ರಗೊಳಿಸುವುದು ಎಂದು ಸಾರಿದರು. ಭಾರತ ಸರಕಾರ ಹಳೆಯ ನಗರದ ಅಭಿವೃದ್ಧಿಗೆ 4000ಕೋಟಿ ರೂಪಾಯಿಗಳ ಒಂದು ವಿಶೇಷ ಪ್ಯಾಕೇಜನ್ನು ಪ್ರಕಟಿಸಬೇಕು ಎಂದು ಅವರು ಒತ್ತಾಯಿಸಿದರು. ○

ಪ್ರವಾಹಪೀಡಿತರ ಮೇಲೆಯೇ ಗೋಳಿಬಾರು

ಬಿಹಾರದ ಎನ್‌ಡಿಎ ಸರ್ಕಾರದ ವಿಕ್ರಮ

ಈ ಬಾರಿ ಬಿಹಾರದ 19 ಜಿಲ್ಲೆಗಳು ಭೀಷಣ ನೆರೆ ಹಾವಳಿ ಎದುರಿಸಬೇಕಾಗಿ ಬಂದಿದೆ. ಇಂತಹ ಸಂದರ್ಭದಲ್ಲಿ ಪ್ರವಾಹ ಪೀಡಿತರ ನೆರವಿಗೆ ಧಾವಿಸುವ ಬದಲು ಅಲ್ಲಿಯ ಸರಕಾರದ ಪೋಲೀಸರು ಅಗಸ್ಟ್ 3ರಂದು ಪ್ರವಾಹಪೀಡಿತರ ಮೇಲೆಯೆ ಗೋಳಿಬಾರು ಮಾಡಲು ಧಾವಿಸಿದರು! ಇದೀಗ ಬಿಹಾರದ ಎನ್‌ಡಿಎ ಸರಕಾರದ ವಿಕ್ರಮ!

ಆ ಅಗಸ್ಟ್ 3ರಂದು ಬಿಹಾರದ ಮಧುಬನಿ ನಗರದ ಸಮೀಪದ ಚಕ್ಧಾ ಎಂಬ ಗ್ರಾಮದಲ್ಲಿ ಗೋಳಿಬಾರು ಏಕೆ ನಡೆಯಿತು? ಅಗಸ್ಟ್ 1 ರಿಂದಲೇ ಈ ಹಳ್ಳಿ ಭಾರೀ ಮಳೆಯಿಂದಾಗಿ ನೀರಿನಿಂದ ಆವೃತ್ತವಾಗಿತ್ತು. ಸುಮಾರಾಗಿ ಪ್ರತಿ ಮನೆಯೊಳಗೂ ನೀರು ಪ್ರವೇಶಿಸಿತ್ತು. ಅತ್ತ ಮಧುಬನಿ ನಗರದಲ್ಲೂ ಪ್ರವಾಹದ ಹಾವಳಿ. ಅದನ್ನು ತಪ್ಪಿಸಲು ನೀರನ್ನು ಬೇರೆಡೆಗೆ ಹರಿಸಬೇಕೆಂದು ಒಬ್ಬ ಹಿರಿಯ ಬಿಜೆಪಿ ಮಂತ್ರಿಯ ಆದೇಶವಾಯಿತಂತೆ.. ತಕ್ಷಣವೇ ಜಿಲ್ಲಾಡಳಿತ ಕಾರ್ಯಪ್ರವೃತ್ತವಾಯಿತು. ಚಕ್ಧಾ ಬಳಿಯ ರಸ್ತೆಗೆ ಅಡ್ಡಲಾಗಿದ್ದ ಕಾಲುವೆಯ ಮೂಲಕ ನಗರದ ನೀರನ್ನು ಪಂಪುಗಳನ್ನು ಬಳಸಿ ಎತ್ತಿಹಾಕಲಾರಂಭಿಸಿದರು. ಇದನ್ನು ಕಂಡು ನೀರು ತಮ್ಮ ಕಡೆ ನುಗ್ಗಬಹುದೆಂದು ಭಯಭೀತರಾದ ಚಕ್ಧಾ ಮತ್ತು ಹತ್ತಿರದ ಹಳ್ಳಿಗಳ ಜನ ಆ ಜಾಗದಲ್ಲಿ ನೆರೆದು ಪ್ರತಿಭಟಿಸಿದರು.

ಮಧ್ಯಾಹ್ನ 3.30. ಎಸ್‌ಡಿಒ ನೇತೃತ್ವದ ಒಂದು ಪೋಲೀಸ್ ಪಡೆ ಧಾವಿಸಿ ಬಂತು. ಜನಗಳಿಗೆ ಬಡಿಯಲಾರಂಭಿಸಿತು. ರೊಚ್ಚಿಗೆದ್ದ ಜನ ಓಟ್ಟಾದರು. ಅದನ್ನು ಕಂಡ ಪೋಲೀಸ್ ಪಡೆ ಹಿಂದೆ ಸರಿಯಿತು. ಜಿಲ್ಲಾ ಆಡಳಿತಕ್ಕೆ ಇದೊಂದು ಪ್ರತಿಷ್ಠೆಯ ಪ್ರಶ್ನೆಯಾದಂತಿತ್ತು. ಸ್ವಲ್ಪ ಹೊತ್ತಿನಲ್ಲೇ ಜಿಲ್ಲಾ ಮ್ಯಾಜಿಸ್ಟ್ರೇಟ್, ಎಸ್‌ಪಿ ಮತ್ತಿತರ ಪೋಲೀಸ್ ಅಧಿಕಾರಿಗಳ ನೇತೃತ್ವ ದಲ್ಲಿ ಪೋಲೀಸರ ಒಂದು ದೊಡ್ಡ ಪಡೆ ಊರಿನ ಮೇಲೆ ಧಾಳಿಯಿಟ್ಟಿತು, ಮತ್ತೆ ಗ್ರಾಮಸ್ಥರನ್ನು ನಿರ್ದಯವಾಗಿ ಥಳಿಯಲಾರಂಭಿಸಿತು. ಗ್ರಾಮಸ್ಥರು ಇದನ್ನು ಧೈರ್ಯದಿಂದ ಎದುರಿಸಿದರು. ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಬೀದಿಗಳಲ್ಲಿ ಜಮಾಯಿಸ ಲಾರಂಭಿಸಿದರು. ಇದನ್ನು ಕಂಡ ಪೋಲೀಸ್ ಪಡೆ ಹಿಂದೆ ಸರಿಯಲಾರಂಭಿಸಿತು. ಆದರೆ ಈ ನಡುವೆ ಒಬ್ಬ ಹವಾಲ್ದಾರ್ ಒಬ್ಬ ಯುವ ಮೆಡಿಕಲ್ ರೆಪ್ರಸೆಂಟೇಟಿವ್ ಮನೆಗೆ ನುಗ್ಗಿ ಅತನನ್ನು ಕೊಂದು ಹಾಕಿದ. ಇಬ್ಬರು ದಾರಿಹೋಕರೂ ಗುಂಡೇಟು ತಿಂದರು.

ತನ್ನ ತಪ್ಪನ್ನು ಮುಚ್ಚಿ ಹಾಕಲು ಆಡಳಿತ ಸ್ಥಳೀಯ ಸಿಪಿಐ(ಎಂ) ಮುಖಂಡರ ಮೇಲೆ ಮೂರು ಎಫ್‌ಐಆರ್‌ಗಳನ್ನು ಹಾಕಿತು. ಇದಕ್ಕೆ ಕಾರಣ ಇಲ್ಲಿ ಈ ಪಕ್ಷದ ಕಾರ್ಯಕರ್ತರು ಗ್ರಾಮದ ಸಮಸ್ಯೆಗಳನ್ನು ಎತ್ತಿಕೊಂಡು ಹೋರಾಟ ನಡೆಸಿಕೊಂಡು ಬಂದಿದ್ದಾರೆ. ಇಲ್ಲಿ ಗಮನಿಸಬೇಕಾದ ಸಂಗತಿಯೊಂದರೆ ಮಧುಬನಿ ನಗರದ ನೀರು ಹರಿದು ಹೋಗಲು ವಾಟ್ಸನ್ ಕಾಲುವೆಯೆಂಬುದೊಂದು ಇತ್ತು. ಆದರೆ ಅದನ್ನು ಭೂಮಾಫಿಯಾಗಳು ಒತ್ತುವರಿ ಮಾಡಿಕೊಂಡು ಮನೆಗಳನ್ನು ಕಟ್ಟಿಕೊಂಡು ಅಲ್ಲಿ ನೀರಿನ ಹರಿವಿಗೆ ಅಡ್ಡಿ ಮಾಡಿದ್ದರು. ಇದೇ ಮಧುಬನಿ ಪಟ್ಟಣದಲ್ಲಿ ನೀರು ತುಂಬಲು ಕಾರಣವಾಗಿತ್ತು. ಬಿಜೆಪಿ ಕೂಡಾ ಈ ಕಾಲುವೆಯ ಮೇಲಿನ ಜಾಗದಲ್ಲಿ ಕಚೇರಿ ಕಟ್ಟಿಸಿಕೊಂಡಿದೆ! ಈ ವಾಟ್ಸನ್ ಕಾಲುವೆಯ ಮೇಲಿನ ಒತ್ತುವರಿಗಳನ್ನು ನಿವಾರಿಸಿದರೆ ಮಧುಬನಿ ಪಟ್ಟಣದ ನೀರು ಹರಿವಿನ ಸಮಸ್ಯೆ ಪರಿಹಾರವಾಗುತ್ತದೆ ಎಂದು ಗ್ರಾಮಸ್ಥರು ಹೇಳುತ್ತಾ ಬಂದಿದ್ದರೂ ಜಿಲ್ಲಾಡಳಿತ ಕಿವಿಗೊಡದೆ ಅದನ್ನು ಅವರ ಹಳ್ಳಿಯ ಕಡೆಗೇ ತಿರುಗಿಸಿದ್ದು ಅವರನ್ನು ಇನ್ನಷ್ಟು ರೇಗಿಸಿತ್ತು.

ಈ ಗೋಳಿಬಾರು ಮತ್ತು ಸುಳ್ಳು ಕೇಸುಗಳ ವಿರುದ್ಧ ವ್ಯಾಪಕ ಪ್ರತಿಭಟನೆಗಳು ನಡೆದವು. ಅಗಸ್ಟ 7ರಂದು ಜಿಲ್ಲಾ ಮ್ಯಾಜಿಸ್ಟ್ರೇಟರ ಕಚೇರಿಯೆದುರು ಬೃಹತ್ ಧರಣಿ ನಡೆಯಿತು. ಸಿಪಿಐ(ಎಂ) ಮುಖಂಡರಾದ ಬೃಂದಾ ಕಾರಟ್ ಮತ್ತು ಹನ್ನನ್ ಮೊಲ್ಲ ಬಿಹಾರದ ಮುಖ್ಯಮಂತ್ರಿಗಳನ್ನು ಭೇಟಿಯಾದರು. ಕೊನೆಗೂ ಮುಖ್ಯ ಮಂತ್ರಿಗಳು ತಮ್ಮ ಗೃಹ ಕಾರ್ಯದರ್ಶಿಗಳನ್ನು ಕಳಿಸಿ ತನಿಖೆ ನಡೆಸಬೇಕಾಗಿ ಬಂತು. ಹವಾಲ್ದಾರನ ಮೇಲೆ ಈಗ ಕೊಲೆ ಮೊಕದ್ದಮೆ ಹಾಕಲಾಗಿದೆ.

ಹೇ ರಾಮ ರಾಮಾ

ಓ ರಾಮ ಆ ನಿನ್ನ ಹೆಸರಿಂದ ಇಂದೆ
ಏನೆಲ್ಲ ನಡೆದವೋ ತೆರೆ ಹಿಂದೆ ಮುಂದೆ
[illegible] ಅತ್ಯಾಚಾರ ಹೇ ರಾಮ ರಾಮ
ಜಗದಗಲ ಪಸರಿಸಿತೋ ಆ ನಿನ್ನ ನಾಮ

- [illegible]ಬಾರಿ

ನಾಮಶೂದ್ರರು ಮತ್ತಿತರ ಬಡಜನರಿಗೆ ಪರಿಶಿಷ್ಟ ಸ್ಥಾನಮಾನ


ದಿಲ್ಲಿ ಸಮಾವೇಶದ ಒತ್ತಾಯ


1947ರಲ್ಲಿ ದೇಶ ವಿಭಜನೆಯಾದಾಗ ಲಕ್ಷಾಂತರ ಮಂದಿ ಆಗಿನ ಪೂರ್ವ ಪಾಕಿಸ್ತಾನದಿಂದ ನಿರಾಶ್ರಿತರಾಗಿ ಬಂದು ಪಶ್ಚಿಮ ಬಂಗಾಳ ಮತ್ತಿತರ ಗಡಿರಾಜ್ಯಗಳಲ್ಲಿ ನೆಲೆಸಿದರು. ನಂತರ ಕೇಂದ್ರ ಸರಕಾರ ಇವರಿಗೆ ಬೇರೆ ಕೆಲವು ರಾಜ್ಯಗಳಲ್ಲಿ ಮರುವಸತಿ ಕಲ್ಪಿಸಿತು. ಆದರೆ ಇವರಲ್ಲಿ ಹೆಚ್ಚಿನವರ ಪರಿಸ್ಥಿತಿ ಶೋಚನೀಯವಾಗಿಯೇ ಉಳಿಯಿತು. ಇವರಲ್ಲಿ ಬಹುಮಂದಿ ನಾಮಶೂದ್ರ. ಪೋಡ್, ಮಾಜಿ ಮುಂತಾದ ಕಡು ಬಡತನದ ಜಾತಿಗಳಿಗೆ ಸೇರಿದವರು. ಒರಿಸ್ಸಾ, ಪಶ್ಚಿಮ ಬಂಗಾಳ ಮತ್ತಿತರ ಪೂರ್ವದ ರಾಜ್ಯಗಳಲ್ಲಿ ಇವರು ಪರಿಶಿಷ್ಟ ಜಾತಿಗಳಿಗೆ ಸೇರಿದವರು. ಆದರೆ ಛತ್ತೀಸ್‌ಗಢ, ಮಧ್ಯಪ್ರದೇಶ, ಉತ್ತರಾಖಂಡ, ಉತ್ತರ ಪ್ರದೇಶ ಮತ್ತು ದಿಲ್ಲಿಯಲ್ಲಿ ಇವರಿಗೆ ಆ ಪ್ರಯೋಜನವೂ ಇಲ್ಲ. ತಮ್ಮ ಮಾತೃಭಾಷೆಯಲ್ಲಿ ಶಿಕ್ಷಣವಿಲ್ಲ, ಬದುಕಿಗೆ ಭೂಮಿಯ ಆಸರೆಯಿಲ್ಲ. ಸಿಪಿಐ(ಎಂ) ಈ ಜನರ ಪ್ರಶ್ನೆಗಳನ್ನೆತ್ತಿಕೊಂಡಿದೆ. ಈ ಹಿನ್ನೆಲೆಯಲ್ಲಿ ಅದು ಅಗಸ್ಟ್ 21ರಂದು ದಿಲ್ಲಿಯ ಅಂಬೇಡ್ಕರ್ ಭವನದಲ್ಲಿ ಒಂದು ಸಮಾವೇಶವನ್ನು ಏರ್ಪಡಿಸಿತ್ತು.

ಈ ಸಮಾವೇಶ ಉತ್ತರಪ್ರದೇಶ ಮತ್ತಿತರ ರಾಜ್ಯಗಳಲ್ಲಿ ನಾಮಶೂದ್ರರು ಮತ್ತು ಸಂಬಂಧಿತ ಜಾತಿಗಳನ್ನು ಪರಿಶಿಷ್ಟ ಜಾತಿಗಳೆಂದು ಪರಿಗಣಿಸಲು ಕೇಂದ್ರ ಸರಕಾರ ತಕ್ಷಣವೇ ಇಂದು ಶಾಸನ ತರಬೇಕು ಎಂದು ಆಗ್ರಹಿಸಿದೆ.

ಸಿಪಿಐ(ಎಂ) ಪೊಲಿಟ್ ಬ್ಯೂರೊ ಸದಸ್ಯರಾದ ಕೆ ವರದರಾಜನ್ ಸಮಾವೇಶವನ್ನು ಉದ್ಘಾಟಿಸಿದರು. ಸಂಸತ್ತಿನಲ್ಲಿ ಈ ಪ್ರಶ್ನೆಯನ್ನು ಹಲವು ಬಾರಿ ಎತ್ತಿರುವ ಲೋಕಸಭೆಯಲ್ಲಿ ಸಿಪಿಐ(ಎಂ)ನ ಮುಖಂಡರಾಗಿರುವ ಬಸುದೇವ ಆಚಾರ್ಯ ಪ್ರತಿನಿಧಿಗಳಿಗೆ ಶುಭಾಶಯ ಕೋರಿದರು. ಇವರಲ್ಲದೆ ಇನ್ನೂ ಐದು ಸಿಪಿಐ(ಎಂ) ಸಂಸದರು ಈ ಸಮಾವೇಶದಲ್ಲಿ ಹಾಜರಿದ್ದರು. ಬೃಂದಾ ಕಾರಟ್ ಸಮಾವೇಶದ ನಿರ್ಣಯವನ್ನು ಮಂಡಿಸಿದರು. ಬೇರೆ-ಬೇರೆ ರಾಜ್ಯಗಳ 20 ಪ್ರತಿನಿಧಿಗಳು ನಿರ್ಣಯದ ಮೇಲೆ ಮಾತನಾಡಿದರು. ○

ಭಾರತ - ಅಮೆರಿಕಾ ಪರಮಾಣು ಒಪ್ಪಂದ ವಿರೋಧಿಸಿ ಮಂಗಳೂರಿನಲ್ಲಿ ನಡೆದ ಪ್ರತಿಭಟನಾ ಪ್ರದರ್ಶನ





ಅಣು ಒಪ್ಪಂದ

ಮಾಧ್ಯಮಗಳು ಯಾರ ತುತ್ತೂರಿ ಊದಿದವು?

ಭಾರತ-ಅಮೇರಿಕಾ ಅಣು ಒಪ್ಪಂದ ಪರ-ವಿರೋಧಿ ಚರ್ಚೆಗಳು ಅವರವರ ತಿಳುವಳಿಕೆ, ಹಿತಾಸಕ್ತಿಗೆ ಅನುಗುಣವಾಗಿ ನಡೆಯುತ್ತಿವೆ. ಸ್ವಾತಂತ್ರ್ಯ, ಸಾರ್ವಭೌಮತೆ, ಸಾಮಾನ್ಯ ಜನರ ಹಿತಾಸಕ್ತಿಗಳನ್ನು ಪ್ರೀತಿಸುವವರೆಲ್ಲರೂ ಈ ಅಣು ಒಪ್ಪಂದವನ್ನು ಜಾರಿಯಾಗದಂತೆ ತಡೆಯಬೇಕು. ಈ ಆಧಾರದಲ್ಲಿಯೇ ಎಡಪಕ್ಷಗಳು ಈ ಒಪ್ಪಂದವನ್ನು ವಿರೋಧಿಸಿದವು.

'ಕೆಲವು ವಿದ್ಯಾವಂತ ಯುವಕರಿಗೆ ನೌಕರಿ ದೊರೆಯುತ್ತದೆ. ಅಮೇರಿಕಾದ ಆರ್ಥಿಕತೆ ಬಲಾಢ್ಯವಾಗಿದೆ ಎಂದಾಗಲೀ ಸೋವಿಯತ್ ಒಕ್ಕೂಟದ ಪತನದ ನಂತರ ಎರಡು ಧ್ರುವಗಳ ಜಗತ್ತಿಗೆ ಬದಲಾಗಿ ಭಾರತದ ಏಕಧೃವಿಕರಣಗೊಂಡು ಜಗತ್ತಿನಲ್ಲಿ ಅಮೇರಿಕಾ ಮಾತ್ರವೇ ಬಲಾಢ್ಯ ದೇಶವಾಗಿದೆ ಎಂಬ ಉದ್ದೇಶದಿಂದಾಗಲೀ ಅಮೇರಿಕಾಕ್ಕೆ ಅಡಿಯಾಳಾಗುವ ಅಣು-ಒಪ್ಪಂದವನ್ನು ಒಪ್ಪಬೇಕೆ? ಸುತರಾಂ ಸಾಧ್ಯವಿಲ್ಲ.

ಆದರೆ ಮಾಧ್ಯಮ ಜಗತ್ತಿನ ಬಹುತೇಕ ಮಿತ್ರರು, ಅಣು-ಒಪ್ಪಂದವನ್ನು ವಿರೋಧಿಸುವ ಎಡ ಪಕ್ಷಗಳ ನಿಲುವು ಸರಿಯಿಲ್ಲವೆಂದು ವಾದಿಸುತ್ತಾರೆ. ಈ ಕುರಿತು ಪ್ರಜಾಸತ್ತಾತ್ಮಕವಾಗಿ ಚರ್ಚೆ ನಡೆದರೆ ತಪ್ಪಿಲ್ಲ. ಏಕಮುಖವಾಗಿ ಎಡಪಕ್ಷಗಳನ್ನು ಅದರಲ್ಲೂ ಮುಂಚೂಣಿಯಲ್ಲಿರುವ ಸಿಪಿಐ(ಎಂ)ನ್ನು ದೂಷಿಸುತ್ತಿದ್ದಾರೆ. ಅವಹೇಳನ ಮಾಡುತ್ತಿದ್ದಾರೆ. ಕೆಲವರಂತೂ 'ಚೀನಾ ಏಜೆಂಟ್'ರೆಂದೂ, ಇನ್ನು ಕೆಲವರು 'ಎಡಪಕ್ಷಗಳು ಯಾವಾಗ ದೇಶದ ಹಿತಕ್ಕೆ ಬದ್ಧರಾಗಿದ್ದರು' ಎಂದೂ ಜರಿದರು. ದೇಶದ ಹಲವು ಟಿ.ವಿ. ಚಾನಲ್‌ಗಳು ಇದು ಮನಮೋಹನಸಿಂಗ್ ಮತ್ತು ಪ್ರಕಾಶ್ ಕಾರಟ್ ಅವರ ನಡುವಿನ ಜಗಳ ಎಂಬಂತೆ ಬಿಂಬಿಸಿದವು. ಇನ್ನು ಕೆಲವರು ಕೇಂದ್ರ ಸಮಿತಿ ಸಭೆಯಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಯಾಕೆ ಭಾಗವಹಿಸಲಿಲ್ಲ ಎಂಬ ಅನುಮಾನವನ್ನು ಪ್ರಕಟಿಸಿದರು.

ದೆಹಲಿಯ ಹಿಂದೂಸ್ತಾನ ಪತ್ರಿಕೆಗೆ ಬರೆದ ಲೇಖನದಲ್ಲಿ ಸಿಎನ್ಎನ್-ಐಬಿಎನ್ ನ ರಾಜದೀಪ್ ಸರದೇಸಾಯಿ 'ಎಡಪಕ್ಷಗಳು ಕೆಟ್ಟುಹೋದ ಮಗುವಿನಂತೆ ವರ್ತಿಸುತ್ತಿದ್ದಾರೆ' ಎಂದು ಜರಿದರೆ, ಎನ್‌ಡಿಟಿವಿಯ ಬರ್ಕಾದತ್, ಇರಾಕ್ ಮತ್ತು ಅಫಘಾನಿಸ್ತಾನದ ಮೇಲೆ ಅಮೇರಿಕಾ ನಡೆಸಿರುವ ಧಾಳಿ ಸರಿಯಲ್ಲ ಎಂದು ಹೇಳಿದರೂ 'ಭಾರತದ ಭವಿಷ್ಯ ಅಮೇರಿಕಾದೊಂದಿಗೆ ಹೆಣೆದುಕೊಂಡಿದೆ' ಎಂದು ಹೇಳಿದರು. ಆದರೆ ಯಾರೊಬ್ಬರೂ ಅಣು ಒಪ್ಪಂದ ಯಾಕೆ ಬೇಕು ಎಂಬುದಕ್ಕೆ ಸರಿಯಾದ ಮಾಹಿತಿ ಕೊಡಲಿಲ್ಲ. 'ನಮಗೆ ವಿದ್ಯುತ್ ಬೇಕು ಅದಕ್ಕಾಗಿ ಅಣು ಒಪ್ಪಂದ ಸರಿ' ಎಂದು ಕೆಲವರು ವಾದಿಸಿದ್ದಾರೆ. ಆದರೆ ದೇಶದ ಸಾರ್ವಭೌಮತೆ ಯನ್ನು ಒತ್ತೆ ಇಡುವ ದುಬಾರಿ ಅಣು ವಿದ್ಯುತ್ ಉತ್ಪಾದನೆ 2020 ಹೊತ್ತಿನಲ್ಲಿ ಈಗಿನ ಶೇ.3 ರಿಂದ ಶೇ 7ಕ್ಕೆ ಮಾತ್ರ ಹೆಚ್ಚುತ್ತದೆ ಎಂಬುದನ್ನು ಅವರು ಮನಗಾಣಲಿಲ್ಲ.

ಕರ್ನಾಟಕದ ಮಾಧ್ಯಮಗಳು

ಕರ್ನಾಟಕ ಮಾಧ್ಯಮಗಳ ನಿಲುವುಗಳು ಅಖಿಲ ಭಾರತ ಮಾಧ್ಯಮಗಳ ನಿಲುವಿಗೆ ಭಿನ್ನವಾಗಿಲ್ಲ. ಹಿಂದೆ ಕೇಸರಿ ಪಡೆಗಳ ಹಿಡಿತದಲ್ಲಿದ್ದು, ಈಗ ಸಂಪಾದಕತ್ವ ಕೇಸರಿ ಹಾಗೂ ಆಡಳಿತ ಬಹು ರಾಷ್ಟ್ರೀಯ ಕಂಪನಿಯ ಹಿಡಿತದಲ್ಲಿರುವ ವಿಜಯ ಕರ್ನಾಟಕವಂತೂ ಎಡಪಕ್ಷಗಳನ್ನು ದೂಷಿಸುವ ಲೇಖನಗಳ ಮಾಲೆಗಳನ್ನೇ ಹರಿಯಬಿಟ್ಟಿದೆ. ಆಗಸ್ಟ್ 20 ರ ಸಂಚಿಕೆಯಲ್ಲಿ ಅಶೋಕ ರಾಮ್ ಎಂಬ ಅಪರಿಚಿತ ಲೇಖಕರು 'ಕೇಂದ್ರ ಸರ್ಕಾರ ನಿಯಂತ್ರಿಸುವ (ಎಡಪಕ್ಷಗಳು) ತನ್ನ ಶಕ್ತಿಯನ್ನು ಅಮೇರಿಕಾಕ್ಕೂ ಪರಿಚಯಿಸಲು ಹೋಗಿ ಅದು ಈಗ ಅಪಮಾನ ಅನುಭವಿಸುವ ಹಂತ ತಲುಪಿದೆ' ಎಂದು ಹೇಳಿದ್ದಲ್ಲದೆ, 'ಒಂದಿಷ್ಟು ಸದ್ದು ಮಾಡಿದ ತೃಪ್ತಿಯಾದರೂ ಅದಕ್ಕೆ ಈಗ ಉಳಿದಿದೆ' ಎಂದು ತೀರ್ಮಾನಿಸಿದ್ದಾರೆ. ಆಗಸ್ಟ್ 21 ರ ಸಂಚಿಕೆಯಲ್ಲಿ ಲೋಕೇಶ್ ಕಾಯರ್ಗ ಎಡಪಕ್ಷಗಳ ವಿರೋಧ 'ಗೋಸುಂಬೆತನ' ಎಂದು ವರ್ಣಿಸಿದ್ದಾರೆ. ಅವರು ಮುಂದುವರಿದು, 'ಚೀನಾದಂತಹ ಶಕ್ತಿ ರಾಷ್ಟ್ರವನ್ನು ಎದುರಿಸಲು, ಜಾಗತಿಕ ಭಯೋತ್ಪಾದನೆಯನ್ನು ಹತ್ತಿಕ್ಕಲು ಅಮೇರಿಕಾದಂತಹ ರಾಷ್ಟ್ರದ ಮೈತ್ರಿ ಅಗತ್ಯ' ಎಂದು ಹೇಳಿದ್ದಾರೆ.

ಜಾಗತಿಕ ಭಯೋತ್ಪಾದನೆಯನ್ನು ಹುಟ್ಟು ಹಾಕಿದವರು ಯಾರು? ಅದನ್ನು ಪೋಷಿಸುತ್ತಿರುವವರು ಯಾರು ಮತ್ತು ಯಾಕಾಗಿ? ಎಂಬ ಕನಿಷ್ಟ ತಿಳುವಳಿಕೆಯನ್ನು ಮರೆತಿದ್ದಾರೆ.

ಸೆಪ್ಟೆಂಬರ್ 2 ರ ಪ್ರಜಾವಾಣಿ ಪತ್ರಿಕೆಯಲ್ಲಿ 'ನಿಮ್ಮ ಅನಿಸಿಕೆಗಳು' ಕಲಂನಲ್ಲಿ ಏಳು ವಾಚಕರ ಪತ್ರಗಳನ್ನು ಪ್ರಕಟಿಸಿತ್ತು. ಪತ್ರಗಳನ್ನು ಆಹ್ವಾನಿಸಿದ ತಲೆ ಬರಹವೇ 'ಅಣು ಒಪ್ಪಂದ ಎಡಪಕ್ಷಗಳ ಒತ್ತಡ ತಂತ್ರ ಸಮರ್ಥನೀಯವೇ' ಎಂದು ಹೇಳುವ ಮೂಲಕ ಎಡಪಕ್ಷಗಳ ವಿರುದ್ಧ ಜನಾಭಿಪ್ರಾಯವನ್ನು ಸಂಗ್ರಹಿಸುವ ಹುನ್ನಾರವಾಗಿತ್ತು. ಆದರೂ ಈ ಏಳು ಪತ್ರಗಳಲ್ಲಿ ಮೂರು ಮಾತ್ರ ಎಡಪಕ್ಷಗಳ ವಿರುದ್ಧವಾಗಿ ಬರೆದಿದ್ದವು. ಎರಡು ಪತ್ರಗಳು ಪೂರ್ಣವಾಗಿ ಎಡಪಕ್ಷಗಳನ್ನು ಬೆಂಬಲಿಸಿದ್ದು, ಇನ್ನೆರೆಡು ಪತ್ರಗಳು ಎಡಪಕ್ಷಗಳನ್ನು ದೂಷಿಸದೆ, ಒಳಿತು-ಕೆಡಕುಗಳ ಬಗ್ಗೆ ಚರ್ಚೆ, ವಿಮರ್ಶೆ ಅಗತ್ಯ ಎಂದು ಬಣ್ಣಿಸಿದ್ದವು. ವಾಸ್ತವಾಂಶ ಹೀಗಿದ್ದರೂ ಎಡಪಕ್ಷಗಳಿಗೆ ವಿರುದ್ಧವಾಗಿ ಬರೆದ ಪತ್ರವನ್ನು 'ಮೆಚ್ಚುಗೆ ಪಡೆದ ಪತ್ರ' ಎಂದು ಪ್ರಕಟಿಸಿರುವುದು ಮಾತ್ರವಲ್ಲದೆ, ಬಹುತೇಕರು ಇದು ಎಡಪಕ್ಷಗಳ ಕ್ಯಾತೆ ತೆಗೆಯುವ ಗುಣ ಮಾತ್ರ, ಅವರು ಯಾವಾಗ ದೇಶದ ಹಿತಕ್ಕೆ ಬದ್ಧರಾಗಿದ್ದರು; ಎಂದು ವ್ಯಂಗ್ಯವಾಡಿದ್ದಾರೆ ಎಂದು ಜರೆದು ಬರೆದಿರುತ್ತಾರೆ.



ಬೇರೆ ಬೇರೆ ಪತ್ರಿಕೆಗಳಿಗೆ ಬರೆದ ವಾಚಕರ ಪತ್ರಗಳನ್ನು ಗಮನಿಸಿದರೆ, ರಂಗಕರ್ಮಿ ಪ್ರಸನ್ನ ಸೇರಿದಂತೆ ಬಹುತೇಕ ನಾಗರೀಕರು ದೇಶದ ಸಾರ್ವಭೌಮತೆಯನ್ನು ಎತ್ತಿಹಿಡಿಯುವ ಎಡಪಕ್ಷಗಳ ನಿಲುಮೆಯನ್ನು ಸಮರ್ಥಿಸಿದ್ದಾರೆ ಎಂಬುದು ಗಮನಾರ್ಹ ಅಂಶ.

ಆಯಾ ದೇಶದ ಜನತೋರಿಸಿದ ಪ್ರತಿಭಟನೆ, ಪ್ರಶ್ನೆಗಳಿಂದಾಗಿ, ಅಮೇರಿಕಾದ ಅತ್ಯಂತ ಆಪ್ತಮಿತ್ರರಾದ ಬ್ರಿಟನ್ ಪ್ರಧಾನಿ ಟೋನಿಬ್ಲೇರ್, ಜಪಾನ್ ಪ್ರಧಾನಿ ಶಿಂಚೊ ಅಬೆ ಈಗಾಗಲೇ ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದು, ಆಸ್ಟ್ರಿಯಾದ ಪ್ರಧಾನಿ ಜಾನ್ ಹೊವಾರ್ಡ್ ರಾಜೀನಾಮೆ ಸಲ್ಲಿಸುವ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ.

ಭಾರತದ ಜನರಲ್ಲೂ ಪ್ರಜ್ಞಾಪೂರ್ವಕ ಪ್ರತಿಭಟನೆಗಳು ಹೆಚ್ಚಾಗುತ್ತಲೇ ಭಾರತದಲ್ಲಿರುವ ಅಮೇರಿಕಾದ ಮಿತ್ರರು ತಾವು ಯಾವ ಕಡೆ ಇದ್ದೇವೆ ಎಂದು ಹೇಳಬೇಕಾಗುತ್ತದೆ. ಎಡಪಕ್ಷಗಳು ಎತ್ತಿದ ಪ್ರಶ್ನೆ ಸರಿಯೇ? ಅಥವಾ ಮಾಧ್ಯಮದ ಕೆಲವು ಮಿತ್ರರು ಮಾಡುತ್ತಿರುವ ಅಪಪ್ರಚಾರ ಸರಿಯೇ ಎಂಬುದನ್ನು ಮುಂದಿನ ದಿನಗಳು ನಿರ್ಧರಿಸಲಿವೆ.

ಸಾಮಾನ್ಯ ಜ್ಞಾನಕ್ಕೊಂದು ಕಿರು ಪರೀಕ್ಷೆ

ಆರ್.ಕೆ.

ಬಿಟ್ಟ ಪದ ತುಂಬಿರಿ

1. ಡಾ: ಬಿ.ಆರ್. ಅಂಬೇಡ್ಕರ್‌ರವರ ಕುರಿತು 'ಸುಳ್ಳು ದೇವರನ್ನು ಪೂಜಿಸುತ್ತಾ' (Worshiping false god) ಎಂಬ ಪುಸ್ತಕ ಬರೆದ ಬಿಜೆಪಿಯ ರಾಷ್ಟ್ರೀಯ ನಾಯಕ, ಪತ್ರಕರ್ತ ________
   (ಅರುಣ್ ಜೇಟ್ಲಿ, ಅರುಣ್‌ಶೌರಿ)
2. 1999ರ ಲೋಕಸಭಾ ಚುನಾವಣೆಗೆ ಮುಂಚೆ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರ ________ಗಳಿಗೆ ಸುಮಾರು 6.5 ಸಾವಿರ ಕೋಟಿ ರೂಪಾಯಿಗಳ ಬಾಕಿ ಮನ್ನಾ ಮಾಡಿತು.
   (ರೈತರಿಗೆ, ಮೊಬೈಲ್ ಕಂಪನಿಗಳಿಗೆ, ಮಠ ಮಂದಿರಕ್ಕೆ)
3. ಅಮೇರಿಕಾಕ್ಕೆ ಭೇಟಿ ನೀಡಿದಾಗ ವಿಮಾನ ನಿಲ್ದಾಣದಲ್ಲಿ ಎರಡು ಬಾರಿ ಬಟ್ಟೆ ಬಿಚ್ಚಿಸಿ ತಪಾಸಣೆ ನಡೆಸಿದರೂ ಆಗ ತುಟಿ ಪಿಟಕ್ಕೆನ್ನದ ಎನ್‌ಡಿಎ ರಕ್ಷಣಾ ಸಚಿವ ________
   (ಜಸ್ವಂತ್‌ಸಿಂಗ್, ಯಶವಂತ್‌ಸಿನ್ಹಾ, ಜಾರ್ಜ್ ಫರ್ನಾಂಡಿಸ್)
4. 2004ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಕೂಟಕ್ಕೆ 330 ರಿಂದ 340 ರವರೆಗೆ ಸ್ಥಾನಗಳು ದೊರೆಯುತ್ತವೆಂದು 'ಪ್ರಜಾವಾಣಿ' ಪತ್ರಿಕೆಯ ಅಂಕಣದಲ್ಲಿ ಪ್ರತಿದಿನವೂ ಅಂಕಿ ಸಂಖ್ಯೆ ಬರೆದು ಬರೆದು ದಣಿದ ಅಂಕಣಕಾರ ________
   (ಅರುಣ್ ನೆಹರು, ಸಿಂಪ್ಲಿ, ಪ್ರತಾಪಸಿಂಹ, ಚಕ್ರವರ್ತಿ ಸೂಲಿಬೆಲೆ)

★

ಸರಿ-ತಪ್ಪು ಗುರುತಿಸಿ

ಕೆಳಕಂಡ ಹೇಳಿಕೆಗಳಲ್ಲಿ ಸರಿ ಯಾವುದು, ತಪ್ಪು ಯಾವುದು ಗುರುತಿಸಿ

1. ಕಾಂಗ್ರೆಸ್ ಪಕ್ಷ 50 ವರ್ಷಗಳಲ್ಲಿ ಮಾಡಿದ ಭ್ರಷ್ಟಾಚಾರವನ್ನು ಬಿಜೆಪಿ ನೇತೃತ್ವದ ಎನ್‌ಡಿಎ ಯು ಅಧಿಕಾರದಲ್ಲಿದ್ದ 6 ವರ್ಷಗಳಲ್ಲೇ ಮೀರಿಸುವಲ್ಲಿ ಯಶಸ್ವಿಯಾಯಿತು.
2. ಸ್ವಾತಂತ್ರ್ಯಾನಂತರ ಕಾಂಗ್ರೆಸ್‌ನ್ನು ಮಣಿಸಲು ಜನತೆ 30 ವರ್ಷ ಸೆಣೆಸಬೇಕಾದರೆ, ಅಧಿಕಾರಕ್ಕೆ ಬಂದ 6 ವರ್ಷಗಳಲ್ಲಿ ಬಿಜೆಪಿ ನೆಲ ಕಚ್ಚಿತು.
3. 1999 ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ 'ಕಾರ್ಗಿಲ್' ಯುದ್ಧೋನ್ಮಾದ ಸೃಷ್ಟಿಸದೇ ಹೋಗಿದ್ದರೆ ಬಹುಶಃ ಬಿಜೆಪಿ ಮತ್ತೆ ಗೆಲ್ಲುತ್ತಿರಲಿಲ್ಲ.
4. 2004ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಕೂಟವು ಗೆಲ್ಲುತ್ತದೆ ಎಂದು ಟಿ.ವಿ. ಪತ್ರಿಕಾ ಮಾಧ್ಯಮಗಳು ಬೊಬ್ಬಿಟ್ಟ ಸ್ಥಾನಗಳಲ್ಲಿ ಅರ್ಧದಷ್ಟನ್ನು ಗೆಲ್ಲಲಾಗಲಿಲ್ಲ.
5. ಅಲ್ಪಸಂಖ್ಯಾತರ ತುಷ್ಟೀಕರಣ, ಮುಸ್ಲಿಂ ಓಲೈಕೆ ಎಂದು ಸದಾ ಬೊಬ್ಬಿಡುವ ಪಕ್ಷದ ಘನ ಪ್ರಧಾನಿಗಳೇ ಚುನಾವಣೆ ಕಾಲದಲ್ಲಿ ಸ್ವಘೋಷಿತ ಮುಸ್ಲಿಂ ನಾಯಕರಿಂದ ತಲೆಗೆ 'ಹಸಿರು ರೂಮಾಲು' ಸುತ್ತಿಸಿ ಕೊಂಡು ಟಿ.ವಿ. ಪತ್ರಿಕೆಗಳಿಗೆ ಪೋಸು ಕೊಟ್ಟರೂ ಚುನಾವಣೆಯಲ್ಲಿ ಮಣ್ಣು ಮುಕ್ಕಬೇಕಾಯಿತು.
6. ಹಸಿರು ರುಮಾಲು ಸುತ್ತಿಸಿಕೊಂಡವರೊಂದಿಗೆ ಸ್ಪರ್ಧೆಗೆ ಬಿದ್ದು 'ಜಿನ್ನಾರವರು ಜಾತ್ಯಾತೀತ' ಎಂದು ಘೋಷಣೆ ಹೊರಡಿಸಿ ಪಕ್ಷದ ಅಧ್ಯಕ್ಷ ಪದವಿ ಕಳೆದುಕೊಂಡ ಬಿಜೆಪಿ ಧುರೀಣರು ಈಗ ಪ್ರಧಾನಿ ಸ್ಥಾನಕ್ಕೆ ತಾವು ಆಕಾಂಕ್ಷಿ ಅಲ್ಲವೆಂದು ಘೋಷಿಸಿದ್ದಾರೆ.
7. ಆರೆಸ್ಸೆಸ್ ಶಾಖೆಗಳಲ್ಲಿ ಪ್ರತಿದಿನವೂ ದಲಿತರ ಕಷ್ಟಗಳು ಬಡವರ ತೊಂದರೆಗಳ ಬಗೆಗೆ ಚರ್ಚಿಸಲಾಗುತ್ತದೆ.

○

ಶರತ್‌ಚಂದ್ರ

ಚೀನಾ ಕೃಷಿಯಲ್ಲೂ ಭಾರತಕ್ಕಿಂತ ಮುಂದೆ

ಚೀನಾ ಕೈಗಾರಿಕಾ ಉತ್ಪಾದನೆ ಮಾತ್ರವಲ್ಲ, ಕೃಷಿ ಉತ್ಪಾದನೆಯಲ್ಲೂ ದಾಪುಗಾಲಿಡುತ್ತಾ ಭಾರತಕ್ಕಿಂತ ಮುಂದೆ ಹೋಗಿದೆ. ಭಾರತದ ಒಟ್ಟಾರೆ ಕೃಷಿ ಕ್ಷೇತ್ರದ ಬೆಳವಣಿಗೆ ದರ ಈ ವರ್ಷ ಶೇ. 2.5 ರಷ್ಟಿದ್ದರೆ, ಚೀನಾ ಕಳೆದ 15 ವರ್ಷಗಳಿಂದ ಶೇ.4-5 ದರದಲ್ಲಿ ಬೆಳೆಯುತ್ತಿದೆ. 2004 ರಲ್ಲಿ ಭಾರತ ಸುಮಾರು 4.2 ಕೋಟಿ ಹೆಕ್ಟೇರ್ ಜಮೀನಿನಲ್ಲಿ ಸುಮಾರು 12.4 ಕೋಟಿ ಟನ್ ಅಕ್ಕಿ ಬೆಳೆದರೆ, ಚೀನಾ 2.8 ಕೋಟಿ ಹೆಕ್ಟೇರ್ ಜಮೀನಿನಲ್ಲಿ ಸುಮಾರು 18.6 ಕೋಟಿ ಟನ್ ಅಕ್ಕಿ ಬೆಳೆದಿದೆ. ಅಂದರೆ ಒಟ್ಟು ಉತ್ಪಾದನೆ ಮತ್ತು ಉತ್ಪಾದಕತೆ ಎರಡರಲ್ಲೂ ಬಹಳ ಮುಂದಿದೆ. ಗೋಧಿಯ ಉತ್ಪಾದನೆಯಲ್ಲೂ ಇದೇ ಕಥೆ. ಭಾರತ ಪ್ರತಿ ಹೆಕ್ಟೇರ್ ಗೆ 2688 ಕೆಜಿ ಗೋದಿ ಬೆಳೆದರೆ, ಚೀನಾ 4155 ಕೆಜಿ ಬೆಳೆಯುತ್ತದೆ. ಹಣ್ಣು-ತರಕಾರಿಗಳ ಉತ್ಪಾದನೆಯಲ್ಲೂ ಚೀನಾ ಉತ್ತಮ ಪ್ರಗತಿ ಸಾಧಿಸಿದೆ. 1980 ರಲ್ಲಿ ಭಾರತ 5.5 ಕೋಟಿ ಟನ್ ಹಣ್ಣು-ತರಕಾರಿ ಉತ್ಪಾದಿಸಿದರೆ, ಚೀನಾ ಉತ್ಪಾದನೆ 6.5 ಕೋಟಿ ಟನ್ ಇತ್ತು. 2003 ರಷ್ಟು ಹೊತ್ತಿಗೆ ಚೀನಾ 45 ಕೋಟಿ ಟನ್ ಗೆ ಏರಿಸಿದರೆ, ಭಾರತ 13.5 ಕೋಟಿ ಟನ್ ಉತ್ಪಾದಿಸಿ ಹಿಂದಿದೆ. ಚೀನಾದ ಕೃಷಿ ಕ್ಷೇತ್ರ ಹೆಚ್ಚು ವೈವಿಧ್ಯಮಯವಾಗಿದೆ. 2005 ರಲ್ಲಿ ಚೀನಾದ ಹಾಲು-ಹೈನು ಮತ್ತು ಮೀನುಗಾರಿಕೆ ಒಟ್ಟು ಕೃಷಿಯ ಶೇ. 45 ರಷ್ಟಿತ್ತು. ಭಾರತದ್ದು ಶೇ.30 ರಷ್ಟಿತ್ತು.

ಕೃಷಿ ಯೋಗ್ಯ ಜಮೀನಿನ ವಿಸ್ತಾರ (ಚೀನಾ - 16.1, ಭಾರತ - 13.0 ಕೋಟಿ ಹೆಕ್ಟೇರ್), ನೀರಾವರಿ ಜಮೀನಿನ ವಿಸ್ತಾರ (ಚೀನಾ - 5.6, ಭಾರತ - 5.5 ಕೋಟಿ ಹೆಕ್ಟೇರ್), ಸರಾಸರಿ ಹಿಡುವಳಿ ಗಾತ್ರ (ಚೀನಾ - 1.4, ಭಾರತ - 0.4 ಹೆಕ್ಟೇರ್) ಕೃಷಿ ಯಾಂತ್ರೀಕರಣ (ಚೀನಾ - 15.7, ಭಾರತ - 7 ಟ್ರಾಕ್ಟರುಗಳು ಪ್ರತಿ ಸಾವಿರ ಹೆಕ್ಟೇರ್‌ಗೆ) - ಮುಂತಾದ ಪ್ರಮುಖ ಕೃಷಿ ಸಂಬಂಧಿತ ಸಂಪನ್ಮೂಲಗಳಲ್ಲಿ ಬಾರೀ ವ್ಯತ್ಯಾಸವಿಲ್ಲದಿದ್ದರೂ ಕೃಷಿ ಉತ್ಪಾದನೆ ಮತ್ತು ಬೆಳವಣಿಗೆಯಲ್ಲಿ ಇಷ್ಟು ವ್ಯತ್ಯಾಸ ಏಕೆ ? ಇದಕ್ಕೆ ಕಾರಣವಾದ ಮುಖ್ಯ ಅಂಶಗಳೆಂದರೆ - ಮುಖ್ಯವಾಗಿ ಕೃಷಿಯಲ್ಲಿ ಹೂಡಿಕೆ (ಗ್ರಾಮೀಣ ಮೂಲ ಸೌಕರ್ಯಗಳು, ಸಂಶೋಧನೆ) ಮತ್ತು ಉತ್ಪಾದನೆ-ಪರ ಕೃಷಿ ನೀತಿ. ಕೃಷಿ ಸಂಶೋಧನೆಯಲ್ಲಿ ಹೂಡಿಕೆ ಕಳೆದ ಹತ್ತು ವರ್ಷದಲ್ಲಿ ಮೂರು ಪಟ್ಟು ಆಗಿದೆ. 2005 ರಲ್ಲಿ 4 ಶತ ಕೋಟಿ ರೆಂಬಿ (ಚೀನಾದ ನಾಣ್ಯ) ಯಿಂದ 12 ಶತ ಕೋಟಿ ರೆಂಬಿ (ಸುಮಾರು 1.5 ಶತಕೋಟಿ ಡಾಲರ್) ಗೆ ಏರಿದೆ. 2006 ರಲ್ಲಿ ಚೀನಾದ ಒಟ್ಟು ಕೃಷಿ ಹೂಡಿಕೆ 340 ಶತ ಕೋಟಿ ರೆಂಬಿ (ಸುಮಾರು 45 ಶತಕೋಟಿ ಡಾಲರ್) ರಷ್ಟಿತ್ತು. 2006 ಒಂದೇ ವರ್ಷದಲ್ಲಿ ಚೀನಾ 151 ಶತ ಕೋಟಿ ರೆಂಬಿ (ಸುಮಾರು 20 ಶತ ಕೋಟಿ ಡಾಲರ್) ನಷ್ಟು ಗ್ರಾಮೀಣ ಮೂಲಸೌಕರ್ಯಗಳಲ್ಲಿ ತೊಡಗಿಸಿತು. ಸುಮಾರು 325 ಸಾವಿರ ಕಿ.ಮಿ ನಷ್ಟು ಗ್ರಾಮೀಣ ರಸ್ತೆಗಳನ್ನು ಮಾಡಲಾಯಿತು. ಈ ಎಲ್ಲಾ ಬೆಳವಣಿಗೆ ಮೂಲ ಆಧಾರವಾಗಿರುವ ಅಂಶ ಎಂದರೆ ಚೀನಾ ಸಾಕಷ್ಟು ಹಿಂದೆಯೇ ಕೈಗೊಂಡ ಕ್ರಾಂತಿಕಾರಕ ಭೂಸುಧಾರಣೆ. ಚೀನಾ ಜಾಗತೀಕರಣ ಅಳವಡಿಸಿಕೊಂಡಿದೆ ಎಂದು ಬೊಬ್ಬಿಡುವ ಜಾಗತೀಕರಣವಾದಿಗಳು ಇದನ್ನು ಮರೆತೆ ಮಾತನಾಡುವುದು ಮಾತ್ರ ವಿಚಿತ್ರವಾಗಿದೆ. ○



ಕುಂದಾಪುರ ಪುರಸಭೆ

ಪುಟ 9 ರಿಂದ

ತೋಡು ಅಭಿವೃದ್ಧಿ, ಪ್ರಮುಖ ಜಂಕ್ಷನ್‌ಗಳ ಅಭಿವೃದ್ಧಿ ಟೆಂಡರ್ ಆಗಿದ್ದರೂ ಇಂದಿಗೂ ಕಾಮಗಾರಿ ಪೂರ್ಣಗೊಳ್ಳದಿದ್ದುದ್ದು ಆಡಳಿತ ವೈಫಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಹಿಂದಿನ ಮೈತ್ರಿಕೂಟದ ಆಡಳಿತ ಅವಧಿಯಲ್ಲಿ ನಿರ್ಮಿಸಲ್ಪಟ್ಟ ಹೊಸ ಬಸ್‌ನಿಲ್ದಾಣದ ಕಾಂಕ್ರೀಟಿಕರಣ ಹಾಗೂ ಕೆಲವು ರಸ್ತೆಗಳ ಡಾಮರೀಕರಣವನ್ನು ತಾನು ಅಧಿಕಾರಕ್ಕೆ ಬಂದ ತಕ್ಷಣವೇ ಉದ್ಘಾಟನೆಗೊಳಿಸಿ ಫೋಟೋವನ್ನು ಪತ್ರಿಕೆಯಲ್ಲಿ ಮುದ್ರಿಸಿಕೊಳ್ಳಲು ಆಡಳಿತ ಪಕ್ಷ ಮರೆಯಲಿಲ್ಲ. ಈ ಐದು ವರ್ಷಗಳ ಕಾಂಗ್ರೆಸ್ ಪಕ್ಷದ ಆಡಳಿತ ಅವಧಿಯಲ್ಲಿ ವ್ಯಾಪಕ ಭ್ರಷ್ಟಾಚಾರಕ್ಕೆ ಅವಕಾಶ ನೀಡಲಾಯಿತು. ಕಳಪೆ ಕಾಮಗಾರಿಗಳಿಗೆ ಕುಂದಾಪುರ ಸಾಕ್ಷಿಯಾಯಿತು. ಪುರಸಭೆಯೊಳಗೆ ಯಾವುದೇ ಕೆಲಸಗಳಿಗೂ ಲಂಚ ಎನ್ನುವ ಪರಿಸ್ಥಿತಿಯಿಂದಾಗಿ ಕುಂದಾಪುರ ಜನತೆ ಬೇಸತ್ತು ಹೋಗುವಂತಾಯಿತು.

ದಿಕ್ಕುತಪ್ಪಿಸಿ ಹಿಡಿದ ಅಧಿಕಾರ

ಆದರೆ 2001ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಮೈತ್ರಿಕೂಟದ ಬೋರ್ಡಿನ ಮೇಲೆ ಇಲ್ಲಸಲ್ಲದ ಅಪಪ್ರಚಾರ ನಡೆಸಿತು. ಹೆಂಡ ಮತ್ತು ಹಣದ ಹೊಳೆ ಹರಿಸಿತು. ಜಾತಿ ರಾಜಕೀಯ ಮಾಡುವುದರ ಮುಖಾಂತರ ಹಾಗೂ ಸುಳ್ಳು ಆಶ್ವಾಸನೆಗಳನ್ನು ನೀಡಿ ಜನತೆಯನ್ನು ದಿಕ್ಕು ತಪ್ಪಿಸಿ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಯಿತು.

ಈ ಅವಧಿಯಲ್ಲಿ ಸಿ.ಪಿ.ಐ. (ಎಂ) ಜವಾಬ್ದಾರಿಯುತ ಪ್ರತಿಪಕ್ಷದ ಸ್ಥಾನವನ್ನು ನಿಭಾಯಿಸಿತು. ತನ್ನ 6 ಮಂದಿ ಸದಸ್ಯ



ನದಿ ತೀರದಲ್ಲಿ ತ್ಯಾಜ್ಯ ವಿಲೇವಾರಿ ಹೊಣೆಗೇಡಿತನಕ್ಕೊಂದು ಸಾಕ್ಷಿ

ಬಲದೊಂದಿಗೆ ಬೋರ್ಡ್‌ನ ಒಳಗೂ ಹಾಗೂ ಹೊರಗೂ ಜನಪರ ಹೋರಾಟಗಳನ್ನು ಸಂಘಟಿಸಿತು. ರಾಜ್ಯ ಸರಕಾರದ ಆದೇಶದ ಮೇರೆಗೆ ಪುರಸಭೆ ವ್ಯಾಪ್ತಿಯಲ್ಲಿ ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ,ಜ್ಯಾರಿಗೊಳಿಸಲು ಬೋರ್ಡು ಮುಂದಾದಾಗ, ಕುಂದಾಪುರ ಪ್ರಮುಖ ನಾಗರಿಕರನ್ನೊಳಗೊಂಡ ಹೋರಾಟ ಸಮಿತಿಯನ್ನು ರಚಿಸಿ ವ್ಯಾಪಕ ಪ್ರಚಾರದೊಂದಿಗೆ ಜನತೆಯನ್ನು ಹೊಸ ತೆರಿಗೆ ಪದ್ಧತಿಯ ವಿರುದ್ಧ ಹೋರಾಟಕ್ಕಿಳಿಸಿತು. ಹೊಸ ತೆರಿಗೆ ಪದ್ದತಿ ಹೇಗೆ ಜನತೆಯ ಮೇಲೆ ಹೊರೆಯಾಗಲಿದೆ ಎನ್ನುವುದನ್ನು ಅಂಕೆ ಸಂಖ್ಯೆಗಳನ್ನೊಳಗೊಂಡ ಕರಪತ್ರವನ್ನು ಪ್ರತಿ ಮನೆಗೂ ತಲುಪಿಸಲಾಯಿತು. ಇದರ ಪರಿಣಾಮವಾಗಿ ಸ್ವಯಂ ಘೋಷಿತ ಆಸ್ತಿ ತೆರಿಗೆ ಬೋರ್ಡ್‌ಗೆ ಜ್ಯಾರಿ ಮಾಡಲು ಸಾಧ್ಯ ಆಗಲಿಲ್ಲ. ಆದರೆ 2 ವರ್ಷಗಳ ನಂತರ ಪುನಃ ಕಾಂಗ್ರೆಸ್ ಪಕ್ಷ ಅದನ್ನು ಒತ್ತಡ ಪೂರಕವಾಗಿ ಜನತೆಯ ಮೇಲೆ ಹೇರಿತು.

ಜನಹಿತಕ್ಕೆ ಹೋರಾಟ

ಇನ್ನು ಎ.ಡಿ.ಬಿ ಯೋಜನೆಯ ಜ್ಯಾರಿಯ ವಿಕೃತಿ ಹಾಗೂ ನ್ಯೂನ್ಯತೆಯನ್ನು ವಿರೋಧಿಸಿ ಸಿ.ಪಿ.ಐ. (ಎಂ) ಪಕ್ಷ ಪುರಸಭೆಯೊಳಗೆ ವ್ಯಾಪಕ ಹೋರಾಟ ಸಂಘಟಿಸಿತು. ಪ್ರತಿಯೊಂದು ಕಾಮಗಾರಿಗಳ ಅನುಷ್ಠಾನದಲ್ಲೂ ಆದ ಕೊರತೆಗಳನ್ನು ಜನತೆಯ ಮುಂದೆ ಎತ್ತಿ ಹಿಡಿಯಲಾಯಿತು. ಈ ಹಿಂದೆ ಯೋಜನೆಯಲ್ಲಿದ್ದ ಕೋಡಿ ಬ್ರಿಡ್ಜನ ಬಗ್ಗೆಯೂ ಪಕ್ಷವು ನಿರಂತರವಾಗಿ ಪುರಸಭೆಯ ಮೇಲೆ ಒತ್ತಡ ಹೇರಿತು. ಕುಡಿಯುವ ನೀರಿನ ಮುಂಗಡ ಹಣವನ್ನು ರೂ. 5000/-ಕ್ಕೆ ಪುರಸಭೆಯ ಬೋರ್ಡ್ ನಿಗದಿಪಡಿಸುವ ಸಂದರ್ಭದಲ್ಲಿ ಪಕ್ಷ ತೀವ್ರ ಹೋರಾಟ ನೀಡಿ ಅದನ್ನು ರೂ. 2000/- ಕ್ಕೆ ಇಳಿಸುವಲ್ಲಿ ಯಶಸ್ವಿಯಾಯಿತು. ಆದರೂ ತಿಂಗಳ ಬಾಡಿಗೆ ದರದ ವಿಷಯದಲ್ಲಿ ಹೋರಾಟ ನಡೆಸಿದರೂ ದರ ಇಳಿಕೆ ಸಾಧ್ಯ ಆಗದೆ ದುಬಾರಿ ದರ ಇನ್ನು ಚಾಲ್ತಿಯಲ್ಲಿದೆ.

ಬಂದ ಹಣ ವಾಪಾಸು

ಹಿಂದಿನ ಮೈತ್ರಿಕೂಟದ ಆಡಳಿತದ ಸಂದರ್ಭದಲ್ಲಿ ಕೇಂದ್ರ ಸರಕಾರದ ಐ.ಡಿ.ಎಸ್.ಎಂ.ಟಿ ಯೋಜನೆಯಡಿ ಮಂಜೂರಾದ ಹಣದಲ್ಲಿ ಹೊಸ ಬಸ್‌ನಿಲ್ದಾಣದ ಬಳಿ ನಿರ್ಮಿಸಲಾದ ವಾಣಿಜ್ಯ ಕಟ್ಟಡ ನಂತರದಲ್ಲಿ ಉಳಿದ 35 ಲಕ್ಷ ರೂ. ಹಣವನ್ನು ಹಳೇ ಬಸ್‌ನಿಲ್ದಾಣದ ಬಳಿ ಯೋಜಿಸಲಾದ ವಾಣಿಜ್ಯ ಸಂಕೀರ್ಣಕ್ಕಾಗಿ ಮೀಸಲಾಗಿರಿಸಲಾಗಿತ್ತು. ಆದರೆ ಕಾಂಗ್ರೆಸ್ ಅಧಿಕಾರಕ್ಕೆ ಬಂದು ನಾಲ್ಕು ವರ್ಷಗಳಾದರೂ ಆ ಹಣವನ್ನು ಉದ್ದೇಶಿತ ಕಾಮಗಾರಿಗೆ ಬಳಸಲಾಗದೆ ಬೇಜವಾಬ್ದಾರಿ ತೋರಿದ್ದರ ಪರಿಣಾಮವಾಗಿ ಆ ಹಣ ವಾಪಾಸ್ಸು ಹೋಗಿದ್ದು ನಂತರದಲ್ಲಿ ಸಿ.ಪಿ.ಐ. (ಎಂ) ಸದಸ್ಯರ ಭಾರೀ ಪ್ರತಿಭಟನೆಯ ಪರಿಣಾಮವಾಗಿ ಮರಳಿ ಪಡೆಯುವಲ್ಲಿ ಯಶಸ್ವಿಯಾಯಿತು.

ಜಾಣ ಮೌನ

ಪಡಿತರ ಚೀಟಿಗಾಗಿ ಸಮೀಕ್ಷೆ ನಡೆಸಿದಾಗ ಆದ ತಪ್ಪುಗಳನ್ನು ಸರಿಪಡಿಸುವಂತೆ ಹಾಗೂ ಅರ್ಹ ಬಡವರಿಗೆ ಬಿ.ಪಿ.ಎಲ್. ಚೀಟಿ ವಿತರಿಸುವಂತೆ ಸಿ.ಪಿ.ಐ. (ಎಂ) ಪಕ್ಷ ಹೋರಾಟ ನಡೆಸಬೇಕಾಯಿತು. ಆದರೆ ಕಾಂಗ್ರೆಸ್, ಬಿಜೆಪಿ ಪಕ್ಷಗಳು ಈ ಬಗ್ಗೆ ಜಾಣ ಮೌನ ವಹಿಸಿದವು.

ಇದೀಗ ಚುನಾವಣೆಗೆ ದಿನ ಸಮೀಪಿಸುತ್ತಿದ್ದಂತೆ ಕುಂದಾಪುರ ಪುರಸಭೆ ಅಭಿವೃದ್ಧಿಯನ್ನು ಮೂಲ ಮಂತ್ರವಾಗಿಸಿಕೊಂಡು ಹಾಗೂ ಕೇವಲ ಲಾಭ ಬಡುಕತನ ಹಾಗೂ ಅಧಿಕಾರದ ಆಸೆಗಾಗಿ ಅಧಿಕಾರಕ್ಕೆ ಹವಣಿಸುವ ಕಾಂಗ್ರೆಸ್, ಬಿಜೆಪಿಯಿಂದ ಪುರಸಭೆಯ ಜನರನ್ನು ಮುಕ್ತಿಗೊಳಿಸಲು ಪಕ್ಷ ವ್ಯಾಪಕ ತಯಾರಿಯನ್ನು ನಡೆಸಿದೆ. 23ರಲ್ಲಿ 14 ಕ್ಷೇತ್ರದಲ್ಲಿ ತನ್ನ ಅಭ್ಯರ್ಥಿಗಳನ್ನು ಪಕ್ಷ ಈಗಾಗಲೇ ಪ್ರಕಟಿಸಿದೆ. ಈ ಹಿಂದೆ ಆಯ್ಕೆಯಾದ ಅನುಭವಿ ಸದಸಸ್ಯರೊಂದಿಗೆ ಹೊಸಮುಖಗಳು ಈ ಬಾರಿ ಪುರಸಭೆಯನ್ನು ಪ್ರವೇಶಿಸಲಿವೆ ○

ಎಲ್ಲಾ ಕ್ರಿಕೆಟ್ ಹೆಸರಿನಲ್ಲೇ....

ಕ್ರಿಕೆಟ್ ಈಗ ಕೇವಲ ಕ್ರೀಡೆಯಾಗಿ ಉಳಿದಿಲ್ಲ. ಅದರ ವ್ಯಾಪಾರೀಕರಣದ ವಿಶ್ವ ರೂಪ ಈಗ ಪ್ರಕಟವಾಗಿದೆ. ಅದೇ 20 20 ವಿಶ್ವಕಪ್ ಕ್ರಿಕೆಟ್. 20 ಓವರ್‌ಗಳ ಕ್ರಿಕೆಟ್ ಎಂದರೆ ಪ್ರತಿ ಬಾಲ್‌ಗೂ ಬೌಂಡರಿ, ಸಿಕ್ಸರ್ ಚಚ್ಚುವುದೇ ಆಟಗಾರನ ಗುರಿ. ಇದರಿಂದ ವೀಕ್ಷಕರಿಗೆ ಮನರಂಜನೆ ನೀಡುವುದೇ ಇದರ ಪರಮಧರ್ಮ.

ಇದು ಝಣ ಝಣ ಕಾಂಚಾಣದ ಮಹಿಮೆ. ಕ್ರಿಕೆಟ್ ಆಟದ ಹಿಂದಿರುವ ವ್ಯಾಪಾರದ ಗ್ರಾಫ್ ಕೂಡ ಆಕಾಶದೆತ್ತರಕ್ಕೆ ಬೆಳೆದಿದೆ. ಟಿ.ವಿ.ಯಲ್ಲಿ ನೇರಪ್ರಸಾರ, ಕೋಟ್ಯಾಂತರ ಜನರ ವೀಕ್ಷಣೆ, ಪ್ರಸಾರದ ಹಕ್ಕು ಪಡೆದವರಿಗೆ ಹಣದ ಹೊಳೆ, ಜಾಹೀರಾತಿನಿಂದ ಕಾರ್ಪೋರೇಟ್ ಜಗತ್ತು ಮಾಲಾಮಾಲ್ ಒಟ್ಟಿನಲ್ಲಿ ಇದು ಕ್ರೀಡೆಯ ಹೆಸರಿನಲ್ಲಿ ನಡೆಯುವ ಬೃಹತ್ ದಂಧೆ.


ಇಂಡಿಯನ್ ಕ್ರಿಕೆಟ್ ಲೀಗ್‌ನ ಉಗಮ:

ಕ್ರಿಕೆಟ್ ತರ ವ್ಯಾಪಾರದಲ್ಲೂ ಸ್ಪರ್ಧೆ ಸಹಜವೇ. ಇನ್ನು ಹಣದ ಹೊಳೆ ಹರಿಸುವ ಈ ವ್ಯಾಪಾರ ಅಂದರೆ ಯಾರು ತಾನೆ ಸುಮ್ಮನಿರುತ್ತಾರೆ. ಭಾರತದಲ್ಲಿ ಕ್ರಿಕೆಟ್ ಅಂದರೆ ಬಿಸಿಸಿಐನದ್ದೇ ಸರ್ವಾಧಿಕಾರ. ವಿಶ್ವದಲ್ಲೇ ಶ್ರೀಮಂತ ಕ್ರಿಕೆಟ್ ಸಂಸ್ಥೆಯಾದ ಬಿಸಿಸಿಐಗೆ ಹುಚ್ಚು ಹಣದ ಹೊಳೆ ಹರಿದರೆ ಯಾರ ಕಣ್ಣು ತಾನೆ ಕೆಂಪಾಗದು. ಪ್ರಸಾರದ ಹಕ್ಕುಗಳಿಗೆ ತಲೆಕೆಡಿಸಿಕೊಂಡ ಝೀ ಗ್ರೂಪ್‌ನ ಸುಭಾಷ್ ಚಂದ್ರರಿಗೆ ಆದದ್ದೂ ಅದೇ. ಆಗಲೇ ಅವರಿಗೆ ಹೊಳೆದದ್ದು ಬಿಸಿಸಿಐಗೆ ಪರ್ಯಾಯ ಕ್ರಿಕೆಟ್ ಸಂಸ್ಥೆ ರಚಿಸುವ ಆಲೋಚನೆ. ಹಿರಿಯ ಕ್ರಿಕೆಟಿಗರನ್ನು ಸಂಪರ್ಕಿಸಿ ಸಂಸ್ಥೆ ಸ್ಥಾಪಿಸಿತು. ಭಾರತಕ್ಕೆ ವಿಶ್ವಕಪ್ ಕಿರೀಟ ತಂದುಕೊಟ್ಟ ಕಪಿಲ್‌ದೇವ್‌ಗೆ ಐಸಿಎಲ್‌ನ ಸಾರಥ್ಯದ ಗೌರವ.

ಪ್ರೀಮಿಯರ್ ಲೀಗ್ ಎಂಬ ಪರ್ಯಾಯ

ಇಷ್ಟೆಲ್ಲಾ ಆಗುವಾಗ ಬಿಸಿಸಿಐ ಕೈ ಕಟ್ಟಿ ಕೂರಲಿಲ್ಲ. ತನ್ನ ಆದಾಯಕ್ಕೆ ಚೆಕ್‌ಡ್ಯಾಂ ಕಟ್ಟಿದ ಐಸಿಎಲ್ ವಿರುದ್ಧ ಪ್ರತಿತಂತ್ರ ರೂಪಿಸಿತು. ಲೀಗ್ ಸೇರಿದಂತೆ ಕ್ರಿಕೆಟಿಗರಿಗೆ, ಎಚ್ಚರಿಕೆ ನೀಡಿತು. ಸಂಭಾವನೆ ಪಿಂಚಣಿಯಲ್ಲಿ ಕಡಿತ ಮಾಡುವ ಬೆದರಿಕೆಯನ್ನು ಹಾಕಿತು. ಆದರೂ ಹಣದ ಆಸೆ ಹಾಗೂ ದೇಸಿ ಕ್ರಿಕೆಟ್‌ನಲ್ಲಿ ಭವಿಷ್ಯವಿಲ್ಲದೆ ಕಂಗೆಟ್ಟು ಹಲವರು ಲೀಗ್ ಸೇರಿದರು. ವಾನ್, ಲಾರಾ ಸೇರಿದಂತೆ ವಿಶ್ವ ಕ್ರಿಕೆಟ್ ರಂಗದ ದಿಗ್ಗಜರೂ ಲೀಗ್ ಸೇರುವ ಸುದ್ದಿ ಬಿಸಿಸಿಐ ಪಾಲಿಗೆ ಕಹಿಯಾಯಿತು.

ಇನ್ನಷ್ಟು ಅಪಾಯ ತಪ್ಪಿಸಲು ಕ್ರಿಕೆಟ್ ಲೀಗೊಂದನ್ನು ಸ್ಥಾಪಿಸುವುದಾಗಿ ಅದು ಘೋಷಿಸಿತು. ಪ್ರೀಮಿಯರ್ ಲೀಗ್ ಎಂಬ ಸಂಸ್ಥೆ ಹುಟ್ಟು ಹಾಕಿತು. ಹಿಂದಿನಿಂದಲೂ ಕಪಿಲ್‌ಗೆ ಎದುರಾಗಿ ಬೆಳೆದ ಗವಾಸ್ಕರ ಅವರನ್ನೇ ಲೀಗ್‌ಗೆ ಮುಖ್ಯಸ್ಥರನ್ನಾಗಿ ಮಾಡಲಾಯಿತು. ಈ ಮೂಲಕ ಕ್ರಿಕೆಟ್ ರಂಗದಲ್ಲಿ ಹೊಸ ಬೆಳವಣಿಗೆಗೆ ನಾಂದಿ ಹಾಡಿತು.



ಇಂಡಿಯನ್ ಕ್ರಿಕೆಟ್ ಲೀಗ್ ಹಾಗೂ ಪ್ರೀಮಿಯರ್ ಲೀಗ್ ಬದಲಾದ ಕ್ರಿಕೆಟ್‌ನ ಸಂಕೇತಗಳು. **ಒಂದು ಆಟವಾಗಿ, ಕ್ರಿಕೆಟಿಗರ ಮಧ್ಯೆ, ದೇಶ ದೇಶಗಳ ಮಧ್ಯೆ ಮಧುರ ಬಾಂಧವ್ಯ ಕಾಪಾಡಬೇಕಿದ್ದ, ಪ್ರೀತಿ ಸ್ನೇಹಗಳ ಸಂಕೇತವಾಗಬೇಕಿದ್ದ ಕ್ರಿಕೆಟ್ ಹುಚ್ಚು ಹಣದ ಹೊಳೆಯಲ್ಲಿ ಹರಿದು ಹೋಗುತ್ತಿರುವುದು ದುರಂತ.**

ತಮ್ಮ ನಿತ್ಯದ ಕೆಲಸವನ್ನು ಮರೆತು ದಿನಗಟ್ಟಲೆ ಟಿ.ವಿ.ನೋಡುತ್ತಿರುವ ಯುವ ಜನರು ಇನ್ನಾದರೂ ಈ ಮೋಸದ ಜಾಲಕ್ಕೆ ಬೀಳುವುದು ತಪ್ಪಲಿ.

ಸಿಮ್ಸಿ

ದೇವನೂರು ಸಂದರ್ಶನ......

ಪುಟ 11 ರಿಂದ

ಬಹಳಷ್ಟು ದುಡ್ಡು ಮಾಡಿಕೊಳ್ಳಬಹುದು. ಆದರೆ ಬಿಜೆಪಿಯವರಿಗೆ ಬರೀ ದುಡ್ಡಿನ ದಾಹ ಮಾತ್ರವಲ್ಲ. ಅವರಿಗೆ ರಕ್ತದ ದಾಹವೂ ಇದೆ. ಜನ ಜನಗಳ ನಡುವೆ ಜಗಳ ದ್ವೇಷವೇ ಅವರ ಬಂಡವಾಳ, ದ್ವೇಷ ಇರುವವರೆಗೂ ಅವರ ಅಸ್ತಿತ್ವ ಇರುತ್ತದೆ. ಆದ್ದರಿಂದಲೇ ದ್ವೇಷ ಸದಾ ಇರುವಂತೆ ನೋಡಿಕೊಳ್ಳುತ್ತಾರೆ.

ಜ: ವಿರೋಧ ಪಕ್ಷವಾಗಿ ಕಾಂಗ್ರೆಸ್ ವಹಿಸುತ್ತಿರುವ ಪಾತ್ರದ ಬಗ್ಗೆ ಏನನ್ನಿಸುತ್ತದೆ?

ದೇ: ಕರ್ನಾಟಕದಲ್ಲಿ ವಿರೋಧ ಪಕ್ಷವೆಂಬುದು ಇಲ್ಲ. ಅದರ ಗುಣಗಳಾದರೂ ಇರಬೇಕಲ್ಲ. ನಡೆ ನುಡಿ, ಉಣ್ಣುವುದರಲ್ಲಿ, ಮಲಗುವುದರಲ್ಲಿ ಎಲ್ಲಾ ರೂಲಿಂಗ್ ಬಿಹೇವಿಯರ್ (ಆಳುವ ಸ್ವಭಾವ) ಆಡಳಿತ ಪಕ್ಷದ ನಡಾವಳಿಯೇ ಅದಕ್ಕೂ ಇದೆ.

ಜ: ಅವರ ನೀತಿಗಳು ಒಂದೇ ಥರಹ ಎನ್ನುತ್ತೀರಾ?

ದೇ: ಬಿಜೆಪಿ ಅಣು ಒಪ್ಪಂದವನ್ನು ವಿರೋಧಿಸುತ್ತಿದೆ. ಆದರೆ ಅವರು ಅಧಿಕಾರದಲ್ಲಿದ್ದರೆ ಏನೂ ಮಾಡುತ್ತಿದ್ದರು ಎಂದು ಯಾರಿಗೆ ಗೊತ್ತು ಅವರು ಹಿಂದೆ ಏನು ಮಾಡಿದರು.

ಜ: ದಲಿತರ ಜೀವನ ಸ್ಥಿತಿ, ಎದುರಿಸುತ್ತಿರುವ ಪ್ರಶ್ನೆಗಳು, ಚಳುವಳಿಯ ಮುಂದಿನ ಹಾದಿ ಹೇಗೆ ಕಂಡುಕೊಳ್ಳುವುದು.

ದೇ: ಗೊತ್ತಿದ್ದರೆ, ಶಾರ್ಟ್ ಮಾಡಿ ಬಿಡುತ್ತಿದ್ದೆ.


ಜ: ಬೇಜಾರಾ?

ದೇ: ಬೇಜಾರಿಲ್ಲಾ. ಒಂದು ಸುತ್ತು ಹಾಕಿ ಸುಸ್ತಾಗಿದೆ. ಜಡತ್ವ ಬಂದಿದೆ. ಪೊರೆ ಕಳಚಬೇಕು. ಹೊಸಬರು, ಹೊಸದಾಗಿ ನೋಡಬೇಕು. ಏನಾಗುತ್ತೋ ಗೊತ್ತಿಲ್ಲ.

ಜ: ದೌರ್ಜನ್ಯಗಳು ನಡೆಯುತ್ತಲೇ ಇವೆ?

ದೇ: ಇಲ್ಲಿ ಇನ್ನೊಂದು ಆಗಿದೆ. ಮೊದಲು ಆರಂಭದಲ್ಲಿ ಎಲ್ಲೇ ದೌರ್ಜನ್ಯ ನಡೆದರೂ ರಾಜ್ಯಮಟ್ಟದಲ್ಲಿ ನಾವು ಪ್ರತಿಭಟಿಸುತ್ತಿದ್ದೆವು. 500 ಜನರನ್ನು ಸೇರಿಸಿ ಪ್ರತಿಭಟಿಸುತ್ತಿದ್ದೆವು. ನಮ್ಮಲ್ಲಿರುವ ದುಡ್ಡು, ಎನರ್ಜಿ ಎಲ್ಲಾ ಖರ್ಚು ಮಾಡುತ್ತಿದ್ದೆವು. ಆದರೆ ಈಗ ಅಲ್ಲಿ ದಲಿತ ಚಳುವಳಿ ಇಲ್ಲದಿದ್ದರೂ ಪ್ರತಿಭಟಿಸುವ ಶಕ್ತಿ ಇದೆ. ಜಾಗೃತಿ ಇದೆ. ಇದು ಡಿ.ಎಸ್.ಎಸ್. ನ ಪರೋಕ್ಷ ಪರಿಣಾಮವಾಗಿದೆ.

ಈಗ ಹಲವು ಗುಂಪಾಗಿವೆ. ಮೊದಲ ಈ ಗುಂಪಿನ ಅರ್ಧನೂ ಇರಲಿಲ್ಲ. ಹತ್ತಾರು ಗುಂಪಿನಲ್ಲಿ. ಆದರೆ ನಾವು ರೂಢಿಗಾಗಿ ಮಾಡುತ್ತಿರಲಿಲ್ಲ. ಅಲ್ಲಿ ಎಮೋಷನಲ್ ಚಾರ್ಜ್ ಇತ್ತು. ಭಾವನಾತ್ಮಕ ಅಂತಃಸತ್ವವಿತ್ತು. ಅದೇ ಹೊತ್ತಿನಲ್ಲಿ ನೈತಿಕ ಧ್ವನಿಯಾಗಿತ್ತು. ಈ ಥರದ ಕೊರತೆಯನ್ನು ಮೀರಿ ಮತ್ತೆ ಅಂತಹದನ್ನು ಪಡೆಯುವುದು ಹೇಗೇ?



.ಜ: ಬಂಡಾಯ ಸಾಹಿತ್ಯ ಒಂದು ಆಂದೋಲನವಾಗಿತ್ತು. ದೊಡ್ಡ ಎಚ್ಚರ ಹುಟ್ಟಿಸಿತ್ತು. ಈಗಿನ ಅದರ ಸ್ಥಿತಿ ಬಗ್ಗೆ ಏನನ್ನಿಸುತ್ತದೆ? ಕಾಲದ ಅಗತ್ಯಗಳಿಗೆ ಸ್ಪಂದಿಸುತ್ತಿದೆಯೇ?

ದೇ: ಬೇಸಿಕ್ ಆಗಿ ಕಲೆ ಎಂಬುದು ಇದೆಯಲ್ಲಾ ಅದನ್ನು ಬಹಿರಂಗವಾಗಿ ಮಾತ್ರ ನೋಡುವುದಲ್ಲ. ಅಂತರಂಗ ಬಹಿರಂಗದ ನಡುವಿನ ಸಂವಾದವದು (ಟ್ರಾನ್ಸ್‌ಸ್ಯಾಕ್ಷನ್). ಆಗಲೇ ಬಂಡಾಯ ಅರ್ಥವಾಗುವುದು ಇಲ್ಲವಾದರೆ ಕೇವಲ ಟೀಕಾಕಾರ ಅಥವಾ ವ್ಯಾಖ್ಯಾನಕಾರ ಆಗಿಬಿಡಬಹುದು. ಬಂಡಾಯದ ಒಳಗೆ ಅಂತರಂಗ ಕಾಣುವ ಎಲಿಮೆಂಟು ಪ್ರವೃತ್ತಿ ಕಡಿಮೆಯಾಯಿತು ಅನ್ನಿಸುತ್ತದೆ. ನಾನೂ ಅದರ ಭಾಗ. ಅದಿಲ್ಲದೇ ಕ್ಷೀಣತೆಗೆ ಕಾರಣವಾಯಿತೋ ಏನೋ ಅನಿಸುತ್ತೆ?

ಜ: ಮೊದಲು ಅದರ ಸ್ಪಂದನ.?

ದೇ: ರೈಟಿಂಗ್ ಇದೆಯೆಲ್ಲಾ, ನನ್ನೊಳಗಿನ ಆಶೆ. ತುಡಿತದ ಬಗ್ಗೆಯೇ ಬರೆಯಬೇಕಾಗುತ್ತದೆ. ನಾನು ಬೇರೆಯವರದ್ದಲ್ಲ. ಈ ಬಗೆಗಿನ ಮೋಹದ ಬಗೆಗೆ... ಕಲೆಯನ್ನಾಗಿಸಬೇಕು.

ಜ: ನಮ್ಮ ಜನ ಚಳುವಳಿಗಳ ಸಾಮಾನ್ಯ ಪ್ರಶ್ನೆಗಳು ಏನು?

ದೇ: ಎಲ್ಲಾ ಚಳುವಳಿಗಳೂ ಗ್ಲೋಬಲ್ ವಿಲೇಜ್ ಅಂತಿವಲ್ಲಾ ಅದರ ಬದಲು ಸ್ಥಳೀಯತೆಯೇ ಜಗತ್ತು ಎಂದು ನೋಡಬೇಕು. ಇಲ್ಲವಾದರೆ ಬುಲ್‌ಡೋಜರ್‌ಗೆ ಸಿಕ್ಕಿ ಹಾಕಿ ಕೊಂಡಂಗೆ ಆಗುತ್ತದೆ. ಸುಮ್ನೆ ಗಾಬರಿ ಭೀತಿ ಹೆಚ್ಚಾದರೆ ಅಸಹಾಯಕತೆಯು ಬರುತ್ತದೆ. ಜನಸಮುದಾಯ ತನ್ನದಲ್ಲ. ಸಂಬಂಧವಿಲ್ಲ ಎಂದು ಹೋಗುತ್ತದೆ. ವಿದ್ಯಾರ್ಥಿಗಳ ಚಳುವಳಿ ಹಿಂದೆ ಬಲವಾಗಿತ್ತು. ಅವರು ಈಗ ಹೆಚ್ಚು ಕರಿಯರಿಸ್ಟ್ ಆಗಿಬಿಟ್ಟಿದ್ದಾರೆ. ಯಾವ ಕಡೆ ಸಾಗಬೇಕು ಎಂದು ಸ್ಪಷ್ಟವಿಲ್ಲ. ಒಂದು

ಜ: ಮಾವೋ- ವಾದ ನಕ್ಸಲೀಯರ ಚಳುವಳಿ ಬಗ್ಗೆ ನಿಮಗೇನನ್ನಿಸುತ್ತದೆ ಪ್ರಶ್ನೆಗಳಿಗೆ ಪರಿಹಾರ ಅದೇ ಎನ್ನುತ್ತಾರೆ ಅವರು?

ದೇ: ಎಷ್ಟೇ ಕಷ್ಟವಾದರೂ ಹಿಂಸೆಯನ್ನು ಒಂದು ತತ್ವವನ್ನಾಗಿಸುವುದನ್ನು ಒಪ್ಪೋಕೆ ಆಗದ ಮಾತು. ಉದ್ದೇಶ ಏನೇ ದೊಡ್ಡದಿರಲಿ ಒಬ್ಬ ಕೊಲೆಗಾರನಿಗೆ ತಾನು ಕೊಂದೇ ಎಂಬ ಅಳುಕು ಕಾಡುವಿಕೆಯಾದರೂ ಇರುತ್ತದೆ. ಆದರೆ ತತ್ವದ ಕಾರಣಕ್ಕಾಗಿ ಧರ್ಮಕ್ಕಾಗಿ ಕೊಲ್ಲುವವರಿಗೆ ಅಂತಹ ಯಾವ ಅಳುಕು ಇರುವುದಿಲ್ಲ. ಕೊಂದೆ ಎನಿಸುವುದಿಲ್ಲ. ತಾನು ಮಾಡಿದ್ದೇ ದೊಡ್ಡ ಉದ್ದೇಶಕ್ಕೆ ಎನ್ನುತ್ತಾರೆ. ಅದು ಮನುಷ್ಯತ್ವದ ಗುಣವನ್ನೇ ಕೊಂದು ಬಿಡುತ್ತದೆ. ಕೆಲವು ಸಂದರ್ಭಗಳಲ್ಲಿ ಘರ್ಷಣೆ ಆಗುತ್ತದೆ. ಆಗ ಕೊಲೆಗಳೂ ಆಗಿಬಿಡಬಹುದು. ಅವು ಒಂದು ಪ್ಲಾನ್ ಮಾಡಿ ಮಾಡಿದ್ದಲ್ಲ. ಅದನ್ನು ಅರ್ಥ ಮಾಡಿಕೊಳ್ಳಬಹುದು. ಅದನ್ನೇ ತತ್ವಮಾಡಿಕೊಂಡು ಹೊರಟರೇ. ಅದು ಹಾಗಾದಲ್ಲಿ ದೇವರು ಧರ್ಮವೇ ಇರಬಹುದು. ನಮ್ಮೊಳಗಿನ ಮನುಷ್ಯತ್ವದ ಸ್ಪಂದನೆಗಳು ಕಳೆದುಹೋಗುತ್ತವೆ.

ಸಂದರ್ಶನ ಈಗ ಸಾಕಲ್ಲ ಬಹಳ ದೀರ್ಘವಾಯು' ಎಂದರು ಮಹದೇವ.

ಹೌದು, ಇಷ್ಟು ಹೊತ್ತು ದೇವನೂರು ರವರು ಮಾತನಾಡಿದ್ದೇ ಹೆಚ್ಚು. ಮಿತಭಾಷಿ ಮಹದೇವರವರು 'ಜನಶಕ್ತಿ' ಯ ಮೇಲೆ ಇಷ್ಟು ಪ್ರೀತಿ ಇರಿಸಿ ಮನಬಿಚ್ಚಿ ಮಾತನಾಡಿದರಲ್ಲ. ಅವರಿಗೆ ಥ್ಯಾಂಕ್ಸ್ ಹೇಳಿ ಹೊರಟೆವು. ಪತ್ರಿಕೆ ಬಗ್ಗೆ ಅನಿಸಿಕೆ, ಸಲಹೆ ಹೇಳುತ್ತೇನೆ ಎಂದ ಅವರೊಂದಿಗೆ ಮಾತನ್ನಾಡುತ್ತಲೇ... ಒಡನಾಡಿ ಬಾಲಾಜಿಯೊಂದಿಗೆ....

ಕುಸುಮಬಾಲೆ ರಚಿಸುವಾಗ ಪ್ರೇರಣೆ, ಒತ್ತಾಸೆಗಳು ಏನು?

ದೇ: ನಾನು ಅದಕ್ಕೂ ಮೊದಲು 'ಒಡಲಾಳ' ಬರೆದಿದ್ದೆನಲ್ಲ. ನಾನೂ ಬರೆಯಬಹುದು ಅಂತ ನಂಬಿಕೆ ಬಂತು. ಎರಡು ಮೂರು ಘಟನೆಗಳು ಕಾರಣ. ಎಲ್ಲೋ ಒಂದು ಕಡೆ ಕೊಲೆಯಾಗಿತ್ತು. ಹೀಗೆ ಹೋಗಿದ್ದೆ.. ನೋಡಿ ಹಾಗೇ ಬಂದು ಬಿಟ್ಟೆವು. ಆದರೆ ಅಲ್ಲಿದ್ದ ಒಬ್ಬ ಅಜ್ಜಿ ಹೇಳಿದಳು. 'ನಿನ್ನೆ ಬಂದಿದ್ದರೆ ನೀವು ರಕ್ತದ ಕಲೆಗಳನ್ನು ನೋಡಬಹುದಿತ್ತು' ಎಂದು ರಕ್ತದ ಕಲೆಯನ್ನು ಅಳಿಸಲಾಗುತ್ತಾ ಎಂಬ ಪ್ರಶ್ನೆ ಹಾಗೆ ಮನಸ್ಸಿನಲ್ಲಿ ಉಳ್ದು ಬಿಡ್ತು.

ಜೋಗತೆಮ್ಮರ ಕಥೆ ಅಂತಾ. ಜಾನಪದದಲ್ಲಿ ಬರುತ್ತದಲ್ಲ. ಸಣ್ಣ ಆಗುತ್ತಿರುವ ಮಕ್ಕಳಿಗೆ, ಸೇದು ಹೋಗುತ್ತಿರುವ ಮಕ್ಕಳಿಗೆ ತಿಂಡಿ ತಿನಿಸು ಮಾಡಿ ದಿಗ್ಭ್ರಮೆ ಮಾಡಿ ಅವರೊಳಗೆ ಹಿಡಿದ ಭೂತ ಓಡಿಸುವುದು ಎಂಬ ಆಚರಣೆ ಮನಸ್ಸಿನಲ್ಲಿ ಇತ್ತು.ಆ ಮೂರು ಬ್ಲೆಂಡ್ ಆಗಿ ಕಥೆಯಾಗಿ ಬಂತು.

JANASHAKTHI KANNADA VARA PATRIKE SEPT. 23, 2007 Price : Rs. 5/- No. KARKAN /2006/17926 Postal Reg. No. RNP/KA/BGS/20…

ವಿಲನ್‌ಗಳ ವಿಚಿತ್ರ ಲೋಕ - ವಿಲಕ್ಷಣ ಚಹರೆಗಳು



ಸಿನಿಮಾಗಳು ಸಮಾಜದ ಮೇಲೆ ಭಾರಿ ಪ್ರಭಾವ ಬೀರುವ ಒಂದು ಪರಿಣಾಮಕಾರಿ ಮಾಧ್ಯಮ. ಇದು ಅತ್ಯಂತ ಜನಪ್ರಿಯ ಮಾಧ್ಯಮವೂ ಹೌದು. ಜಗತ್ತಿನಲ್ಲೇ ಅತ್ಯಂತ ಹೆಚ್ಚಿನ ಸಂಖ್ಯೆಯ ಸಿನಿಮಾಗಳನ್ನು ತಯಾರಿಸುವ ದೇಶ ನಮ್ಮದು. ಈ ವಿಷಯದಲ್ಲಿ ನಾವು ಯುರೋಪ್ ದೇಶಗಳನ್ನು ಎಂದೋ ಮೀರಿಸಿ ಬಿಟ್ಟಿದ್ದೇವೆ.

ಸಮಾಜದ ವಾಸ್ತವತೆಯನ್ನು ಬಿಂಬಿಸುವ ಸಾಮಾಜಿಕ ಕಾಳಜಿಯ ಗಂಭೀರ ಸಿನಿಮಾಗಳು ಬಹಳ ಕಡಿಮೆ. ಮನರಂಜನೆ ಹೆಚ್ಚಿನ ಸಿನಿಮಾಗಳ ಘೋಷಿತ ಧ್ಯೇಯ.

ಇಂತಹ ಸಿನಿಮಾಗಳಿಗೆ ಪ್ರೀತಿ, ಪ್ರೇಮ, ಸೇಡು, ಹಾಸ್ಯ, ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಹಲವು ಪರಿಕಲ್ಪನೆಗಳಿವೆ. ಹಲವು ಸಿದ್ಧ ಸೂತ್ರಗಳೂ ಇವೆ. ಈ ಸಿನಿಮಾಗಳ ಹೀರೋ ಕುರಿತಂತೆ ಹಲವು ಸಿದ್ಧ ಕಲ್ಪನೆಗಳಿರುವಂತೆ ಈ ಸಿನಿಮಾಗಳ ವಿಲನ್‌ಗಳ ಕುರಿತು ಸಹ ಹಲವು ಕಲ್ಪನೆಗಳಿವೆ.


ಇಂತಹ ಸಿನಿಮಾಗಳ ವಿಲನ್‌ಗಳದ್ದು ಒಂದು ವಿಚಿತ್ರ ಲೋಕ. ವಿಲನ್‌ಗಳ ಕಲ್ಪನೆ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂದಿದ್ದರೂ ಈ ಎಲ್ಲವುಗಳಿಗೂ ಒಂದು ಸಿದ್ಧ ಸೂತ್ರದ ಎಳೆ ಸಾಮಾನ್ಯವಾಗಿದೆ.

ಎತ್ತರದ ನಿಲುವು, ದೊಡ್ಡ ದೇಹ, ದಪ್ಪ ಮೀಸೆ, ಒರಟು ಮಾತು, ವಿಕಾರ ಮುಖ. ಸಿಗರೇಟು ಸೇದುತ್ತಾ ಹೊಗೆ ಬಿಡುತ್ತಾ ಇರುವುದು ಒಂದು ಬಗೆಯ ವಿಲನ್‌ಗಳ ಪರಿ. ಇಂತಹದವರ ಕೈಯಲ್ಲಿ ಚಾಕು, ಚೂರಿ, ಮಚ್ಚುಗಳೇ, ಸಾಧನ ಸಲಕರಣೆ ಸೂಟು, ಬೂಟು, ಹ್ಯಾಟುಗಳನ್ನು ತೊಟ್ಟ ವಿಲನ್‌ಗಳ ಮಾದರಿ ಮತ್ತೊಂದು, ಸಾಮಾನ್ಯವಾಗಿ ಗನ್ನುಗಳು ಇವರ ಸಾಧನ. ಇವರು ಸಿಗಾರ್‌ನ ಹೊಗೆ ಬಿಡುತ್ತಾರೆ.

ವಿಲನ್‌ಗಳ ವಿಚಿತ್ರ ಲೋಕ

ಬಹುಶಃ 70-80ರ ದಶಕಗಳಲ್ಲಿ ಕಂಡು ಬಂದು ಬಹಳ ಕಾಲ ಮುಂದುವರಿದ ಒಂದು 'ವಿಲನ್' ಮಾದರಿ ಬಹಳ ವಿಚಿತ್ರವಾಗಿದೆ. ಇಲ್ಲಿ ವಿಲನ್‌ಗಳು ತಂಡವಾಗಿರುತ್ತಾರೆ. ಈ ವಿಲನ್ ಗ್ಯಾಂಗ್‌ಗೆ ಒಬ್ಬ ಬಾಸ್ ಇರುತ್ತಾನೆ. ಈ ಬಾಸ್ ಯಾರೆಂಬುದು ಚಲನಚಿತ್ರದ ಕ್ಲೈಮಾಕ್ಸ್‌ವರೆಗೆ ಪ್ರೇಕ್ಷಕರಿಗೆ ತಿಳಿಯುವಂತಿಲ್ಲ. ಚಿತ್ರದ ಕೊನೆಯವರೆಗೆ ಪ್ರೇಕ್ಷಕರಿಗೆ ಕಾಣುವುದು ಬಾಸ್‌ನ ಕಾಲು, ಆತ ಕುಳಿತ ಕುರ್ಚಿ, ಆತನ ಹ್ಯಾಟು, ಇಲ್ಲ ಆತ ಬಿಟ್ಟ ಸಿಗಾರ್‌ನ ಹೊಗೆ. ಇಲ್ಲವೇ ಆತನ ಮಾತುಗಳನ್ನಷ್ಟೇ ಕೇಳಿಸಲಾಗುತ್ತದೆ.

ಇವರ ವಾಸಸ್ಥಾನ ಬಹಳ ನಿಗೂಢ. ಸ್ವರ್ಗ, ನರಕ, ಪಾತಾಳ ಲೋಕಗಳಿದ್ದಂತೆ ಇದೂ ಒಂದು ಪ್ರತ್ಯೇಕ ಲೋಕ. ಇಲ್ಲಿಗೆ ಪ್ರವೇಶ ಸುಲಭವಲ್ಲ. ಈ ಲೋಕದ ಬಾಗಿಲು ತೆರೆದುಕೊಳ್ಳಬೇಕಾದರೆ ಯಾವುದೋ ಪಾಳು ದೇಗುಲದೊಳಗಿನ ಶಿವಲಿಂಗವನ್ನು ಹಿಡಿದು ತಿರುಗಿಸಬೇಕು ಅಥವಾ ಅಂಥದ್ದು ಮತ್ತೇನೋ ರಹಸ್ಯಗಳಿರುತ್ತವೆ.



ಈ ನಿಗೂಢ ಜಗದಲ್ಲಿ ಹೀರೋನನ್ನು ಹೀರೋನ ಅಣ್ಣ, ತಮ್ಮ, ತಂಗಿ, ಅಪ್ಪ ಅಥವಾ ಅಮ್ಮನನ್ನೋ ಅಥವಾ ನಾಯಕಿಯನ್ನೋ ಇಲ್ಲಿ ಬಚ್ಚಿಡಲಾಗುತ್ತದೆ.

ಜೈಲ್‌ಗಳಲ್ಲಿ ವಿವಿಧ ಸೆಲ್‌ಗಳಿರುವಂತೆ ಇಲ್ಲಿ ವಿವಿಧ ಸೆಲ್‌ಗಳಿರುತ್ತವೆ. ಆದರೆ ಯಾವ ಜೈಲುಗಳಲ್ಲೂ ಕಾಣದ ಚಿತ್ರ ವಿಚಿತ್ರ ಯಂತ್ರೋಪಕರಣಗಳು ಇದರಲ್ಲಿರುತ್ತವೆ. ಹಲವು ಬಾರಿ ನರ ಮನುಷ್ಯರೆಲ್ಲಾ ಅದೃಶ್ಯರಾಗಿ ಹೀರೋಗಳೊಂದಿಗೆ ಕಾದಾಡಲು ಇಲ್ಲಿ ರೋಬೋಟ್‌ಗಳು, ಯಂತ್ರ ಮಾನವರು ಬರುತ್ತಾರೆ.

ಇಲ್ಲಿ ಹೀರೋಗಳನ್ನು ಅಥವಾ ಅವನ ಕಡೆಯವರನ್ನು ಕೊಲ್ಲಲು ಯತ್ನಿಸುವ ವಿಧಾನವೂ ಬಹಳ ವಿಚಿತ್ರ. ಯಂತ್ರವೊಂದಕ್ಕೆ ಬಿಗಿಯಲಾಗಿರುವ ಹೀರೋ ಅಥವಾ ಅವನ ಕಡೆಯವರನ್ನು ನಿಗದಿತ ಸಮಯಕ್ಕೆ ಸರಿಯಾಗಿ ಯಂತ್ರವೇ ಚಲಿಸಿ ಅವರನ್ನು ಅಪ್ಪಚ್ಚಿ ಮಾಡಲು ಬರುತ್ತದೆ. ಇಲ್ಲವೇ ಯಂತ್ರದಿಂದ ಚೂಪು ಈಟಿಯೋ ಇಲ್ಲ ಸುತ್ತಿಗೆಯಂತಹ ಸಾಧನ ಅವರನ್ನು ಬಡಿಯಲು ನಿಗದಿ ಮಾಡಲಾದ ಸಮಯಕ್ಕೆ ಪ್ರತ್ಯಕ್ಷವಾಗುತ್ತದೆ.

ಒಂದು ಚಿಕ್ಕ ಚಾಕು, ಅಥವಾ ರಿವಾಲ್ವರ್‌ನ ಒಂದೇ ಒಂದು ಗುಂಡಿನಿಂದ ಒಂದೆರಡು ಸೆಕೆಂಡುಗಳಲ್ಲಿ ಮಾಡಿ ಮುಗಿಸಿಬಿಡಬಹುದಾದ ಕೆಲಸಕ್ಕೆ ಎಂಥದ್ದೋ ನೂರೆಂಟು ಯಂತ್ರೋಪಕರಣಗಳನ್ನು ತಯಾರಿ ಮಾಡಿಟ್ಟು ಕೊಳ್ಳುವ ವಿಲನ್-ಬಾಸ್‌ಗಳನ್ನು ಕಂಡು ನಗಬೇಕೋ ಅಳಬೇಕೋ ತಿಳಿಯುವುದಿಲ್ಲ.

ವಿಲನ್ ಲೋಕದ ಈ ಚಕ್ರವ್ಯೂಹವನ್ನು ಬೇಧಿಸಿ ಹೀರೋ ಒಳನುಗ್ಗಿದಾಗ ಅವನನ್ನು ಸೆರೆ ಹಿಡಿಯುವ ವಿಧಾನವೂ ಬಹಳ ಸ್ವಾರಸ್ಯಕರವೇ. ವಿಲನ್ ಗ್ಯಾಂಗ್‌ನವರು ಒಂದು ಗುಂಡಿ ಒತ್ತಿದ ಕೂಡಲೇ ಉಕ್ಕಿನ ಪಂಜರವೊಂದು ಬಿದ್ದು ನಾಯಕ ಅದರಲ್ಲಿ ಸೆರೆಯಾಗುತ್ತಾನೆ. ಅಥವಾ ಒಂದು ಬಟನ್ ಒತ್ತಿದ ಕೂಡಲೇ ನಿಂತ ನಾಯಕ ಜಾಗದಲ್ಲೇ ಕುಸಿದು ಇನ್ನು ಕೆಳ ಅಂತಸ್ತಿನ ಕೋಣೆಗೆ ಹೋಗಿ ಬಿದ್ದಿರುತ್ತಾನೆ.

ಇಂತಹ ಎಲ್ಲ ಚಕ್ರವ್ಯೂಹವನ್ನು ನಾಯಕ ಕೊನೆಗೆ ಹೇಗೋ ಬೇಧಿಸಿ ಬರುತ್ತಾನೆ ಎಂಬುದು ಬೇರೆ ಮಾತು. ಅದರಲ್ಲೂ ಎಷ್ಟೆಷ್ಟೋ ಹಾಸ್ಯಾಸ್ಪದ ಘಟನಾವಳಿಗಳೇ ತುಂಬಿರುತ್ತವೆ.

ನಾಯಕ ಆತನ ಸಹಚರರಿಗೆ ತಲೆಗೆ- ಎದೆಗೆ ಬಂದೂಕಿನ ಗುರಿ ಇಟ್ಟಿದ್ದರೂ ಹೇಗೋ ಉಪಾಯ ಮಾಡಿ ಅವರು ತಪ್ಪಿಸಿಕೊಂಡೇ ತಪ್ಪಿಸಿಕೊಳ್ಳುತ್ತಾರೆ. ಇದೊಂದು ಸಿದ್ಧ ಸೂತ್ರ. ಈ ಮಧ್ಯ ಅದೆಷ್ಟು ಬಾರಿ ಬಂದೂಕು ಎರಡು ಗುಂಪುಗಳು ನಡುವೆ ಕೈಬದಲಿಸುತ್ತದೋ ಲೆಕ್ಕವಿಲ್ಲ. ನಮ್ಮ ನೂರಾರು ಸಿನಿಮಾಗಳಲ್ಲಿ ಕಂಡು ಬರುವ ಇಂತಹ ಒಂದು ವಿಚಿತ್ರ ಲೋಕ ನಿಜಕ್ಕೂ ಜಗತ್ತಿನ ಎಲ್ಲಿಯಾದರೂ ಇರಬಹುದೇ? ನಂಬಿಕೆ ಬರುತ್ತಿಲ್ಲ.

ವಿಚಿತ್ರ ನಡವಳಿಕೆಗಳು

ಇದು ಸ್ವಲ್ಪ ಇತ್ತೀಚಿನ ಪ್ರವೃತ್ತಿ ವಿಲನ್‌ಗೆ ಉಗ್ಗು (ತೊದಲು), ಇಲ್ಲವೇ ಆತ ಕೀರಲು ಧ್ವನಿಯಲ್ಲಿ ಮಾತನಾಡುತ್ತಾನೆ. ವಿಕೃತ ವಿಚಿತ್ರ, ವಿಲಕ್ಷಣ ನಡವಳಿಕೆಗಳೇ ಅವನ ಐಡೆಂಟಿಟಿ. ಇಂತಹ ವಿಚಾರಗಳಲ್ಲಿ ಹೊಸತನ್ನು ವೈವಿಧ್ಯತೆ… ತೋರಿಸಲು ನಮ್ಮ ಸಿನಿಮಾ ಮಂದಿ ಏನೇ… ಕಸರತ್ತುಗಳನ್ನು ಮಾಡುತ್ತಾರೆ. ಇವ… ದುಷ್ಪರಿಣಾಮ ಸಮಾಜದ ಮೇಲೆ ಇಲ್ಲದಿ…

ಸಿನಿಮಾ-ಜೀವನ ಗಾವುದ… ದೂರದ ವಾಸ್ತವ

ಸಿನಿಮಾಗಳ 'ವಿಲನ್' ಕಲ್ಪನೆ… ಜೀವನದ ವಾಸ್ತವಕ್ಕೂ ಅಜಗಜಾಂತ… ತೀರಾ ಪಾತಕಿಗಳೆನಿಸಿಕೊಂಡವರು, ತಮ… ಆದ ಪ್ರತ್ಯೇಕ ಗುಂಪು, … ರೂಪಿಸಿಕೊಳ್ಳುವುದು ನಿಜವಾದರೂ … ಸಿನಿಮಾಗಳಲ್ಲಿ ಚಿತ್ರಣಕ್ಕಿಂತ ತೀ… ಭಿನ್ನವಾಗಿರುತ್ತದೆ.

ಅಸಲಿಗೆ ಈ ಸಕಲ ಸದ್ಗುಣ… ಮೊತ್ತವಾದ ಹೀರೋ ಹಾಗೂ ಸ… ದುರ್ಗುಣಗಳ ಮೊತ್ತವಾದ ವಿಲನ್… ಕಲ್ಪನೆಯೇ ದೋಷಪೂರಿತ. ಸಾಮಾನ್ಯ… ಮನುಷ್ಯನ ಗುಣ ಸ್ವಭಾವಗಳಲ್ಲಿ ಒಳ್ಳೆ… ಕೊಟ್ಟ ಗುಣಗಳೆಲ್ಲವೂ ಇವೆ. ಇವು… ಪ್ರಮಾಣದಲ್ಲಿ ವ್ಯತ್ಯಾಸಗಳಾಗಬಹುದು… ಮತ್ತು ಈ ಒಳ್ಳೆಯದು ಕೆಟ್ಟದ್ದನ್ನು ನೋಡು… ದೃಷ್ಟಿಕೋನವೂ ಮುಖ್ಯವಾದುದು.

ಮಕ್ಕಳಿಗೆ ಪ್ರೀತಿ ಪಾತ್ರವಾ… ತಂದೆಯಾಗಿರುವ ವ್ಯಕ್ತಿಯೊಬ್ಬ … ಸಮಯದಲ್ಲಿ ಕಾರ್ಖಾನೆಯ ಮಾಲೀಕ… ಕಾರ್ಮಿಕರ ಪಾಲಿಗೆ 'ವಿಲನ್' ಆಗಿರಬಹು…

ತಮ್ಮಂದಿರು, ನಾದಿನಿಯರು… ತ್ಯಾಗಮಯಿ, ಕರುಣಾಮಯಿಯಾಗಿ ಕ… ಬರುತ್ತಿರುವ 'ಅಣ್ಣ', 'ಯಜಮಾನ' … ಹೊಲದಲ್ಲಿ ದುಡಿಯುವ ಕೂಲಿಗಳ ಪಾ… 'ವಿಲನ್' ಆಗಿ ವರ್ತಿಸುತ್ತಿರಬಹುದು.

ಸಿನಿಮಾದಲ್ಲಿ ಭ್ರಷ್ಟರನ್ನು ಹಿಡಿದು ಚಚ್ಚ… ಹೀರೋನನ್ನು ಮೆಚ್ಚಿ ಚಪ್ಪಾಳೆ ತಟ್ಟ… ಮನುಷ್ಯನೊಬ್ಬ ತಾನು ತನ್ನ ವೈಯ… ಜೀವನದಲ್ಲಿ ಭ್ರಷ್ಟ ವ್ಯವಸ್ಥೆಯ ಭಾಗವ… ತಾನು ಪಾಲು ಪಡೆಯುತ್ತಿರಬಹುದು. ಜೀವನದಲ್ಲಿ ಇವೆಲ್ಲವೂ ಸಾಧ್ಯವಿದೆ.

ಇಂತಹ ಸಂಕೀರ್ಣತೆಗಳನ್ನು ತೆರೆದ… ನಮ್ಮ ಬಗ್ಗೆ ನಾವು ಯೋಚಿಸುವ… ಮಾಡುವ, ನಮ್ಮನ್ನು ಚಿಂತನೆಗೆ ಹಚ… ಸಿನಿಮಾಗಳು ಬೇಕೋ, ಎಲ್ಲವನ್ನು ಸರಳೀಕ… ಇಬ್ಬಾಗಿಸಿ, ಉತ್ಪ್ರೇಕ್ಷಿಸಿದ ಮಸಾಲಾ ಚಿತ್ರ… ಬೇಕೋ. ಆಯ್ಕೆ ಪ್ರೇಕ್ಷಕರ ಅಭಿರುಚಿಯ… ಅವಲಂಬಿಸಿದೆ.

'ಹಾಕಿ' - ಬಾಡಿದ್ದ ಗಿಡ ಮತ್ತೆ ಚಿಗುರಿದೆ

ಭಾರತದ ರಾಷ್ಟ್ರೀಯ ಕ್ರೀಡೆ ಹಾಕಿಗೆ ಮತ್ತೆ ಜೀವ ಕಳೆ ಬಂದಿದೆ. ಕಳೆದ ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಏಷ್ಯಾ ಹಾಕಿಯ ಪ್ರಬಲ ರಾಷ್ಟ್ರಗಳಲ್ಲಿ ಒಂದಾದ ದಕ್ಷಿಣ ಕೊರಿಯಾ ವಿರುದ್ಧ ಭಾರತ ಜಯಭೇರಿ ಸಾಧಿಸಿ ಏಷ್ಯಾಕಪ್ ಹಾಕಿ ಟ್ರೋಫಿಯನ್ನು ತನ್ನದಾಗಿಸಿಕೊಂಡಿದ್ದೆ ಇದಕ್ಕೆ ಸಾಕ್ಷಿ.

ಚೆನ್ನೈನ ಮೇಯರ್ ರಾಧಾಕೃಷ್ಣನ್ ಕ್ರೀಡಾಂಗಣದಲ್ಲಿ ನೆರೆದಿದ್ದ ಜನರಿಗೆ ರಸದೌತಣ ನೀಡಲು ಭಾರತ ದಕ್ಷಿಣ ಕೊರಿಯಾ ತಂಡಗಳು ಸಜ್ಜಾಗಿದವು. ಎಲ್ಲರಲ್ಲೂ ಕುತೂಹಲ, ಆಸಕ್ತಿ ಹಾಗೂ ಮೂಡಿಸಿತ್ತು. ಭಾರತದ ಹಾಕಿ ತಂಡ ಗೆಲುವು ಸಾಧಿಸಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಈ ಬಾರಿಯು 7ನೆ ಬಿಎಸ್‌ಎನ್‌ಎಲ್ ಏಷ್ಯಾಕಪ್ ಹಾಕಿ ಟೂರ್ನಿಯ ಆತಿಥ್ಯವನ್ನು ಭಾರತವೇ ವಹಿಸಿತ್ತು. ಈ ಟೂರ್ನಿಯ ಉದ್ದಕ್ಕೂ ಭಾರತ ಹಾಕಿ ತಂಡ ಉತ್ತಮ ಗುಣಮಟ್ಟದ ಆಟವನ್ನು ಆಡಿ ಫೈನಲ್‌ಗೆ ಪ್ರವೇಶಿಸಿತ್ತು. ಅತ್ತಕಡೆ ಮಿಂಚಿನ ಹಾಗೂ ವೇಗದಾಟಕ್ಕೆ ಹೆಸರಾದ ದ.ಕೊರಿಯಾ ತನ್ನ ಆಕ್ರಮಣಕಾರಿ ಆಟದಿಂದ ಫೈನಲ್‌ಗೆ ತಲುಪಿತ್ತು.

ಈ ಎರಡೂ ತಂಡಗಳು ಫೈನಲ್ ಸ್ಪರ್ಧೆಯಲ್ಲಿ ಉತ್ತಮ ಹೋರಾಟವನ್ನು ನಡೆಸಿದವು. ಆಟದಲ್ಲಿ ಉಭಯ ತಂಡಗಳ ಆಟಗಾರರು ಗೆಲುವಿಗಾಗಿ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಉತ್ತಮ ಆಟವನ್ನು ಪ್ರದರ್ಶಿಸಿದರು.

ಈ ಸಂದರ್ಭದಲ್ಲಿ ಭಾರತದ ಅನುಭವಿ ಆಟಗಾರರಾದ ಪ್ರಬ್‌ಜೊತ್ ಸಿಂಗ್, (2 ಗೋಲು), ರಾಜ್‌ಪಾಲ್‌ಸಿಂಗ್ (2 ಗೋಲು) ಶಿವೇಂದರ್ ಸಿಂಗ್ ಮತ್ತು ಎಸ್.ವಿ. ಸುನೀಲ್ ತಲಾ ಒಂದು ಗೋಲುಗಳಿಸಿ ಗೆಲುವಿಗೆ ಸಹಕಾರಿಯಾದರು. ತುಷಾರ್ ಖಾಂಡೇಕರ್, ಗೋಲ್ ಕೀಪರ್ ಬಲ್‌ಜಿತ್‌ಸಿಂಗ್ ಸೇರಿದಂತೆ ತಂಡದ ಎಲ್ಲಾ ಆಟಗಾರರು ಅತ್ಯುತ್ತಮ ಸಾಮರ್ಥ್ಯ ತೋರಿ ತಂಡದ ಗೆಲುವಿಗೆ ಕಾರಣರಾದರು. ಈ ವಿಜಯಕ್ಕೆ ಹಾಕಿ ಕೋಚ್ ಜೋಕಿಮ್ ಕರ್ವಾಲೊ ಶ್ರಮ ಹಾಗೂ ತಂತ್ರಗಾರಿಕೆ ಒಟ್ಟಾರೆಯ ಗೆಲುವಿಗೆ ಕಾಣಿಕೆ ನೀಡಿದೆ.

ಹೀಗೆ ಭಾರತ ತಂಡವು ಕೊರಿಯಾ ತಂಡದ ವಿರುದ್ಧ ಆರಂಭದಿಂದಲೂ ಉತ್ತಮ ಹಾಗೂ ಸೊಗಸಾದ ಆಟವನ್ನು ಪ್ರದರ್ಶಿಸುತ್ತಾ ಬಂ… ಉತ್ತಮ ಗೋಲುಗಳನ್ನು ಗಳಿಸುವ ಮ… ಕೊರಿಯಾದ ಆಕ್ರಮಣಕಾರಿ ವೇಗದಾಟಕ್ಕೆ ಕಡಿ… ಹಾಕುವ ಮೂಲಕ ಭಾರತ ಅದ್ಭುತ ಆ… ಪ್ರದರ್ಶಿಸಿತು. ಕೊರಿಯಾ ಭಾರತದ ವಿರು… ಗೋಲುಗಳ ಅಂತರ… ಸೋಲನ್ನೊಪ್ಪಿಕೊಂಡಿತು.



ಹೀಗೆ ಭಾರತ ಹಾಕಿ ತಂಡ ಇಲ್ಲಿ … ಪ್ರೇಕ್ಷಕರಿಗೆ ರಸದೌತಣ ನೀಡುತ್ತಾ, … 2ನೇ ಬಾರಿಗೆ (2003ರಲ್ಲಿ ಇದನ್ನು … 7ನೇ ಏಷ್ಯಾಕಪ್ ಅನ್ನು ಸಮಪಿ… ಇದರಿಂದ ದೇಶದಲ್ಲಿ ಹಾಕಿಗೆ ಮರ… ಬಂದಂತಾಗಿದೆ. ಅರವತ್ತರ ದ… ಭಾರತದ ಹಾಕಿ ವಿಶ್ವದ ಉ… ಶಿಖರದಲ್ಲಿತ್ತು. ಅನಂತರದ ದಿ… ಕುಸಿಯಿತು. ಆದರೆ ಈ ಶತಮ… ಆರಂಭದಲ್ಲಿ 2003ರಲ್ಲಿ ಮೊದಲ… ಏಷ್ಯಾಕಪ್ ಟ್ರೋಫಿ… ಎತ್ತಿಹಿಡಿದಿದೆ.

ಶ್ರೀರಂಗ ನ…

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH